ಬುಧವಾರ, ಜೂನ್ 14, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 164 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ರೋಬಾಟ್‌ಗಳು ಬಾಣಸಿಗರಾಗಿ ನಮ್ಮ ಅಡುಗೆಮನೆಯನ್ನು ಪ್ರವೇಶಿಸುವ ದಿನಗಳು ದೂರವಿಲ್ಲ!



ಆಳ-ಅಗಲ
ಕೋವಿನ್ ಮಾಹಿತಿ ಸೋರಿಕೆ: ಏನು, ಎತ್ತ...

ಜನಾರ್ದನ ರೆಡ್ಡಿ ಸ್ಥಿರಾಸ್ತಿ ಜಪ್ತಿಗೆ ಆದೇಶ 5
ಬಿಪೊರ್‌ಜಾಯ್: 30 ಸಾವಿರ ಜನರ ಸ್ಥಳಾಂತರ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,143 ▲	18,716 ▲	₹61,560 (ಬೆಂಗಳೂರು) ▼	₹74,900 (ಬೆಂಗಳೂರು) ▼	82.25 ▲

ದುರಸ್ತಿ, ನಿರ್ವಹಣೆ ಕಾರ್ಯದ ನೆಪ ● ಅಘೋಷಿತ ಲೋಡ್ ಶೆಡ್ಡಿಂಗ್ ● ಕೃಷಿ ಬಳಕೆಗೂ ಕೊರತೆ

ರಾಜ್ಯದೆಲ್ಲೆಡೆ ವಿದ್ಯುತ್ ಕಣ್ಣಾಮುಚ್ಚಾಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯೂ ಸೇರಿದಂತೆ ರಾಜ್ಯದ ಬಹುತೇಕ ನಗರಗಳು ಮತ್ತು ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ನಿರಂತರ ವ್ಯತ್ಯಯವಾಗುತ್ತಿದೆ. ಕೃಷಿ ಪಂಪ್‌ಸೆಟ್‌ಗಳಿಗೂ ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗುತ್ತಿಲ್ಲ. 'ಲೋಡ್ ಶೆಡ್ಡಿಂಗ್ ಇಲ್ಲ' ಎಂದು ಎಸ್ಕಾಂ ಅಧಿಕಾರಿಗಳು ಸ್ಪಷ್ಟನೆ ನೀಡುತ್ತಿದ್ದಾರಾದರೂ ವಿದ್ಯುತ್ ಕಣ್ಣಾಮುಚ್ಚಾಲೆ ಮಾತ್ರ ಮುಂದುವರಿದಿದೆ.

ಮುಂಗಾರು ವಿಳಂಬವಾಗಿ ತಾಪಮಾನ ಹೆಚ್ಚಾಗಿರುವುದರಿಂದ ವಿದ್ಯುತ್‌ಗೆ ಸಹಜವಾಗಿಯೇ ಬೇಡಿಕೆ ಹೆಚ್ಚಾಗಿದೆ. ಆದರೆ, ಪೂರೈಕೆ ಅನಿಯಮಿತವಾಗಿ ಸ್ಥಗಿತಗೊಳ್ಳುತ್ತಿರುವ ಕಾರಣ ಜನ ಬೇಸತ್ತಿದ್ದಾರೆ. 'ಉತ್ಪಾದನೆಯಲ್ಲಿ ಏನೂ ಕುಸಿತವಾಗಿಲ್ಲ. ಬೇಡಿಕೆಯಷ್ಟು ಪೂರೈಸುತ್ತಿದ್ದೇವೆ. ದುರಸ್ತಿ ಕಾರ್ಯ ಮತ್ತು ನಿರ್ವಹಣೆಗಾಗಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿರಬಹುದು' ಎಂದು ಕೆಪಿಟಿಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಬೆಂಗಳೂರಿನಲ್ಲೇ ಯಾವುದೇ ಮುನ್ಸೂಚನೆಯಿಲ್ಲದೆ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಲಾಗುತ್ತಿದೆ. ಹೀಗೆ ಬೇಕಾಬಿಟ್ಟಿ ವಿದ್ಯುತ್ ಕಡಿತದ ಕುರಿತು ನಗರದ ಹಲವು ಪ್ರದೇಶಗಳ ಜನ ದೂರುತ್ತಿದ್ದಾರೆ. ಆದರೆ, ಅಘೋಷಿತ ಲೋಡ್ ಶೆಡ್ಡಿಂಗ್ ಆಗುತ್ತಿದೆ ಎಂಬುದನ್ನು ಒಪ್ಪಲು ಬೆಸ್ಕಾಂ ಅಧಿಕಾರಿಗಳು ಸಿದ್ಧರಿಲ್ಲ.

'ಲೋಡ್ ಶೆಡ್ಡಿಂಗ್ ಮಾಡಿಲ್ಲ. ಅಂತಹ ಪರಿಸ್ಥಿತಿಯೂ ಇಲ್ಲ. ಚುನಾವಣೆ, ಪರೀಕ್ಷೆ ಕಾರಣಗಳಿಗೆ ನಿರ್ವಹಣೆ ಕಾರ್ಯಗಳನ್ನು ಸ್ಥಗಿತಗೊಳಿಸಲಾಗಿತ್ತು. ಈಗ ಹಲವೆಡೆ ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳನ್ನು ಕೈಗೊಂಡಿದ್ದರಿಂದ ವಿದ್ಯುತ್ ವ್ಯತ್ಯಯವಾಗುತ್ತಿದೆ. ಮಳೆ ಆರಂಭವಾದರೆ ಕೃಷಿ ಪಂಪ್‌ಸೆಟ್ ಸೇರಿದಂತೆ ಗೃಹ ಬಳಕೆಯ ವಿದ್ಯುತ್ ಕಡಿಮೆಯಾಗುತ್ತದೆ. ಇದರಿಂದ ಸಹಜವಾಗಿಯೇ ಬೇಡಿಕೆ ಕುಸಿಯುತ್ತದೆ' ಎಂದು ಬೆಸ್ಕಾಂ ಅಧಿಕಾರಿಗಳು ವಿವರಿಸುತ್ತಾರೆ.


ಈ ಬಾರಿ ಬೇಸಿಗೆ ಬಿಸಿಲು ಹೆಚ್ಚಿದ್ದು, ಸೆಕೆಯಿಂದ ಮಲೆನಾಡ ಜನರೂ ತತ್ತರಿಸಿದ್ದಾರೆ. ಅದರ ನಡುವೆ ವಿದ್ಯುತ್ ಕಡಿತ ಅಸಹನೀಯವಾಗಿಸಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಹಗಲು ಹೊತ್ತು, ಸಂಜೆ, ತಡರಾತ್ರಿ ಹೀಗೆ ಯಾವುದೇ ಮುನ್ಸೂಚನೆ ಇಲ್ಲದೇ ವಿದ್ಯುತ್ ಕಡಿತಗೊಳ್ಳುತ್ತಿದೆ.

ಬಯಲುಸೀಮೆಯ ಚಿತ್ರದುರ್ಗ ಜಿಲ್ಲೆಯಾದ್ಯಂತ ಕಳೆದ 15 ದಿನಗಳಿಂದ ಅನಿಯಮಿತ, ಅಘೋಷಿತ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ಬೆಳಿಗ್ಗೆ 6ರಿಂದ 9 ಗಂಟೆ ಹಾಗೂ ಸಂಜೆ 5ರಿಂದ ರಾತ್ರಿ 10ರವರೆಗೂ ವಿದ್ಯುತ್ ವ್ಯತ್ಯಯ ಸಾಮಾನ್ಯವಾಗಿದೆ.

ಶಾಲೆ-ಕಾಲೇಜು ಆರಂಭವಾಗಿರುವ ಕಾರಣ ಸಕಾಲಕ್ಕೆ ಮಕ್ಕಳಿಗೆ ಉಪಾಹಾರ ಸಿದ್ಧಗೊಳಿಸಲು ಗೃಹಿಣಿಯರಿಗೆ ಸಾಧ್ಯವಾಗುತ್ತಿಲ್ಲ.

5ನೇ ಪುಟ ನೋಡಿ

ಮುಂಗಾರು ವಿಳಂಬದಿಂದಾಗಿ ತಗ್ಗದ ಬೇಡಿಕೆ



ಎಲ್ಲೆಲ್ಲಿ ಸಮಸ್ಯೆ?
- **ಬೆಸ್ಕಾಂ:** ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ರಾಮನಗರ
- **ಮೆಸ್ಕಾಂ:** ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ
- **ಜೆಸ್ಕಾಂ:** ಬೀದರ್, ಕಲಬುರಗಿ, ಕೊಪ್ಪಳ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ

ಎಲ್ಲೆಲ್ಲಿ ಕಡಿಮೆ ಸಮಸ್ಯೆ?
- **ಹೆಸ್ಕಾಂ:** ಧಾರವಾಡ, ಗದಗ, ಹಾವೇರಿ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಉತ್ತರ ಕನ್ನಡ,
- **ಸೆಸ್ಕ್:** ಮೈಸೂರು, ಕೊಡಗು, ಮಂಡ್ಯ, ಹಾಸನ, ಚಾಮರಾಜನಗರ

24 ಕೋಟಿ ಯೂನಿಟ್ — ರಾಜ್ಯದಲ್ಲಿ ಪ್ರತಿದಿನ ಬಳಕೆಯಾಗುತ್ತಿರುವ ವಿದ್ಯುತ್‌ನ ಸರಾಸರಿ ಪ್ರಮಾಣ

20 ಕೋಟಿ ಯೂನಿಟ್ — ಕಳೆದ ವರ್ಷ ಇದೇ ದಿನಗಳಲ್ಲಿ ಪ್ರತಿದಿನ ಬಳಕೆಯಾಗುತ್ತಿದ್ದ ವಿದ್ಯುತ್‌ನ ಸರಾಸರಿ ಪ್ರಮಾಣ

4 ಕೋಟಿ ಯೂನಿಟ್ — ರಾಜ್ಯದಲ್ಲಿ ಪ್ರತಿದಿನ ಬಳಕೆಯಾಗುತ್ತಿರುವ ಹೆಚ್ಚುವರಿ ವಿದ್ಯುತ್‌ನ ಸರಾಸರಿ ಪ್ರಮಾಣ



ಪ್ರತಿದಿನ ವಿದ್ಯುತ್ ಕಡಿತ ಸಾಮಾನ್ಯ. ದಿಢೀರ್ ವಿದ್ಯುತ್ ಕಡಿತದಿಂದ ಕಾರ್ಖಾನೆಯಲ್ಲಿ ಉತ್ಪಾದನೆಯ ಅಂತಿಮ ಹಂತದಲ್ಲಿರುವ ವಿವಿಧ ಉತ್ಪನ್ನಗಳ ತಯಾರಿಕೆಗೆ ತೊಡಕಾಗುತ್ತಿದೆ
ಕೆ.ಎನ್. ನರಸಿಂಹಮೂರ್ತಿ, ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ

ಚಿಕ್ಕಮಗಳೂರು ಜಿಲ್ಲೆಯ ಬಯಲು ಸೀಮೆ ಪ್ರದೇಶದಲ್ಲಿ ಬೆಳೆಗಳಿಗೆ ನೀರು ಹಾಯಿಸಲಾಗದೇ ರೈತರು ಪರದಾಡುತ್ತಿದ್ದಾರೆ. ಕೊಳವೆಬಾವಿಗಳಿದ್ದರೂ ವಿದ್ಯುತ್ ಸಮರ್ಪಕವಾಗಿ ಪೂರೈಕೆಯಾಗದೆ ಬಿತ್ತನೆ ಮಾಡಿರುವ ಬೆಳೆ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ
ಗುರುಶಾಂತಪ್ಪ, ರೈತ ಸಂಘದ ಮುಖಂಡ



ಕಡಲಿನ ಅಬ್ಬರ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲ್ಲೂಕಿನ ಉಚ್ಚಿಲ ಗ್ರಾಮದ ಬಟ್ಟಪ್ಪಾಡಿಯಲ್ಲಿ ಕಡಲ್ಕೊರೆತದಿಂದ ಕಟ್ಟಡಗಳು ಸಮುದ್ರ ಪಾಲಾಗಿವೆ – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್.

ಟ್ವಿಟರ್ ಖಾತೆಗಳ ನಿರ್ಬಂಧಕ್ಕೆ ಒತ್ತಡ: ಡೋರ್ಸಿ ಆರೋಪ

ಬಿಜೆಪಿ–ವಿಪಕ್ಷಗಳ ವಾಗ್ಯುದ್ಧ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: '2021ರಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಕೆಲವರ ಖಾತೆಗಳ ಮೇಲೆ ನಿರ್ಬಂಧ ಹೇರಬೇಕು. ಇಲ್ಲದಿದ್ದರೆ ಭಾರತದಲ್ಲಿ ಕಂಪನಿಯ ಕಾರ್ಯಾಚರಣೆ ಸ್ಥಗಿತಗೊಳಿಸುವುದಾಗಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬೆದರಿಕೆ ಒಡ್ಡಿತ್ತು' ಎಂಬ ಟ್ವಿಟರ್‌ನ ಮಾಜಿ ಸಿಇಒ ಜಾಕ್ ಡೋರ್ಸಿ ಅವರ ಆರೋಪಗಳು, ಆಡಳಿತಾರೂಢ ಬಿಜೆಪಿ ಹಾಗೂ ವಿರೋಧ ಪಕ್ಷಗಳ ನಡುವೆ ಮಂಗಳವಾರ ವಾಗ್ಯುದ್ಧಕ್ಕೆ ಕಾರಣವಾಯಿತು.

11ನೇ ಪುಟ ನೋಡಿ

ರೈತರ ಪ್ರತಿಭಟನೆಗೆ ಹೆಚ್ಚು ಪ್ರಚಾರ ನೀಡಿದವರ ಖಾತೆಯನ್ನು ನಿರ್ಬಂಧಿಸಲಾಗುತ್ತಿತ್ತು. ಕೆಲವರ ಟ್ವಿಟರ್ ಖಾತೆಗಳ ಮೇಲಿನ ನಿರ್ಬಂಧ ಈಗಲೂ ಮುಂದುವರಿದಿದೆ
ರಾಕೇಶ್ ಟಿಕಾಯತ್
ಬಿಕೆಯು ನಾಯಕ

ಚುನಾವಣೆ ವೇಳೆ ಪ್ರಜಾತಂತ್ರ ವ್ಯವಸ್ಥೆಯನ್ನು ಕಲುಷಿತಗೊಳಿಸುವ ಅನೇಕ ವಿದೇಶಿ ಶಕ್ತಿಗಳು ಸಕ್ರಿಯವಾಗುತ್ತವೆ. ಇಂಥ ಪ್ರಯತ್ನಗಳು ಈ ಹಿಂದೆ ವಿಫಲವಾಗಿವೆ
ಅನುರಾಗ್ ಠಾಕೂರ್
ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ

'ಕೈ–ಬಿಜೆಪಿ ನಾಯಕರ ಹೊಂದಾಣಿಕೆ'

ಪ್ರಜಾವಾಣಿ ವಾರ್ತೆ




ಮೈಸೂರು: 'ಕಾಂಗ್ರೆಸ್–ಬಿಜೆಪಿಯ ಹಿರಿಯ ನಾಯಕರೆಲ್ಲ ಹೊಂದಾಣಿಕೆ ರಾಜಕಾರಣ ಮಾಡಿಕೊಂಡಿದ್ದಾರೆಯೇ ಎಂಬ ಅನುಮಾನ ಮೂಡಿದ್ದು, ಬಿಜೆಪಿ ಸರ್ಕಾರದ ಮೇಲಿನ ಎಲ್ಲ ಆರೋಪಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತನಿಖೆಗೆ ಆದೇಶಿಸಬೇಕು' ಎಂದು ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಆಗ್ರಹಿಸಿದರು.

ಮಂಗಳವಾರ ನಗರದ ಕೆ.ಆರ್. ಆಸ್ಪತ್ರೆಯಲ್ಲಿ ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ನಾವು (ಬಿಜೆಪಿ) ಅಧಿಕಾರದಲ್ಲಿ ಇದ್ದಾಗ ಸಿದ್ದರಾಮಯ್ಯ–ಡಿ.ಕೆ.ಶಿವಕುಮಾರ್ ಏನಾದರೂ ಮಾತನಾಡಿದರೆ ಅರ್ಕಾವತಿ ಹಗರಣ, ರೀಡೂ, ಡಿನೋಟಿಫಿಕೇಶನ್ ಎಂದು ಹೆದರಿಸಿದ್ದೇ ಆಯಿತು. ಆದರೆ ಒಂದು ದಿನವೂ ಕೆಂಪಣ್ಣ ಆಯೋಗದ ವರದಿ, ಅರ್ಕಾವತಿ ಹಗರಣದ ತನಿಖೆ ಮಾಡಲಿಲ್ಲ. ಚುನಾವಣೆ ಹತ್ತಿರಕ್ಕೆ ಬರುತ್ತಿದ್ದಂತೆಯೇ ಕಾಂಗ್ರೆಸ್ ಪಕ್ಷವು ಬಿಟ್ ಕಾಯಿನ್, ಶೇ 40 ಕಮಿಷನ್, ಪಿಎಸ್‌ಐ ಹಗರಣ ಎಂದು ದೂರಿತು. ಈಗ ಅವರದ್ದೇ ಸರ್ಕಾರ ಇದೆ. ಈ ಎಲ್ಲ ಆರೋಪಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಹಾಗೆ ಮಾಡಿದರೆ ಸಿದ್ದರಾಮಯ್ಯ ಅವರ ಪಾದಪೂಜೆ ಮಾಡುತ್ತೇನೆ' ಎಂದರು.

ಅವರ ಹೇಳಿಕೆಗೆ ಚಾಮರಾಜನಗರದಲ್ಲಿ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, 'ಪ್ರತಾಪ ಸಿಂಹ ಹೇಳಿಕೆಗೆ ಮಾನ್ಯತೆ, ಗಾಂಭೀರ್ಯ, ತೂಕ, ಅರ್ಥವಿದೆಯೇ? ಅರ್ಥರಹಿತ ಮಾತುಗಳಿಗೆ ಪ್ರತಿಕ್ರಿಯೆ ಅಗತ್ಯವಿಲ್ಲ. ಹೊಂದಾಣಿಕೆಯ ಬಗ್ಗೆ ಗೊತ್ತಿಲ್ಲ. ಅದನ್ನು ಮಾಡಿಕೊಂಡವರು ಹೇಳಬೇಕು' ಎಂದರು.

'ಹೊಸಬರಿಗೆ ಟಿಕೆಟ್ ನೀಡಲು ಹೇಳಿದವರನ್ನು ನೇಣಿಗೆ ಹಾಕಿ'

ವಿಜಯಪುರ: 'ಈ ಸಲದ ವಿಧಾನಸಭಾ ಚುನಾವಣೆಗೆ ಬಿಜೆಪಿಯಲ್ಲಿ ಹೊಸಬರಿಗೆ ಟಿಕೆಟ್ ಕೊಡಿ ಎಂದು ಯಾರು ಐಡಿಯಾ ಕೊಟ್ಟಿದ್ದಾರೋ ಗೊತ್ತಿಲ್ಲ. ಅವರನ್ನು ನೇಣಿಗೆ ಬೇಕಾದರೂ ಹಾಕಿ, ಕಾಲನ್ನಾದರೂ ಕಡಿಯಿರಿ' ಎಂದು ಸಂಸದ ರಮೇಶ ಜಿಗಜಿಣಗಿ ಅಸಮಾಧಾನ ವ್ಯಕ್ತಪಡಿಸಿದರು.



'ಈ ಚುನಾವಣೆಯಲ್ಲಿ ಬಿಜೆಪಿ 70ಕ್ಕೂ ಹೆಚ್ಚು ಮಂದಿ ಹೊಸಬರಿಗೆ ಟಿಕೆಟ್ ನೀಡಿತ್ತು. ಅದರಲ್ಲಿ ಗೆದ್ದವರು ಬೆರಳೆಣಿಕೆಯಷ್ಟು ಮಂದಿ. ಹಿರಿಯರಿಗೆ ಟಿಕೆಟ್ ನೀಡಿದ್ದರೆ, ಎಲ್ಲರೂ ಗೆಲ್ಲುತ್ತಿದ್ದರು. 130ಕ್ಕೂ ಹೆಚ್ಚು ಸ್ಥಾನ ಗೆದ್ದು ಬಿಜೆಪಿ ಬಹುಮತ ಪಡೆಯುತ್ತಿತ್ತು' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು. 'ಕಾಂಗ್ರೆಸ್‌ನ ಈ ಗ್ಯಾರಂಟಿಗಳು ಲೋಕಸಭೆ ಚುನಾವಣೆಗೆ ಯಾವ ಪರಿಣಾಮವೂ ಬೀರುವುದಿಲ್ಲ. ಕಾಂಗ್ರೆಸ್‌ನಲ್ಲಿ ನಾಯಕತ್ವವೇ ಇಲ್ಲ. ಆ ಹುಡುಗ, ಆ ಹುಡುಗಿ ಅವರೇನು ನಾಯಕರೇ?' ಎಂದು ಪರೋಕ್ಷವಾಗಿ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಕುರಿತು ವ್ಯಂಗ್ಯವಾಡಿದರು.

'ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಆಗುವುದು ನಿಶ್ಚಿತ. ದಲಿತ ಸಮುದಾಯ ಜಾಗೃತವಾಗುತ್ತಿದೆ. ಭವಿಷ್ಯದಲ್ಲಿ ದಲಿತ ಸಿಎಂ ಆಗುವುದು ಸೂರ್ಯಚಂದ್ರ ಇರುವಷ್ಟೇ ಸತ್ಯ' ಎಂದರು.

ಪ್ರಕೃತಿ ವಿಕೋಪ: ಪರಿಹಾರ ಹೆಚ್ಚಳಕ್ಕೆ ರಾಜ್ಯ ಒತ್ತಡ

ನವದೆಹಲಿ: ಪ್ರಕೃತಿ ವಿಕೋಪದ ಸಂದರ್ಭದಲ್ಲಾಗುವ ಹಾನಿಗೆ ಈಗ ನೀಡುತ್ತಿರುವ ಪರಿಹಾರ ಮೊತ್ತ ಭಾರಿ ಕಡಿಮೆ ಇದ್ದು, ಅದನ್ನು ದುಪ್ಪಟ್ಟು ಮಾಡಬೇಕು ಎಂದು ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸಿದೆ. 11

'ಸಂಪುಟದಲ್ಲಿ ಎನ್‌ಪಿಎಸ್ ಚರ್ಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೆ ಸಂಬಂಧಿಸಿದಂತೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಬಜೆಟ್‌ನಲ್ಲಿ ಘೋಷಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಹಳೆ ಪಿಂಚಣಿ ಯೋಜನೆ ಜಾರಿಗೊಳಿಸುವಂತೆ ಒತ್ತಾಯಿಸಿ ಮಂಗಳವಾರ ತಮ್ಮನ್ನು ಭೇಟಿ ಮಾಡಿದ ರಾಜ್ಯ ಎನ್‌ಪಿಎಸ್ (ಹೊಸ ಪಿಂಚಣಿ ವ್ಯವಸ್ಥೆ) ನೌಕರರ ಸಂಘ ಮತ್ತು ವಿವಿಧ ಸಂಘಟನೆಗಳ ಪದಾಧಿಕಾರಿಗಳ ನಿಯೋಗದ ಜೊತೆ ಮುಖ್ಯಮಂತ್ರಿ ಚರ್ಚೆ ನಡೆಸಿದರು.

'ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ನೌಕರರು ಕೆಲಸ ಮಾಡಬೇಕು. ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು' ಎಂದು ನೌಕರರಿಗೆ ಮುಖ್ಯಮಂತ್ರಿ ಕಿವಿಮಾತು ಹೇಳಿದರು.

'ರಾಜಸ್ಥಾನ, ಛತ್ತೀಸ್‌ಗಡದಲ್ಲಿ ಎನ್‌ಪಿಎಸ್ ರದ್ದಾಗಿದೆ. ಕರ್ನಾಟಕದಲ್ಲಿಯೂ ರದ್ದುಪಡಿಸಬೇಕು. ಎನ್‌ಪಿಎಸ್ ರದ್ದು ಮಾಡುವುದರಿಂದ ಯೋಜನೆಯಡಿ ಲಭ್ಯವಿರುವ ಒಟ್ಟು ₹ 19 ಸಾವಿರ ಕೋಟಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ದೊರೆಯಲಿದೆ. ನೌಕರರ ಪಾಲಿನ ₹ 9 ಸಾವಿರ ಕೋಟಿ ಜಿಪಿಎಫ್‌ಗೆ ಪರಿವರ್ತನೆ ಮಾಡಿಕೊಳ್ಳಬಹುದು' ಎಂದು ರಾಜ್ಯ ಎನ್‌ಪಿಎಸ್ ನೌಕರರ ಸಂಘದ ಅಧ್ಯಕ್ಷ ಶಾಂತಾರಾಂ ತೇಜ ವಿವರಿಸಿದರು.

ನಿಯೋಗದಲ್ಲಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ವಿ.ಎಸ್. ಉಗ್ರಪ್ಪ, '2006ರ ಏಪ್ರಿಲ್ 1ರಂದು ಜಾರಿಗೆ ಬಂದ ಎನ್‌ಪಿಎಸ್ ವ್ಯಾಪ್ತಿಗೆ 2.98 ಲಕ್ಷ ನೌಕರರು ಒಳಪಡುತ್ತಾರೆ. ಪಿಂಚಣಿ ಮೊತ್ತವನ್ನು ಎನ್‌ಎಸ್‌ಡಿಎಲ್‌ನಲ್ಲಿ ಠೇವಣಿ ಇಡಲಾಗಿದೆ. ಈ ಮೊತ್ತ ಬಳಸಿ ನೌಕರರು ನಿವೃತ್ತಿಯಾಗುವ ವೇಳೆಗೆ ಲಭ್ಯವಾಗುವಂತೆ ಜಿಪಿಎಫ್‌ನಲ್ಲಿ ಇಡಬಹುದು. ವೋಟ್ ಫಾರ್ ಒಪಿಎಸ್‌ನಲ್ಲಿ ಭಾಗಿಯಾದವರ ಮೇಲೆ ಕೈಗೊಂಡಿರುವ ಶಿಸ್ತು ಕ್ರಮವನ್ನು ಸರ್ಕಾರ ಕೈಬಿಡಬೇಕು' ಎಂದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಕೆಪಿಟಿಸಿಎಲ್, ಆರೋಗ್ಯ, ಜಲಮಂಡಳಿ, ಕಂದಾಯ ಇಲಾಖೆ ನೌಕರರ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು ನಿಯೋಗದಲ್ಲಿದ್ದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ನೀಟ್: ಧ್ರುವ ಅಡ್ವಾಣಿ ರಾಜ್ಯಕ್ಕೆ ಮೊದಲಿಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ನೀಟ್) ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಬೆಂಗಳೂರಿನ ಜಿ.ಆರ್. ಇಂಟರ್‌ನ್ಯಾಷನಲ್ ಸ್ಕೂಲ್ ವಿದ್ಯಾರ್ಥಿ ಧ್ರುವ ಅಡ್ವಾಣಿ ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಅಗ್ರ 5ನೇ ರ‍್ಯಾಂಕ್ ಗಳಿಸಿದ್ದಾರೆ.



ಧ್ರುವ ಅಡ್ವಾಣಿ

ದ್ವಿತೀಯ ಪಿಯುಸಿ ವಿಜ್ಞಾನ ವಿಷಯದಲ್ಲಿ (ಸಿಬಿಎಸ್‌ಸಿ) ಶೇ 99.4 ಗಳಿಸಿದ್ದ ಧ್ರುವ ಅಡ್ವಾಣಿ ದೆಹಲಿಯ ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್) ಸೇರುವ ಗುರಿ ಹೊಂದಿದ್ದಾರೆ.

'ನಿಗದಿತ ವೇಳಾಪಟ್ಟಿ ಪ್ರಕಾರ ಎಂದೂ ಅಧ್ಯಯನ ನಡೆಸಿರಲಿಲ್ಲ. ಪರೀಕ್ಷೆಯ ಹಿಂದಿನ ದಿನಗಳಲ್ಲಿ ಹೆಚ್ಚಿನ ಸಮಯ ಓದಿಗೆ ಮೀಸಲಿಡುತ್ತಿದ್ದೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕರ್ನಾಟಕದ ಮತ್ತೊಬ್ಬ ವಿದ್ಯಾರ್ಥಿ ಎಸ್.ಎಚ್.ಬೈರೇಶ್ ಅಖಿಲ ಭಾರತ ಮಟ್ಟದಲ್ಲಿ 48ನೇ ರ‍್ಯಾಂಕ್ (710 ಅಂಕಗಳು) ಪಡೆದಿದ್ದಾರೆ.

3ನೇ ಪುಟ ನೋಡಿ

ಆರೋಗ್ಯ ಶಿಬಿರ 18ಕ್ಕೆ

ರಾಜರಾಜೇಶ್ವರಿನಗರ: ಅರ್ಪಿತ ಸೇವಾ ಟ್ರಸ್ಟ್ ಲಗ್ಗೆರೆ, ಕೆಪಿಸಿಸಿ, ರಾಜರಾಜೇಶ್ವರಿನಗರ ವಿಧಾನಸಭಾ ಕಾಂಗ್ರೆಸ್ ಸಮಿತಿ, ಮಂಜುಳಾ ನಾರಾಯಣಸ್ವಾಮಿ ಅಭಿಮಾನಿಗಳ ಬಳಗದ ವತಿಯಿಂದ ಲಗ್ಗೆರೆಯ ಮುಖ್ಯ ರಸ್ತೆಯ ಬಿ-ಬೆಸ್ಟ್ ಶಾಲಾ ಆವರಣದಲ್ಲಿ ಇದೇ 18ರಂದು ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9ಘಂಟೆಯಿಂದ ಮಧ್ಯಾಹ್ನ 2ರವರೆಗೆ ಶಿಬಿರ ನಡೆಯಲಿದೆ. ಬಿಬಿಎಂಪಿ ಮಾಜಿ ಸದಸ್ಯೆ ಮಂಜುಳಾ ನಾರಾಯಣಸ್ವಾಮಿ ಅವರ ಜನ್ಮ ದಿನದ ಅಂಗವಾಗಿ ಶಿಬಿರ ಆಯೋಜಿಸಲಾಗಿದೆ. ಸಪ್ತಗಿರಿ ಆಸ್ಪತ್ರೆಯ ಡಾ.ಎಸ್.ಆರ್. ಚಂದ್ರಶೇಖರ್ ವಾಕ್ ಮತ್ತು ಶ್ರವಣಸಂಸ್ಥೆ, ಒಕ್ಕಲಿಗರ ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಪೂರ್ಣಸುಧಾ ಕ್ಯಾನ್ಸರ್ ಫೌಂಡೇಷನ್ ವತಿಯಿಂದ ವಿವಿಧ ಕಾಯಿಲೆಗಳ ಪರೀಕ್ಷೆ, ಚಿಕಿತ್ಸೆ ಹಮ್ಮಿಕೊಳ್ಳಲಾಗಿದೆ ಎಂದು ಅರ್ಪಿತ ಸೇವಾ ಟ್ರಸ್ಟ್ ಅಧ್ಯಕ್ಷ ಲಗ್ಗೆರೆ ನಾರಾಯಣಸ್ವಾಮಿ ತಿಳಿಸಿದ್ದಾರೆ.

ಉಚಿತ ರಕ್ತದಾನ ಶಿಬಿರ ಹಮ್ಮಿಕೊಂಡಿದ್ದು, ಕನಿಷ್ಠ 500ಯೂನಿಟ್ ರಕ್ತ ಸಂಗ್ರಹಿಸಲಾಗುವುದು. 500ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಐದು ಸಾವಿರ ಸರ್ಕಾರಿ, ಅನುದಾನಿತ ವಿದ್ಯಾರ್ಥಿಗಳಿಗೆ ತಲಾ ಎರಡು ಜೊತೆ ಸಮವಸ್ತ್ರ ವಿತರಣೆ, 25 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಮಾಹಿತಿಗೆ 9900454848. 9986674444 ಸಂಪರ್ಕಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ • ವಿಸ್ತೃತ ಪ್ರಸ್ತಾವ ಸಲ್ಲಿಸಲು ಸೂಚನೆ

‘ಸಹಕಾರ ಕೃಷಿ ಕುರಿತು ಪರಿಶೀಲನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಪಿಐ ಮುಖಂಡ ಸಾತಿ ಸುಂದರೇಶ್ ಅವರ ನೇತೃತ್ವದ ನಿಯೋಗವು ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿತು.

‘ರಾಜ್ಯದಲ್ಲಿ ಸಹಕಾರಿ ಕೃಷಿಗೆ ಪ್ರೋತ್ಸಾಹ ನೀಡುವ ಬಗ್ಗೆ ಅಧ್ಯಯನ ನಡೆಸಿ, ವರದಿ ಪಡೆಯಬೇಕು. ಇದನ್ನು ಯಾವ ವಲಯಗಳಲ್ಲಿ ವಿಸ್ತರಿಸಬಹುದು ಎನ್ನುವ ಬಗ್ಗೆ ಪರಿಶೀಲಿಸಬೇಕು’ ಎಂದು ಸಲಹೆ ನೀಡಿದರು.

ಸಹಕಾರ ಕೃಷಿಗೆ ಸಂಬಂಧಿಸಿದಂತೆ ವಿಸ್ತೃತ ಪ್ರಸ್ತಾವ ಸಲ್ಲಿಸುವಂತೆ ಮುಖ್ಯಮಂತ್ರಿ ತಿಳಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಗಮನಿಸಿ ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಕಾರ್ಮಿಕರಿಗೆ ಕನಿಷ್ಠ ವೇತನ ನೀಡಬೇಕು, ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶ ನೀಡಿರುವ ತಿದ್ದುಪಡಿಯನ್ನು ವಾಪಸ್ ಪಡೆಯಲು ನಿಯೋಗ ಮನವಿ ಮಾಡಿತು.

ನಿಯೋಗದಲ್ಲಿ ಎಚ್.ವಿ. ಅನಂತ ಸುಬ್ಬರಾವ್, ಸಿದ್ದನಗೌಡ ಪಾಟೀಲ್, ಪಿ.ವಿ.ಲೋಕೇಶ್, ಡಿ.ಎ. ವಿಜಯಭಾಸ್ಕರ್, ಬಿ. ಅಮ್ಜದ್, ಶಿವರಾಜ್ ಬಿರಾದಾರ್, ಜ್ಯೋತಿ ಎ. ಮತ್ತು ಎಚ್.ಎಂ. ಸಂತೋಷ್ ಉಪಸ್ಥಿತರಿದ್ದರು.



ಸಾತಿ ಸುಂದರೇಶ್ ಅವರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿತು

ವರುಣದಲ್ಲಿ ಚಿತ್ರ ನಗರಿ: ಕಲಾವಿದರ ನಿಯೋಗದಿಂದ ಸಿ.ಎಂಗೆ ಮನವಿ

ಬೆಂಗಳೂರು: ಚಲನಚಿತ್ರ ನಿರ್ದೇಶಕ ಹಾಗೂ ನಿರ್ಮಾಪಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ನೇತೃತ್ವದಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರ ಕಲಾವಿದರ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ, ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಿತು.

ಬಜೆಟ್ ಮುಗಿದ ನಂತರ ಮೈಸೂರಿನ ವರುಣ ಕ್ಷೇತ್ರದಲ್ಲಿ ಚಿತ್ರನಗರಿ ನಿರ್ಮಾಣಕ್ಕಾಗಿ ಮತ್ತೊಂದು ಸುತ್ತಿನ ಚರ್ಚೆ ನಡೆಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದರು. ನಿಯೋಗವು ಸಲ್ಲಿಸಿದ ಇತರ ಮನವಿಗಳ ಬಗ್ಗೆಯೂ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು.

ಸಿನಿಮಾ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಟಿ.ಎನ್. ಸೀತಾರಾಮ್, ಲಿಂಗದೇವರು, ನಂಜುಂಡೇಗೌಡ, ನಟ ಶ್ರೀನಿವಾಸ ಮೂರ್ತಿ, ಕಲಾವಿದೆ ವಿಜಯಲಕ್ಷ್ಮಿ ಸಿಂಗ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಇದ್ದರು.

ಆಶಾ ಕಾರ್ಯಕರ್ತೆಯರ ಸಂಭಾವನೆ ಹೆಚ್ಚಿಸಲು ಆಗ್ರಹ

ಬೆಂಗಳೂರು: ಅಂಗನವಾಡಿ, ಬಿಸಿಯೂಟ–ಆಶಾ ಕಾರ್ಯಕರ್ತೆಯರ ಸಂಭಾವನೆ ಹೆಚ್ಚಿಸುವ ಕಾಂಗ್ರೆಸ್‌ನ 6ನೇ ಗ್ಯಾರಂಟಿ ಜಾರಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಆಗ್ರಹಿಸಿದೆ.

ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಎಯುಟಿಯುಸಿ ಪದಾಧಿಕಾರಿಗಳು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ನಂತರ ಮಾತನಾಡಿದ ಫೆಡರೇಷನ್ ಅಧ್ಯಕ್ಷ ಬಿ. ಅಮ್ಜದ್ ‘ರಾಜ್ಯ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ವಾದ್ರಾ ಅವರು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಅಂಗನವಾಡಿ, ಬಿಸಿಯೂಟ ಆಶಾ ಕಾರ್ಯಕರ್ತೆಯರ ಸಂಭಾವನೆ ಹೆಚ್ಚಿಸಲಾಗುವುದು ಎಂದು ಭರವಸೆ ನೀಡಿದ್ದರು. ಅದರಂತೆ ಸರ್ಕಾರ ನಡೆದುಕೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಬಲೀಕರಣ, ಇಲಾಖೆಯಲ್ಲಿನ ಕುಂದು ಕೊರತೆಗಳನ್ನು ನಿವಾರಿಸಬೇಕು. ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ₹15 ಸಾವಿರ ಹಾಗೂ ಸಹಾಯಕಿಯರಿಗೆ ₹10 ಸಾವಿರ ಗೌರವಧನ ನೀಡಬೇಕು. ನಿವೃತ್ತಿಯಾದ ಕಾರ್ಯಕರ್ತೆಯರಿಗೆ, ಸಹಾಯಕಿಯರಿಗೆ ₹3 ಲಕ್ಷ ಇಡುಗಂಟು, ಮಾಸಿಕ ₹5 ಸಾವಿರ ನಿವೃತ್ತಿ ವೇತನ ನೀಡುವ ಭರವಸೆಯನ್ನು ಕೂಡಲೇ ಜಾರಿಗೊಳಿಸಬೇಕು’ ಎಂದು ಹೇಳಿದ್ದಾರೆ.

‘ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗ್ರಾಚ್ಯುಯಿಟಿ ಪಡೆಯಲು ಅರ್ಹರು ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಆಡಳಿತಾತ್ಮಕವಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು’ ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ತಂತ್ರಜ್ಞಾನ ಪುರವಣಿ ಓದಿರಿ

ಸುದ್ದಿ 2 ನಿಮಿಷ

ಕರ್ನಾಟಕ ಸಂಸ್ಕೃತ ವಿವಿಗೆ ನ್ಯಾಕ್‌ನಿಂದ ‘ಎ’ ಗ್ರೇಡ್ ಮಾನ್ಯತೆ

ಬೆಂಗಳೂರು: ‘ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯಿಂದ ‘ಎ’ ಗ್ರೇಡ್ ಶ್ರೇಣಿ ದೊರೆತಿದೆ’ ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಹಲ್ಯಾ ಎಸ್ ತಿಳಿಸಿದ್ದಾರೆ.

ವಿವಿಯು ಮೌಲ್ಯಮಾಪನ ಮತ್ತು ಮಾನ್ಯತೆ ಪಡೆಯಲು 2022ರಲ್ಲಿ ಸಿದ್ಧತೆಗಳನ್ನು ಪ್ರಾರಂಭಿಸಿ, 2023ರಲ್ಲಿ ಎಸ್.ಎಸ್.ಆರ್ ವರದಿಯನ್ನು ಸಲ್ಲಿಸಿತ್ತು. ನ್ಯಾಕ್ ತಂಡವು ಮೇ 23 ರಿಂದ 24ರವರೆಗೆ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಇಲ್ಲಿನ ಸೌಕರ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿತ್ತು’ ಎಂದು ಹೇಳಿದ್ದಾರೆ.

‘ನ್ಯಾಕ್‌ನಿಂದ ‘ಎ’ ಗ್ರೇಡ್ ಶ್ರೇಣಿ ಪಡೆದಿದ್ದು ವಿಶ್ವವಿದ್ಯಾಲಯದ ದೃಷ್ಟಿಕೋನ ಅಧ್ಯಾಪಕರು, ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡಲು ಪ್ರೇರೇಪಿಸುತ್ತದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

193 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ



ಬೆಂಗಳೂರು: ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ಪಡೆದ 193 ಅಭ್ಯರ್ಥಿಗಳಿಗೆ ಕೇಂದ್ರ ರೈಲ್ವೆ ಇಲಾಖೆಯ ರಾಜ್ಯ ಸಚಿವ ರಾವ್ ಸಾಹೇಬ್ ದಾದಾರಾವ್ ದಾನ್ವೆ ಅವರು ಮಂಗಳವಾರ ನೇಮಕಾತಿ ಪತ್ರಗಳನ್ನು ವಿತರಿಸಿದರು.

ಕೆನರಾ ಬ್ಯಾಂಕ್ ಹಾಗೂ ವಿವಿಧ ಇಲಾಖೆಗಳು ಆಯೋಜಿಸಿದ್ದ 6ನೇ ಉದ್ಯೋಗ ಮೇಳದಲ್ಲಿ ಮಾತನಾಡಿದ ಅವರು, ‘ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ದೇಶದಲ್ಲಿ 10 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಇದೆ. ಹಿಂದಿನ ಐದು ಉದ್ಯೋಗ ಮೇಳಗಳಲ್ಲಿ 3.5 ಲಕ್ಷ ಉದ್ಯೋಗಗಳನ್ನು ನೀಡಲಾಗಿದೆ. ದೇಶದಲ್ಲಿ ಇಂದು 70 ಸಾವಿರಕ್ಕೂ ಹೆಚ್ಚು ಯುವಕರಿಗೆ ನೇಮಕಾತಿ ಪತ್ರಗಳನ್ನು ವಿತರಣೆ ಮಾಡಲಾಗುತ್ತಿದೆ’ ಎಂದು ಹೇಳಿದರು.

‘ದೇಶದ 43 ಪ್ರದೇಶಗಳು ಸೇರಿ ಕರ್ನಾಟಕದ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿಯಲ್ಲಿ ಉದ್ಯೋಗ ಮೇಳಗಳು ನಡೆಯುತ್ತಿವೆ. ಇಂದು ಸರ್ಕಾರಿ ನೌಕರಿ ಪಡೆಯಬೇಕಾದರೆ ಆನ್‌ಲೈನ್‌ನಲ್ಲಿ ಪರೀಕ್ಷೆ ಬರೆದು, ಆನ್‌ಲೈನ್‌ನಲ್ಲಿ ಫಲಿತಾಂಶಗಳು ನೋಡಬಹುದು. ಈ ಹಿಂದೆ ಲಿಖಿತ ಮತ್ತು ಮೌಖಿಕ ಪರೀಕ್ಷೆಗಳಿರುತ್ತಿದ್ದವು, ಅದರಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿತ್ತು. ಜತೆಗೆ ಮುಖ ನೋಡಿ ಅಭ್ಯರ್ಥಿಗಳಿಗೆ ಮಣೆ ಹಾಕಲಾಗುತ್ತಿತ್ತು. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಈ ವ್ಯವಸ್ಥೆಯನ್ನು ಬದಲಾಯಿಸಿ ಸಂಪೂರ್ಣವಾಗಿ ಪಾರದರ್ಶಕತೆಯನ್ನು ತಂದಿದ್ದಾರೆ’ ಎಂದು ತಿಳಿಸಿದರು.

ಸಂಸದ ಪಿ.ಸಿ. ಮೋಹನ್, ‘ದೇಶದಲ್ಲಿ ಉದ್ಯೋಗ ಸೃಷ್ಟಿ ಮಾಡುವುದು ಸರ್ಕಾರದ ಕರ್ತವ್ಯ. ಕೇಂದ್ರ ಸರ್ಕಾರದ 38 ಇಲಾಖೆಗಳಲ್ಲಿ ಸುಮಾರು 3ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿ ಮಾಡಲಾಗಿದೆ. ಕೋವಿಡ್ ನಂತರ ಬೇರೆ ದೇಶಗಳ ಆರ್ಥಿಕ ಪರಿಸ್ಥಿತಿಗೆ ಹೋಲಿಸಿದರೆ ನಮ್ಮ ದೇಶದ ಆರ್ಥಿಕತೆ ಚೆನ್ನಾಗಿದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯೇ ಕಾರಣ ಎಂದರು. ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಸತ್ಯನಾರಾಯಣ ರಾಜು ಇದ್ದರು.

₹ 20 ಲಕ್ಷದವರೆಗೆ ಶೇ 3ರ ಬಡ್ಡಿ ದರದಲ್ಲಿ ಕೃಷಿ ಸಾಲ

‘ರೈತರಿಗೆ ₹5 ಲಕ್ಷದವರೆಗೆ ಶೂನ್ಯ ಬಡ್ಡಿ ದರ ಸಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ರಾಜ್ಯ ರೈತರಿಗೆ ₹ 5 ಲಕ್ಷದವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಮತ್ತು ₹20 ಲಕ್ಷದವರೆಗೆ ಶೇ 3 ರ ಬಡ್ಡಿ ದರದಲ್ಲಿ ಕೃಷಿ ಸಾಲ ವಿತರಣೆ ಈ ವರ್ಷದಿಂದಲೇ ಜಾರಿ ಮಾಡುತ್ತೇವೆ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಗುರಿ ನಿಗದಿ ಮಾಡಿ ಸಾಲ ವಿತರಣೆ ಮಾಡುವುದಕ್ಕಿಂತ, ರೈತರ ಅಗತ್ಯಕ್ಕೆ ತಕ್ಕಂತೆ ಹೆಚ್ಚಿನ ರೈತರಿಗೆ ಸಾಲ ವಿತರಣೆ ಮಾಡಲು ಆದ್ಯತೆ ನೀಡಲಾಗುವುದು ಎಂದರು.

‘ಈ ಹಿಂದೆ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ₹3 ಲಕ್ಷದವರೆಗೆ ನೀಡಲಾಗುತ್ತಿತ್ತು. ಇನ್ನು ಮುಂದೆ ₹5 ಲಕ್ಷದವರೆಗೆ ನೀಡಲಾಗುವುದು. ಅದೇ ರೀತಿ ಶೇ 3 ರ ಬಡ್ಡಿ ದರದಲ್ಲಿ ನೀಡುತ್ತಿದ್ದ ಸಾಲವನ್ನು ₹20 ಲಕ್ಷಕ್ಕೆ ಹೆಚ್ಚಿಸಲಾಗುವುದು. ಈ ಅಂಶವನ್ನು ಪ್ರಣಾಳಿಕೆಯಲ್ಲಿಯೂ ಹೇಳಿದ್ದೆವು’ ಎಂದರು.

ಮುಖ್ಯಾಂಶಗಳು
- ರೈತರ ಅಗತ್ಯಕ್ಕೆ ತಕ್ಕಂತೆ ಹೆಚ್ಚಿನ ರೈತರಿಗೆ ಸಾಲ ವಿತರಣೆ ಮಾಡಲು ಆದ್ಯತೆ
- ಅಮೂಲ್– ನಂದಿನಿಯನ್ನು ವಿಲೀನಗೊಳಿಸುವ ಯಾವುದೇ ಪ್ರಸ್ತಾವನೆ ಇಲ್ಲ
- ಹಾಲು ಪೂರೈಸುವ ರೈತರಿಗೆ ಹೆಚ್ಚಿನ ಪ್ರೋತ್ಸಾಹ ಧನ

‘ಕೃಷಿ ಸಾಲ ನೀಡಿಕೆಯನ್ನು ಪ್ರತಿ ವರ್ಷ ಶೇ 10 ಅಥವಾ ಶೇ 20 ಹೆಚ್ಚಿಸುವುದರ ಬದಲು ಹೆಚ್ಚಿನ ಅರ್ಹ ರೈತರಿಗೆ ಸಾಲ ಕೊಡಲು ಆದ್ಯತೆ ನೀಡುತ್ತೇವೆ’ ಎಂದು ಹೇಳಿದರು.

ಅಮೂಲ್ ಮತ್ತು ನಂದಿನಿಯನ್ನು ವಿಲೀನಗೊಳಿಸುವ ಯಾವುದೇ ಪ್ರಸ್ತಾವನೆ ಇಲ್ಲ. ನಂದಿನಿಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಹಾಲು ಪೂರೈಸುವ ರೈತರಿಗೆ ಹೆಚ್ಚಿನ ಪ್ರೋತ್ಸಾಹ ಧನವನ್ನು ನೀಡಲಾಗುವುದು ಎಂದರು.

ರೈತರ ಸಾಲ ಮನ್ನಾದ ಪ್ರಯೋಜನ ಎಲ್ಲ ರೈತರಿಗೂ ಸಿಕ್ಕಿಲ್ಲ. ಯಾರಿಗೆಲ್ಲ ಸಿಕ್ಕಿಲ್ಲ ಎಂಬ ಮಾಹಿತಿಯನ್ನು ಪಡೆಯಲಾಗುತ್ತಿದೆ ಎಂದೂ ಹೇಳಿದರು.

‘ಹಿಂದಿನವರು ತಪ್ಪು ಮಾಡಿದ್ದಾರೆಯೇ ಎಂದು ಕೆದಕಿಕೊಂಡು ಕೂರುವುದಿಲ್ಲ. ಏನೇ ತಪ್ಪುಗಳಾಗಿದ್ದರೂ ಕಾನೂನು ಪ್ರಕಾರ ಕ್ರಮವಹಿಸಲಾಗುತ್ತದೆ. ಹಿಂದಿನವರನ್ನು ಶಿಕ್ಷಿಸಬೇಕು ಎಂದು ಅಧಿಕಾರ ಉಪಯೋಗಿಸುವುದಿಲ್ಲ. ಮುಂದೆ ತಪ್ಪುಗಳು ಆಗದಂತೆ ಎಚ್ಚರ ವಹಿಸಲಾಗುವುದು. ಈ ವಿಚಾರಗಳನ್ನು ಬಿಟ್ಟು ರೈತರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಗಮನಹರಿಸುತ್ತೇನೆ’ ಎಂದರು.

ನೇಮಕಾತಿಯಲ್ಲಿ ಅಕ್ರಮ ಆಗಿದೆ ಎಂದು ಆರೋಪ ಮಾಡಿದ ತಕ್ಷಣ ನೇಮಕಗೊಂಡವರನ್ನು ಮನೆಗೆ ಕಳುಹಿಸಲು ಆಗುವುದಿಲ್ಲ. ಮುಂದೆ ಆ ರೀತಿ ಆಗದಂತೆ ಎಚ್ಚರವಹಿಸಬೇಕಾಗುತ್ತದೆ ಎಂದೂ ಅವರು ತಿಳಿಸಿದರು.

ಬೆಂಗಳೂರು ಹಬ್ಬವಾಗಿ ಕೆಂಪೇಗೌಡರ ಜಯಂತಿ: ಮನವಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವವನ್ನು ‘ಬೆಂಗಳೂರು ಹಬ್ಬದಂತೆ’ ಆಚರಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮಾಜಿ ಮೇಯರ್ ಪಿ.ಆರ್. ರಮೇಶ್ ಮನವಿ ಮಾಡಿದ್ದಾರೆ.

ಜೂನ್ 27ರಂದು ಕೆಂಪೇಗೌಡರ ಜಯಂತ್ಯುತ್ಸವ ಆಚರಿಸಲು ಸರ್ಕಾರ ಆದೇಶಿಸಿದೆ. ಇದು ಶ್ಲಾಘನೀಯ. ಆದರೆ, ಬೆಂಗಳೂರಿನಲ್ಲಿ ಕರಗ ಉತ್ಸವ ಸಂದರ್ಭದಲ್ಲಿ ಕೆಂಪೇಗೌಡರ ಜಯಂತಿ ಆಚರಿಸಲಾಗುತ್ತಿದೆ. ಇದರ ಬದಲು, ಜೂನ್‌ನಲ್ಲಿ ಹಬ್ಬ ಆಚರಿಸಬೇಕು ಎಂದು ಮನವಿ ಪತ್ರದಲ್ಲಿ ಹೇಳಿದ್ದಾರೆ.

ಬಿಬಿಎಂಪಿಯ ಪ್ರತಿ ವಾರ್ಡ್‌ಗಳು ಸೇರಿದಂತೆ ಎಲ್ಲ ನಾಗರಿಕರು, ಸಂಘ–ಸಂಸ್ಥೆಗಳನ್ನು ಒಳಗೊಂಡಂತೆ ಜೂನ್ 25ರಿಂದ 27ರವರೆಗೆ ಬಿಬಿಎಂಪಿ ಆಶ್ರಯದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಬೆಂಗಳೂರು ಹಬ್ಬವಾಗಿ ಆಚರಿಸಬೇಕು. ಇದಕ್ಕಾಗಿ ಪಾಲಿಕೆಗೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಆಹಾರ ವ್ಯರ್ಥ ಮಾಡದಿರಿ: ಸಚಿವ ಕೆ.ಎಚ್. ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತುತ್ತು ಅನ್ನವನ್ನೂ ನಾವು ವ್ಯರ್ಥ ಮಾಡಬಾರದು. ಈ ನಿಟ್ಟಿನಲ್ಲಿ ಸಾರ್ವಜನಿಕ ಜಾಗೃತಿ ನಡೆಯಬೇಕಿದೆ’ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಮೂರು ದಿನಗಳ ‘ಆತಿಥ್ಯ ಪ್ರಪಂಚ ಪ್ರದರ್ಶನ’ ಉದ್ಘಾಟಿಸಿ ಮಾತನಾಡಿದ ಅವರು, ‘ಹಸಿವು ನಿವಾರಣೆ ನಮ್ಮೆಲ್ಲರ ಗುರಿ. ಈ ನಿಟ್ಟಿನಲ್ಲಿ ನಾವು ಆಹಾರ ವ್ಯರ್ಥ ಮಾಡುವುದನ್ನು ನಿಲ್ಲಿಸಬೇಕು’ ಎಂದು ಹೇಳಿದರು.

‘ರಾಜ್ಯ ಸರ್ಕಾರವು ಆರ್ಥಿಕ ಪ್ರಗತಿಗೆ ಕ್ರಾಂತಿಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರಗಳು ಆರ್ಥಿಕತೆಗೆ ಬಲ ತುಂಬುತ್ತವೆ. ಈ ಕ್ಷೇತ್ರಗಳು ಇನ್ನಷ್ಟು ಬೆಳವಣಿಗೆ ಸಾಧಿಸಬೇಕು’ ಎಂದರು.

ಮುಂಬೈ ಮತ್ತು ಗೋವಾದಲ್ಲಿ ಯಶಸ್ವಿ ಪ್ರದರ್ಶನಗಳ ನಂತರ, ’ಆತಿಥ್ಯ ಪ್ರಪಂಚ ಪ್ರದರ್ಶನ’ ನಗರದಲ್ಲಿ ನಡೆಯುತ್ತಿದೆ. ಆತಿಥ್ಯ ಕ್ಷೇತ್ರದ ವೃತ್ತಿಪರರಿಗೆ ಉದ್ಯಮದಲ್ಲಿನ ಹೊಸ ಉತ್ಪನ್ನಗಳು ಮತ್ತು ಸೇವೆಗಳನ್ನು ಪರಿಚಯಿಸಲು ವೇದಿಕೆಯಾಗಿದೆ.



‘ಆತಿಥ್ಯ ಪ್ರಪಂಚ ಪ್ರದರ್ಶನ’ದ ಕಾರ್ಯಕ್ರಮದಲ್ಲಿ ಸಚಿವ ಕೆ.ಎಚ್. ಮುನಿಯಪ್ಪ, ಬೃಹತ್ ಬೆಂಗಳೂರು ಹೋಟೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಪಿಸಿ ರಾವ್, ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ.ಗೋಪಾಲ ರೆಡ್ಡಿ, ಜಿತೇಂದ್ರ ಡೋಂಗ್ರೆ ಪಾಲ್ಗೊಂಡಿದ್ದರು

‘ಸಾಕ್ಷ್ಯರಹಿತ ದೂರು– ಹಕ್ಕುಗಳ ಉಲ್ಲಂಘನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ಅಪರಾಧ ಪ್ರಕರಣಗಳಲ್ಲಿ ಮೇಲ್ನೋಟಕ್ಕೆ ಆರೋಪಗಳನ್ನು ಸಾಬೀತುಪಡಿಸುವಂತಹ ಸಾಕ್ಷ್ಯಗಳಿಲ್ಲದೆ ದೂರು ದಾಖಲಿಸಿದರೆ ಅದು ಸಂವಿಧಾನದ 21ನೇ ವಿಧಿಯ ಅನ್ವಯ ವ್ಯಕ್ತಿಯೊಬ್ಬರ ಜೀವನ ಮತ್ತು ಘನತೆಗೆ ಸಂಬಂಧಿಸಿದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ‘ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತಮ್ಮ ವಿರುದ್ಧ ದಾಖಲಾದ ವಂಚನೆ ಪ್ರಕರಣ ರದ್ದುಪಡಿಸುವಂತೆ ಕೋರಿ ವಿಪುಲ್ ಪ್ರಕಾಶ್ ಪಾಟೀಲ್ ಸಲ್ಲಿಸಿದ್ದ ಅರ್ಜಿಯನ್ನು ಧಾರವಾಡ ಹೈಕೋರ್ಟ್ ಪೀಠದಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಷಾನಂದ ಅವರಿದ್ದ ಏಕಸದಸ್ಯ ನ್ಯಾಯ ಪೀಠ ಈ ಕುರಿತಂತೆ ಆದೇಶಿಸಿದೆ.

‘ಮೇಲ್ನೋಟಕ್ಕೆ ಯಾವುದೇ ಸಾಕ್ಷ್ಯಗಳಿಲ್ಲದೆ ಅರ್ಜಿದಾರರ ವಿರುದ್ಧ ಪ್ರಕರಣ ಮುಂದುವರಿಸುವುದು ಕಾನೂನಿನ ದುರ್ಬಳಕೆ ಆಗಲಿದೆ‘ ಎಂದಿರುವ ನ್ಯಾಯಪೀಠ, ಅರ್ಜಿದಾರರ ವಿರುದ್ಧ, ಹಣಕಾಸು ಸಂಸ್ಥೆಗಳಲ್ಲಿನ ಕರ್ನಾಟಕ ಠೇವಣಿದಾರರ ಹಿತರಕ್ಷಣಾ ಕಾಯ್ದೆ–2004 (ಕೆಪಿಐಡಿ) ಕಲಂ 9, ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 420 ಮತ್ತು 406 ರನ್ವಯ ಹೂಡಿದ್ದ ಎಫ್‌ಐಆರ್ ಅನ್ನು ರದ್ದುಗೊಳಿಸಿದೆ.

ಪ್ರಕರಣವೇನು?: ‘ವಿಪುಲ್ ಪ್ರಕಾಶ್ ಪಾಟೀಲ್, ಪಂಕಜ್ ನಾಮ್ ದೇವ್ ಮತ್ತು ಸಂತೋಷ್ ಗಂಗಾರಾಮ್ ಫೋಡ್ಕೆ ₹ 1 ಲಕ್ಷ ಠೇವಣಿ ಇರಿಸಿದರೆ ಅದನ್ನು 10 ತಿಂಗಳಲ್ಲಿ ವಾಪಸ್ ನೀಡಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ, ಹಣ ಮರುಪಾವತಿ ಮಾಡದೆ ವಂಚನೆ ಎಸಗಿದ್ದಾರೆ‘ ಎಂದು ಶಿವಾನಂದ ಎಂಬುವರು ಪೊಲೀಸರಿಗೆ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಚಿಕ್ಕೋಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಮಳೆಗಾಗಿ ಪ್ರಾರ್ಥನೆ, ಪೂಜೆ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಬಳಿ ಮಂಗಳವಾರ ಮಳೆಗಾಗಿ ಪ್ರಾರ್ಥಿಸಿ ಜ್ಯೋತಿಷಿ ಡಾ.ವಿ. ಭಾನುಪ್ರಕಾಶ್ ಶರ್ಮಾ ಅವರ ನೇತೃತ್ವದಲ್ಲಿ ಪರ್ಜನ್ಯ ಹೋಮ ನಡೆಯಿತು.

ಶಾಸಕ ರಮೇಶ ಬಂಡಿಸಿದ್ದೇಗೌಡ ಮತ್ತು ರೈತರ ಕೋರಿಕೆ ಮೇರೆಗೆ, ಅಣೆಕಟ್ಟೆಯ ಕಾವೇರಿ ಪ್ರತಿಮೆ ಬಳಿ ಡಾ.ಭಾನುಪ್ರಕಾಶ್ ಶರ್ಮಾ, ಕೃಷ್ಣಭಟ್, ಕೆ.ಎಸ್.ಲಕ್ಷ್ಮೀಶ್ ಶರ್ಮಾ ಸೇರಿದಂತೆ 12 ವೈದಿಕರ ತಂಡ ಮೂರು ಗಂಟೆ ಕಾಲ ಪರ್ಜನ್ಯ ಹೋಮ ಮತ್ತು ಪೂಜೆ ನಡೆಸಿತು.

ಕುಂಭದಲ್ಲಿ ಕಾವೇರಿ ಜಲವನ್ನು ತುಂಬಿ ಪರ್ಜನ್ಯ ಪೂಜೆ ಸಲ್ಲಿಸಿದ ಬಳಿಕ ಜಲಾಶಯಕ್ಕೆ ಪವಿತ್ರ ಜಲವನ್ನು ಪ್ರೋಕ್ಷಣೆ ಮಾಡಲಾಯಿತು. ಶಾಸಕರು ಸಂಕಲ್ಪ ಪೂಜೆ ನೆರವೇರಿಸಿದರು.

‘ಸಕಾಲಕ್ಕೆ ಮಳೆ ಬೀಳದಿದ್ದರೆ ಪರ್ಜನ್ಯ ಜಪ ಮಾಡುವಂತೆ ವೇದದಲ್ಲಿ ಹೇಳಿರುವುದರಿಂದ ವರುಣ ದೇವರಿಗೆ ಪೂಜೆ ಮಾಡಿದ್ದೇವೆ’ ಎಂದು ಕೃಷ್ಣಭಟ್ ತಿಳಿಸಿದರು.

ರೈತ ಮುಖಂಡ ಚಿಕ್ಕಾಡೆ ಹರೀಶ್, ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಎಂಜಿನಿಯರ್ ಆನಂದ್, ಕಾರ್ಯಪಾಲಕ ಎಂಜಿನಿಯರ್ ರಾಮಮೂರ್ತಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಫಾರೂಕ್ ಅಬು, ಸಹಾಯಕ ಎಂಜಿನಿಯರ್ ಕೆ. ಕಿಶೋರ್‌ಕುಮಾರ್ ಹಾಜರಿದ್ದರು.

‘ಅಲೆಮಾರಿಗಳಿಗೆ ಆಯೋಗ: ಪರಿಶೀಲಿಸಿ ಕ್ರಮ’

ಬೆಂಗಳೂರು: ಅಲೆಮಾರಿ ಸಮುದಾಯಗಳ ಬೇಡಿಕೆ ಕುರಿತು ಅಧ್ಯಯನ ನಡೆಸಲು ಪ್ರತ್ಯೇಕ ಆಯೋಗ ರಚಿಸಬೇಕೆಂಬ ಬೇಡಿಕೆ ಬಗ್ಗೆ ಪರಿಶೀಲಿಸಿ, ನಿರ್ಧಾರಕ್ಕೆ ಬರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅಲೆಮಾರಿ ಬುಡಕಟ್ಟುಗಳ ಮಹಾಸಭಾ ಅಧ್ಯಕ್ಷರೂ ಆಗಿರುವ ಕೆಪಿಸಿಸಿ ಸಾಮಾಜಿಕ ನ್ಯಾಯ ಘಟಕದ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ನೇತೃತ್ವದಲ್ಲಿ ಮುಖ್ಯಮಂತ್ರಿಯವರನ್ನು ಸೋಮವಾರ ಭೇಟಿ ಮಾಡಿದ ಅಲೆಮಾರಿ ಸಮುದಾಯಗಳ ಮುಖಂಡರ ನಿಯೋಗ, ಪ್ರತ್ಯೇಕ ಆಯೋಗ ನೇಮಿಸುವಂತೆ ಮನವಿ ಮಾಡಿದರು.

ಅಲೆಮಾರಿ ಸಮುದಾಯಗಳ ಸಮಸ್ಯೆಗಳು, ವಸತಿ ಹಾಗೂ ಉದ್ಯೋಗದ ಬೇಡಿಕೆ ಕುರಿತಂತೆ ಹಲವು ವಿಷಯಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದರು. ಬೇಡಿಕೆ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಆಯೋಗ ನೇಮಿಸುವ ಬಗ್ಗೆ ಪರಿಶೀಲಿಸುವ ಭರವಸೆ ನೀಡಿದರು. ಇತರ ಬೇಡಿಕೆಗಳನ್ನೂ ಪರಿಶೀಲಿಸಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

‘ಹಾವಾಡಿಗರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಜುಲೈ ಒಂದರಿಂದ ಅನ್ನಭಾಗ್ಯ ಯೋಜನೆಯಡಿ ತಲಾ ಹತ್ತು ಕೆ.ಜಿ. ಅಕ್ಕಿ ವಿತರಿಸಲಾಗುತ್ತದೆ. ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಕಿವಿಮಾತು ಹೇಳಿದರು.

ನಗರದಲ್ಲಿ ಇಂದು


ವಿಶ್ವ ರಕ್ತದಾನಿಗಳ ದಿನಾಚರಣೆ: **ಉದ್ಘಾಟನೆ:** ವಿ. ಸುಮಂಗಲ, ಅಧ್ಯಕ್ಷತೆ: ವಿಜಯ ಕುಮಾರ ಪಾಟೀಲ ಶಾವಂತಗೇರ, ಅತಿಥಿ: ಶಿವಾನಂದ ತಗಡೂರು, ಉಪಸ್ಥಿತಿ: ಗೋಪಾಲ್ ಬಿ. ಹೊಸೂರು, ಆನಂದ ಎಸ್. ಜಿಗಜಿನ್ನಿ, ಆಯೋಜನೆ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಸ್ಥಳ: ಜೀನ್ ಹೆನ್ರಿ ಡ್ಯೂನಾಂಟ್ ಸಭಾಂಗಣ, ರೆಡ್‌ಕ್ರಾಸ್ ಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

‘ಮುಖ್ಯಮಂತ್ರಿ’ ನಾಟಕ ಪ್ರದರ್ಶನ: ರಚನೆ: ರಣಜಿತ್ ಕಪೂರ್, ಟಿ.ಎಸ್. ಲೋಹಿತಾಶ್ವ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ, ಭಾಗವತರು ನಾಟಕೋತ್ಸವ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಪ್ರವಚನ ವಾಹಿನಿ: ‘ವಿದುರ ನೀತಿ’ ಕುರಿತು ಉಪನ್ಯಾಸ: ಆನಂದ ತೀರ್ಥಾಚಾರ್ ಮಾಳಗಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಕೋರ್ಟ್‌ಗೆ ಡೊನಾಲ್ಡ್ ಟ್ರಂಪ್ ಹಾಜರು



ಮಿಯಾಮಿ (ಎಪಿ): ವರ್ಗೀಕೃತ ದಾಖಲೆಗಳನ್ನು ತಪ್ಪಾಗಿ ನಿರ್ವಹಿಸಿದ ಆರೋಪ ಹೊತ್ತಿರುವ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನ್ಯಾಯಾಲಯಕ್ಕೆ ಹಾಜರಾಗುವ, ಮುನ್ನ ಮಂಗಳವಾರ ಅಧಿಕಾರಿಗಳ ಬಳಿ ಶರಣಾದರು.

ಕ್ರಿಮಿನಲ್ ಪ್ರಕರಣದ ವಿಚಾರಣೆ ಸಂಬಂಧ ಮ್ಯಾಜಿಸ್ಟ್ರೇಟ್ ಮುಂದೆ ಹಾಜರಾಗಲು ಟ್ರಂಪ್ ನ್ಯಾಯಾಲಯದ ಆವರಣಕ್ಕೆ ಬಂದರು. ನ್ಯಾಯಾಲಯದ ಕಟ್ಟಡದ ಬಳಿ ಪೊಲೀಸರ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

‘ತಪ್ಪಿತಸ್ಥ ಅಲ್ಲ’: ವಿಚಾರಣೆ ವೇಳೆ, ತಾನು ತಪ್ಪಿತಸ್ಥ ಅಲ್ಲ ಎಂದು ಟ್ರಂಪ್ ಸಮರ್ಥಿಸಿಕೊಂಡರು. ರಾಷ್ಟ್ರೀಯ ರಕ್ಷಣಾ ಸೂಕ್ಷ್ಮ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಹಿಡಿದಿಟ್ಟುಕೊಂಡಿದ್ದು, ಬೇಹುಗಾರಿಕೆ ಕಾಯ್ದೆ ಉಲ್ಲಂಘನೆ, ಸುಳ್ಳು ಹೇಳಿಕೆ, ಕೆಲಸಕ್ಕೆ ಅಡಚಣೆ, ಪಿತೂರಿ ಸೇರಿದಂತೆ ಸೇರಿದಂತೆ ಹಲವು ಆರೋಪಗಳನ್ನು ಟ್ರಂಪ್ ವಿರುದ್ಧ ನಿಗದಿಪಡಿಸಲಾಗಿದೆ. ಅಲ್ಲದೆ ಟ್ರಂಪ್ ಶ್ವೇತಭವನದಿಂದ ನಿರ್ಗಮಿಸುವ ವೇಳೆ ತಮ್ಮೊಂದಿಗೆ ತೆಗೆದುಕೊಂಡು ಹೋಗಿ, ಫ್ಲಾರಿಡಾದ ಮಾರ್ ಎ ಲಾಗೋದಲ್ಲಿನ ತಮ್ಮ ಖಾಸಗಿ ಕ್ಲಬ್ ಮತ್ತು ನಿವಾಸದಲ್ಲಿ ನೂರಾರು ಸೂಕ್ಷ್ಮ ಸರ್ಕಾರಿ ದಾಖಲೆಗಳನ್ನು ಇಟ್ಟಿದ್ದರು ಎಂಬುದು ಅವರ ವಿರುದ್ಧದ ಪ್ರಮುಖ ಆರೋಪವಾಗಿದೆ. ಟ್ರಂಪ್ ಕೋರ್ಟ್ ಪ್ರವೇಶಿಸುತ್ತಿದ್ದಂತೆ ಬೆಂಬಲಿಗರು ಕೈಬೀಸಿ ಹುರಿದುಂಬಿಸಿದರು. ಕೆಲವರು ಟ್ರಂಪ್ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟಿಸಿದರು.

ಅಂಬಾನಿ ಉದ್ಯಮ ಸಮೂಹದ ಅಧಿಕಾರಿಗಳ ಭೇಟಿ– ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ

‘ಅದಾನಿ, ಅಂಬಾನಿಗಳಿಗೂ ಹೂಡಿಕೆಗೆ ಅವಕಾಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಅಂಬಾನಿ ಮತ್ತು ಅದಾನಿಗಳು ಬಂಡವಾಳ ಹೂಡಲು ಅವಕಾಶ ಇದೆ. ಇದಕ್ಕೆ ಯಾವುದೇ ನಿರ್ಬಂಧವಿಲ್ಲ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಈ ವಿಷಯ ತಿಳಿಸಿದರು.

‘ರಾಜ್ಯದಲ್ಲಿ ಹೂಡಿಕೆಗೆ ಸಂಬಂಧಿಸಿದಂತೆ ಅಂಬಾನಿ ಉದ್ಯಮ ಸಮೂಹದವರು ನನ್ನನ್ನು ಭೇಟಿ ಮಾಡಿದ್ದಾರೆ. ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿದ್ದಾರೆ. ಅಂಬಾನಿಯಾಗಲೀ, ಅದಾನಿಯಾಗಲೀ ಯಾರು ಬೇಕಾದರೂ ಬಂಡವಾಳ ಹೂಡಬಹುದು. ಇದರಿಂದ ರಾಜ್ಯಕ್ಕೆ ಪ್ರಯೋಜನವಾಗಲಿದೆ’ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

7 ಆದ್ಯತಾ ವಲಯಗಳಿಗೆ ವಿಷನ್ ಗ್ರೂಪ್

ರಾಜ್ಯದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜಿಸಲು ಸರ್ಕಾರ ಆಯ್ದ7 ವಲಯಗಳಲ್ಲಿ ವಿಷನ್ ಗ್ರೂಪ್‌ಗಳನ್ನು ರಚಿಸಲಿದೆ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ರಾಜ್ಯದ ಪ್ರಮುಖ ಕೈಗಾರಿಕೋದ್ಯಮಿಗಳೊಂದಿಗೆ ಸೋಮವಾರ ಸಂಜೆ ಸಭೆ ನಡೆಸಿದ ಅವರು ಈ ನಿರ್ಧಾರ ಪ್ರಕಟಿಸಿದರು. ಸಭೆಯಲ್ಲಿ ವಿವಿಧ ದೇಶಗಳ ರಾಯಭಾರಿಗಳೂ ಈ ಸಭೆಯಲ್ಲಿದ್ದರು.

ಉದ್ಯಮಿಗಳು, ಉನ್ನತಾಧಿಕಾರಿಗಳು ಮತ್ತು ಶಿಕ್ಷಣ ತಜ್ಞರು ಇರುವ ಈ ವಿಷನ್ ಗ್ರೂಪ್‌ಗಳು ಸೂಕ್ತ ಮಾರ್ಗದರ್ಶನ ನೀಡಲಿವೆ.


ಎಂ.ಬಿ.ಪಾಟೀಲ

ವೈಮಾನಿಕ ಮತ್ತು ರಕ್ಷಣೆ, ಮಷಿನ್‌ಟೂಲ್ಸ್, ಔಷಧ, ಕಬ್ಬಿಣ– ಉಕ್ಕು, ಸಿಮೆಂಟ್ ಉತ್ಪಾದನಾ ಕ್ಷೇತ್ರಗಳನ್ನು ಒಳಗೊಂಡ ಪ್ರಮುಖ ಉತ್ಪಾದನಾ ವಲಯ, ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನು ಹೊರತುಪಡಿಸಿದ ನವೋದ್ಯಮಗಳು, ಭವಿಷ್ಯದ ಸಂಚಾರ ವ್ಯವಸ್ಥೆ, ಗ್ರೀನ್ ಹೈಡ್ರೋಜನ್, ಆಹಾರ ಸಂಸ್ಕರಣೆ, ಜವಳಿ, ಉಗ್ರಾಣ ಮತ್ತು ಲಾಜಿಸ್ಟಿಕ್‌ಗಳನ್ನು ಆದ್ಯತೆಯ ವಲಯಗಳೆಂದು ಗುರುತಿಸಲಾಗಿದೆ ಎಂದರು.

ರಾಜ್ಯದಲ್ಲಿ ಈ ವಲಯಗಳಿಗಾಗಿ ವಿಷನ್ ಗ್ರೂಪ್‌ಗಳು ರಚನೆ ಆಗುತ್ತಿರುವುದು ಇದೇ ಮೊದಲು. ಇದಕ್ಕೆ ಮುಂಚೆ ಒಟ್ಟಾರೆ ಉದ್ಯಮದ ಅಭಿವೃದ್ಧಿಗೆ ವಿಷನ್ ಗ್ರೂಪ್ ಇತ್ತು. ಆದರೆ ವಲಯವಾರು ಮಟ್ಟದಲ್ಲಿ ಇರಲಿಲ್ಲ ಎಂದು ಪಾಟೀಲ ಹೇಳಿದರು.

‘ಈ ಸಮೂಹಗಳ ಮೇಲೆ ಯಾವುದೇ ಪ್ರಕರಣಗಳು ಇದ್ದರೆ ಅದನ್ನು ನೋಡಿಕೊಳ್ಳಲು ಕಾನೂನು ಇದೆ. ತಪ್ಪು ಮಾಡಿದ್ದರೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ಅವರ ಹೂಡಿಕೆ ನೈಜವೇ ಎಂಬುದು ಮುಖ್ಯ. ನೈಜವೇ ಆಗಿದ್ದರೆ ಹೂಡಿಕೆಗೆ ಅವಕಾಶ ಮಾಡಿಕೊಡುತ್ತೇವೆ. ಅದರಲ್ಲಿ ತಪ್ಪೇನಿದೆ’ ಎಂದು ಪಾಟೀಲ ಪ್ರಶ್ನಿಸಿದರು.

ವಿಮಾನ ನಿಲ್ದಾಣ ನಿರ್ವಹಣೆ ರಾಜ್ಯಕ್ಕೆ: ‘ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರಕ್ಕೆ ಹಸ್ತಾಂತರ ಆಗದೇ ಇರುವ ಹೊಸ ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರದ ವತಿಯಿಂದಲೇ ನಡೆಸುವ ಬಗ್ಗೆ ಚಿಂತನೆ ನಡೆಸಿದ್ದೇವೆ’ ಎಂದು ಹೇಳಿದರು.

‘ಮಹಾರಾಷ್ಟ್ರದಲ್ಲಿ ಶಿರಡಿಯ ವಿಮಾನ ನಿಲ್ದಾಣವನ್ನು ಅಲ್ಲಿನ ಸರ್ಕಾರವೇ ನೋಡಿಕೊಳ್ಳುತ್ತಿದೆ. ನಾವೂ ಅದೇ ರೀತಿಯಲ್ಲಿ ನಿರ್ವಹಣೆ ಮಾಡಬಹುದು. ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಭೂಮಿ ಮತ್ತು ಹಣವನ್ನು ನೀಡಿರುತ್ತೇವೆ. ಆದರೆ ಅದರ ಆದಾಯವನ್ನು ವಿಮಾನ ನಿಲ್ದಾಣ ಪ್ರಾಧಿಕಾರವೇ ಪಡೆಯುತ್ತದೆ. ರಾಜ್ಯ ಸರ್ಕಾರವೇ ನಡೆಸುವಂತಾದರೆ ಸರ್ಕಾರಕ್ಕೇ ಆದಾಯ ಸಿಗುತ್ತದೆ’ ಎಂದರು.

‘ಸದ್ಯಕ್ಕೆ ಶಿವಮೊಗ್ಗ ವಿಮಾನ ನಿಲ್ದಾಣವು ಕಾರ್ಯಾಚರಣೆಗೆ ಸಿದ್ಧವಾಗಿದೆ. ಇದರ ನಿರ್ವಹಣೆಗೆ ಕೇಂದ್ರ ವಿಮಾನಯಾನ ನಿರ್ದೇಶನಾಲಯ ಒಪ್ಪಿಗೆ ನೀಡಿದೆ’ ಎಂದರು.

‘ರಾಜ್ಯದಲ್ಲಿ ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸಲು ಪೂರಕ ವಾತಾವರಣ ಸೃಷ್ಟಿಸಲಾಗುವುದು. ಹೆಸರಿಗಷ್ಟೇ ಇರುವ ಏಕಗವಾಕ್ಷಿ ಯೋಜನೆಗೆ ನಿಜ ಅರ್ಥದಲ್ಲಿ ಬದಲಾವಣೆ ತಂದು ಅನಗತ್ಯ ಅಡಚಣೆಗಳನ್ನು ನಿರ್ಮೂಲನೆ ಮಾಡಲಾಗುವುದು. ಇದಕ್ಕಾಗಿ ಪಂಜಾಬ್ ಮತ್ತು ತೆಲಂಗಾಣದ ಏಕ ಗವಾಕ್ಷಿ ಮಾದರಿಯನ್ನು ಅಧ್ಯಯನ ಮಾಡಲಾಗುವುದು. ಒಂದೇ ಸೂರಿನಡಿ ಯಾವುದೇ ಅಡಚಣೆ ಇಲ್ಲದೆ ಅನುಮತಿ ನೀಡಬೇಕೆಂಬುದು ನಮ್ಮ ಸರ್ಕಾರದ ಆದ್ಯತೆ’ ಎಂದು ಹೇಳಿದರು.

‘ಕೈಗಾರಿಕೆಗಳ ಸ್ಥಾಪನೆಗೆ ಶೀಘ್ರವೇ ಅನುಮತಿ ಸಿಗುವಂತೆ ನೋಡಿಕೊಳ್ಳಲು ನಮ್ಮ ಇಲಾಖೆಯಲ್ಲೇ ಭಾರತೀಯ ಅರಣ್ಯ ಸೇವೆಯ ಪಿಸಿಸಿಎಫ್ ದರ್ಜೆಯ ಅಧಿಕಾರಿಯನ್ನು ನಿಯೋಜಿಸಲಾಗುವುದು. ಇದರಿಂದ ಪರಿಸರ ಸಂಬಂಧಿ ಸಮಸ್ಯೆಗಳಿಗೆ ತ್ವರಿತ ಪರಿಹಾರ ಸಿಗಲಿದೆ’ ಎಂದರು.

ಹಾಸಿಗೆ ಖರೀದಿ: ತನಿಖೆಗೆ ಆಗ್ರಹ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 9 ವಿದ್ಯಾರ್ಥಿನಿಲಯಗಳಿಗೆ ಪೂರೈಕೆಯಾಗಿರುವ ಹಾಸಿಗೆ ಮತ್ತು ದಿಂಬುಗಳ ಖರೀದಿಯಲ್ಲಿ ನಡೆದಿರುವ ಅಕ್ರಮದ ತನಿಖೆ ನಡೆಸುವಂತೆ ವಿವಿಯ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಈ ಬಗ್ಗೆ ಬೆಂಗಳೂರು ವಿವಿ ಕುಲಪತಿ, ಕುಲಸಚಿವರಿಗೆ ಪತ್ರ ಬರೆದಿರುವ ವಿದ್ಯಾರ್ಥಿಗಳು, ‘₹1.23 ಕೋಟಿ ವೆಚ್ಚದಲ್ಲಿ ವಿದ್ಯಾರ್ಥಿನಿಲಯಗಳಿಗೆ ಪೂರೈಕೆ ಯಾಗಿರುವ 1,848 ಹಾಸಿಗೆ ಮತ್ತು 2,273 ದಿಂಬುಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು, ಮಾರುಕಟ್ಟೆಯ ದರಕ್ಕಿಂತ ಹೆಚ್ಚು ಹಣ ನೀಡಿ ಖರೀದಿಸಲಾಗಿದೆ. ಪೂರೈಕೆಯಾಗಿರುವ ಹಾಸಿಗೆ ಮತ್ತು ದಿಂಬುಗಳು ಹರಿದು ಹೋಗಿದ್ದು, ಇದರಿಂದ ಅನೇಕ ಆರೋಗ್ಯ ಸಮಸ್ಯೆಗಳು ಕೂಡ ಉದ್ಭವಿಸುತ್ತಿವೆ’ ಎಂದು ಪತ್ರದಲ್ಲಿ ದೂರಿದ್ದಾರೆ.

ಮಹಿಷಿ ವರದಿಗೆ ಕಾನೂನು ಬಲ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಉದ್ಯೋಗ ಕನ್ನಡಿಗರಿಗೆ ಅನ್ನುವುದು ಕನಸಾಗಿಯೇ ಉಳಿದಿದೆ. ಆದ್ದರಿಂದ, ಸರೋಜಿನಿ ಮಹಿಷಿ ವರದಿಗೆ ಕಾನೂನು ಬಲ ನೀಡಿ ಸ್ಥಳೀಯರಿಗೆ ಉದ್ಯೋಗ ಸಿಗುವಂತೆ ಮಾಡಬೇಕು ಎಂದು ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ ಆಗ್ರಹಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, ‘ಪರಿಷ್ಕೃತ ಸರೋಜಿನಿ ಮಹಿಷಿ ವರದಿಯನ್ನು ಸದನದಲ್ಲಿ ಮಂಡಿಸಿ ಒಪ್ಪಿಗೆ ಪಡೆದರೆ, ಕೇಂದ್ರ ಅನುಷ್ಠಾನಗೊಳಿಸಬೇಕಾದ ಅಂಶಗಳನ್ನು ಅನುಷ್ಠಾನಗೊಳಿಸುವಂತೆ ಆಗ್ರಹಿಸಲು ರಾಜ್ಯ ಸರ್ಕಾರಕ್ಕೆ ನೈತಿಕ ಶಕ್ತಿ ಬರುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ 2008ರಿಂದ ಸ್ಥಳೀಯರಿಗೆ ಉದ್ಯೋಗ ರಾಷ್ಟ್ರೀಯ ನೀತಿಯಾಗಲಿ ಎಂದು ಪ್ರತಿಪಾದಿಸುತ್ತಿದೆ. ಆ ನಿಟ್ಟಿನಲ್ಲಿ ಏನೂ ಪ್ರಯೋಜನವಾಗಿಲ್ಲ’ ಎಂದು ಬೇಸರಿಸಿದರು.

ಕೇಂದ್ರ ಸರ್ಕಾರದ ‘ಎಂಪ್ಲಾಯ್‌ಮೆಂಟ್ ನ್ಯೂಸ್’ ಮಾದರಿಯಲ್ಲಿ ರಾಜ್ಯ ಸರ್ಕಾರವು ಕೂಡ ಕನ್ನಡದಲ್ಲಿ ಅಧಿಕೃತ ಉದ್ಯೋಗ ವಾರ್ತೆಯ ಪ್ರತಿಕೆಯನ್ನು ಪ್ರಕಟಿಸಬೇಕು. ರಾಜ್ಯದ ಎಲ್ಲ ವಲಯಗಳಲ್ಲಿಯೂ ಸೃಷ್ಟಿಯಾಗುವ ಉದ್ಯೋಗ ಮಾಹಿತಿ ನೀಡುವ ಕನ್ನಡಿಗರ ಉದ್ಯೋಗ ಮಾರ್ಗದರ್ಶಿ ಎಂಬ ವೆಬ್ ಪೋರ್ಟಲ್ ರೂಪಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರವು 2008ರಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ನೀಡಿದೆ. ಆದರೆ, ಕನ್ನಡ ಸಿಗಬೇಕಾದ ಸವಲತ್ತುಗಳನ್ನು ಇದುವರೆಗೂ ಸಾಧ್ಯವಾಗಿಲ್ಲ. ತಮಿಳಿನಲ್ಲಿ ಆಗಿರುವ ಕೆಲಸದಲ್ಲಿ ಶೇ 5ರಷ್ಟು ಕೆಲಸಗಳು ಕನ್ನಡದಲ್ಲಿ ಆಗಿಲ್ಲ. ಕನ್ನಡ ಭಾಷ ಸಮಗ್ರ ಅಭಿವೃದ್ಧಿ ವಿಧೇಯಕ–2022ರಲ್ಲಿ ಸ್ಪಷ್ಟತೆ ಇಲ್ಲ. ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಶೇ 38ರಷ್ಟಿದ್ದು, ಶೇ 68ರಷ್ಟು ಜನ ಪರಭಾಷಿಕರಿದ್ದಾರೆ. ಆದ್ದರಿಂದ ಅನ್ಯಪ್ರಾಂತೀಯ ವಲಸಿಗರ ಪರಿಣಾಮ ತಿಳಿಯಲು ಸಮಿತಿ ರಚಿಸಬೇಕು ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಹೇಳಿದರು.

ವಿಶ್ರಾಂತ ಕುಲಪತಿ ಆರ್. ಶೇಷಶಾಸ್ತ್ರಿ, ಬಿ.ವಿ. ರವಿಕುಮಾರ್, ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಇದ್ದರು.

2018ರಲ್ಲಿ ದಾಖಲಾಗಿದ್ದ ಪ್ರಕರಣ: 5 ವರ್ಷಗಳ ಬಳಿಕ ಸಿಕ್ಕಿಬಿದ್ದ ಆರೋಪಿಗಳು

₹ 7 ಕೋಟಿ ಜಿಎಸ್‌ಟಿ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಿಲು ಮುಚ್ಚಿದ್ದ ಕಂಪನಿ ಮಾಲೀಕರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಜಿಎಸ್‌ಟಿ ಸಂಖ್ಯೆ ಪಡೆದು ಕೇಂದ್ರ ಸರ್ಕಾರಕ್ಕೆ ಸುಮಾರು ₹ 7 ಕೋಟಿ ವಂಚನೆ ಮಾಡಿದ್ದ ನಾಲ್ವರು ಆರೋಪಿಗಳನ್ನು ನಗರದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ಬಾಬು ಅಲಿಯಾಸ್ ದೆಹಲಿ, ಬೆಂಗಳೂರಿನ ಜಾನಕಿರಾಮ್ ರೆಡ್ಡಿ, ಹೀರಾಲಾಲ್ ಹಾಗೂ ತೇಜ್‌ರಾಜ್ ಗಿರಿಯಾ ಬಂಧಿತರು. ನಗರದ ಉದ್ಯಮಿ ಹಮೀದ್ ರಿಜ್ವಾನ್ ಅವರು 2018ರಲ್ಲಿ ನೀಡಿದ್ದ ದೂರಿನ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಹಮೀದ್ ಅವರು 2011ರಲ್ಲಿ ಎಆರ್‌ಎಸ್ ಎಂಟರ್‌ಪ್ರೈಸಸ್ ಕಂಪನಿ ಆರಂಭಿಸಿದ್ದರು. ಈ ಕಂಪನಿ, ವ್ಯಾಟ್ ತೆರಿಗೆ ವ್ಯಾಪ್ತಿಯಲ್ಲಿತ್ತು. ಕಂಪನಿಯಿಂದ ಮರದ ಪ್ಯಾಕಿಂಗ್ ಸಾಮಗ್ರಿ ತಯಾರಿಕೆ ಹಾಗೂ ಮಾರಾಟ ಮಾಡಲಾಗುತ್ತಿತ್ತು. ವೈಯಕ್ತಿಕ ಕಾರಣಗಳಿಂದ ಮಾಲೀಕರು 2013ರಲ್ಲಿ ಕಂಪನಿ ಬಂದ್ ಮಾಡಿದ್ದರು. ನಂತರ, ಕಂಪನಿಯ ಎಲ್ಲ ಬಗೆಯ ಹಣಕಾಸಿನ ವಹಿವಾಟು ಸಹ ಸ್ಥಗಿತಗೊಂಡಿತ್ತು’ ಎಂದು ತಿಳಿಸಿದರು.

‘2017ರಲ್ಲಿ ಕಂಪನಿ ವಹಿವಾಟು ಪುನಃ ಆರಂಭಿಸಲು ಮುಂದಾಗಿದ್ದ ಮಾಲೀಕ ಹಮೀದ್, ಜಿಎಸ್‌ಟಿ ಸಂಖ್ಯೆ ಪಡೆದುಕೊಂಡಿದ್ದರು. ಇದಕ್ಕಾಗಿ ತಮ್ಮ ಪಾನ್ ಕಾರ್ಡ್ ನೀಡಿದ್ದರು. ಇವರ ಹಣಕಾಸಿನ ವಹಿವಾಟು ಪರಿಶೀಲಿಸಿದ್ದ ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತ, ಕಂಪನಿ ಸ್ಥಳಕ್ಕೆ ಭೇಟಿ ನೀಡಿದ್ದರು. ‘2017–18ರ ಅವಧಿಯಲ್ಲಿ ನಿಮ್ಮ ಪಾನ್ ಕಾರ್ಡ್ ಮೂಲಕ ಕಂಪನಿಯ ಹೆಸರಿನಲ್ಲಿ ಹಣಕಾಸು ವ್ಯವಹಾರ ನಡೆದಿದೆ. ₹ 7 ಕೋಟಿ ಜಿಎಸ್‌ಟಿ ಬಾಕಿ ಇದೆ. ಇದನ್ನು ಪಾವತಿಸಿ. ಇಲ್ಲದಿದ್ದರೆ, ನಿಮ್ಮ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ನೋಟಿಸ್ ನೀಡಿದ್ದರು.’

‘ನೋಟಿಸ್‌ಗೆ ಆಕ್ಷೇಪ ವ್ಯಕ್ತಪಡಿಸಿದ್ದ ಹಮೀದ್, ವಹಿವಾಟು ನಡೆಸಿಲ್ಲವೆಂದು ವಾದಿಸಿದ್ದರು. ಹೆಚ್ಚಿನ ಪರಿಶೀಲನೆ ನಡೆಸಿದಾಗ, ಅಪರಿಚಿತರು ಕಂಪನಿ ಹೆಸರಿನಲ್ಲಿ ವಹಿವಾಟು ಮಾಡಿರುವುದು ಗೊತ್ತಾಗಿತ್ತು. ಬಳಿಕವೇ, ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಾಗಿ ಐದು ವರ್ಷಗಳ ನಂತರ ಆರೋಪಿಗಳು ಸಿಕ್ಕಿಬಿದ್ದಿದ್ದಾರೆ’ ಎಂದು ಹೇಳಿದರು.

ಲೆಕ್ಕಾಧಿಕಾರಿ ಕಚೇರಿಯಲ್ಲಿದ್ದ ಆರೋಪಿ: ‘ಆರೋಪಿ ಜಾನಕಿರಾಮ್ ರೆಡ್ಡಿ, ನಗರದ ಲೆಕ್ಕಾಧಿಕಾರಿಯೊಬ್ಬರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ. ಈತನೇ ಹಮೀದ್ ಅವರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಜಿಎಸ್‌ಟಿ ನಂಬರ್ ಪಡೆದಿದ್ದ. ಅದೇ ನಂಬರ್‌ನಲ್ಲಿ ಇತರೆ ಆರೋಪಿಗಳು ಹಣಕಾಸಿನ ವಹಿವಾಟು ನಡೆಸಿ, ₹ 7 ಕೋಟಿ ಜಿಎಸ್‌ಟಿ ಬಾಕಿ ಉಳಿಸಿಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಬಂಧಿತ ಆರೋಪಿಗಳು, ಹಲವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಕೇಂದ್ರ ಸರ್ಕಾರಕ್ಕೆ ವಂಚನೆ ಮಾಡಿರುವ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ: ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಹಿರಿಯೂರು: ಟೈರ್ ಸಿಡಿದು ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬಾಲಕಿಯೊಬ್ಬಳು ಸ್ಥಳದಲ್ಲಿಯೇ ಸಾವನ್ನಪ್ಪಿ ಆರು ಜನರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮಂಗಳವಾರ ಸಂಜೆ ನಗರದ ರಾಷ್ಟ್ರೀಯ ಹೆದ್ದಾರಿ ನಾಲ್ಕರ ತೋಟಗಾರಿಕೆ ಇಲಾಖೆ ಸಮೀಪ ನಡೆದಿದೆ.

ಬೆಂಗಳೂರಿನ ಇಮಾನ್ ಸೂನ್ (6) ಮೃತ ಬಾಲಕಿ. ಮಾನಾರಾಂ, ಕಿರಣ್, ದಿವ್ಯ, ದೀಕ್ಷಿತಾ, ಚಂಚಲ್ ಗಾಯಗೊಂಡಿದ್ದು, ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿದೆ.

ಕಾರು ಚಿತ್ರದುರ್ಗದಿಂದ ಬೆಂಗಳೂರಿಗೆ ಹೋಗುತ್ತಿತ್ತು. ಅಪಘಾತದಲ್ಲಿ ಕಾರು ರಸ್ತೆ ವಿಭಜಕದ ಮೇಲೆ ನಿಂತಿದ್ದು, ಮುಂಭಾಗ ನಜ್ಜುಗುಜ್ಜಾಗಿದೆ.

ಕೆಲಸದಿಂದ ವಜಾ: ಬಾಂಬ್ ಬೆದರಿಕೆಯೊಡ್ಡಿದ್ದ ಉದ್ಯೋಗಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿರುವ ಆರ್‌ಎಂಜೆಡ್ ಇಕೊಸ್ಪೇಸ್ ಕ್ಯಾಂಪಸ್‌ನ ಕಂಪನಿಯೊಂದರ ಕಚೇರಿಗೆ ಬಾಂಬ್ ಬೆದರಿಕೆ ಕರೆ ಮಾಡಿದ್ದ ಆರೋಪದಡಿ, ಅದೇ ಕಂಪನಿಯ ಮಾಜಿ ಉದ್ಯೋಗಿ ನವನೀತ್ ಪ್ರಸಾದ್‌ನನ್ನು (25) ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೇರಳದ ನವನೀತ್, ಬೈಯಪ್ಪನಹಳ್ಳಿಯಲ್ಲಿ ವಾಸವಿದ್ದ. ಮಂಗಳವಾರ ಬೆಳಿಗ್ಗೆ ಕಂಪನಿಯ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಬಾಂಬ್ ಬೆದರಿಕೆಯೊಡ್ಡಿದ್ದ. ಕಂಪನಿಯ ಆಡಳಿತ ಮಂಡಳಿ ನೀಡಿದ್ದ ದೂರು ಆಧರಿಸಿ, ನವನೀತ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ನವನೀತ್, ಕಚೇರಿಯಲ್ಲಿ ದುರ್ವರ್ತನೆ ತೋರುತ್ತಿದ್ದ. ಕೆಲಸದಿಂದ ವಜಾ ಮಾಡುವುದಾಗಿ ಹೇಳಿ ಆತನನ್ನು ಇತ್ತೀಚೆಗಷ್ಟೇ ಮನೆಗೆ ಕಳುಹಿಸಲಾಗಿತ್ತು. ರಾಜೀನಾಮೆ ನೀಡುವಂತೆಯೂ ತಾಕೀತು ಮಾಡಲಾಗಿತ್ತು. ಇದರಿಂದ ಸಿಟ್ಟಾದ ಆರೋಪಿ, ಬಾಂಬ್ ಬೆದರಿಕೆ ಒಡ್ಡಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದರು.

500 ಉದ್ಯೋಗಿ ಹೊರಗೆ ಕಳುಹಿಸಿ ಶೋಧ: ‘ಅಮೆರಿಕ ಕಂಪನಿಯೊಂದರ ಕಚೇರಿ ಆರ್‌ಎಂಜೆಡ್ ಇಕೊಸ್ಪೇಸ್ ಕ್ಯಾಂಪಸ್‌ನಲ್ಲಿದ್ದು, 500 ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಕಚೇರಿ ದೂರವಾಣಿ ಸಂಖ್ಯೆಗೆ ಕರೆ ಮಾಡಿದ್ದ ಆರೋಪಿ, ‘ನಿಮ್ಮ ಕಚೇರಿಯಲ್ಲಿ ಬಾಂಬ್ ಇರಿಸಿದ್ದೇನೆ. ಸದ್ಯದಲ್ಲೇ ಸ್ಫೋಟವಾಗುತ್ತದೆ’ ಎಂಬುದಾಗಿ ಬೆದರಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಗಾಬರಿಗೊಂಡಿದ್ದ ಸಿಬ್ಬಂದಿ, ಠಾಣೆಗೆ ಮಾಹಿತಿ ನೀಡಿದ್ದರು. ಬಾಂಬ್ ಬೆದರಿಕೆಯಿಂದಾಗಿ ಆರ್‌ಎಂಜೆಡ್ ಇಕೊಸ್ಪೇಸ್ ಕ್ಯಾಂಪಸ್‌ನಲ್ಲಿ ಆತಂಕ ಹೆಚ್ಚಾಗಿತ್ತು. ಶ್ವಾನ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸಮೇತ ಸ್ಥಳಕ್ಕೆ ಹೋಗಿದ್ದೆವು. 500 ಉದ್ಯೋಗಿಗಳನ್ನು ಹೊರಗೆ ಕಳುಹಿಸಿ, ಎರಡು ಗಂಟೆ ಶೋಧ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತು ಸಿಗದಿದ್ದರಿಂದ, ಇದೊಂದು ಹುಸಿ ಬಾಂಬ್ ಕರೆ ಎಂಬುದಾಗಿ ಘೋಷಿಸಲಾಯಿತು’ ಎಂದು ತಿಳಿಸಿದರು.

ಅಧಿಕಾರಿಗಳಿಗೆ ನಿರಂತರ ಕರೆ: ‘ಆರೋಪಿ ನವನೀತ್, ಕೆಲಸದಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಿದ್ದ. ಹೀಗಾಗಿ, ಕಂಪನಿಯ ಹಿರಿಯ ಅಧಿಕಾರಿಗಳ ವೈಯಕ್ತಿಕ ಮೊಬೈಲ್ ನಂಬರ್‌ಗೆ ಹಲವು ಬಾರಿ ಕರೆ ಮಾಡಿದ್ದ. ಅವರು ಕರೆ ಸ್ವೀಕರಿಸಿರಲಿಲ್ಲ. ಬಳಿಕವೇ ಆತ, ಕಚೇರಿಯ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಬಾಂಬ್ ಬೆದರಿಕೆ ಹಾಕಿದ್ದ. ಇದೇ ಸುಳಿವಿನಿಂದ ಆರೋಪಿ ಸಿಕ್ಕಿಬಿದ್ದ’ ಎಂದು ಪೊಲೀಸರು ಹೇಳಿದರು.

ಖಾಸಗಿ ಬಸ್‌ಗಳಿಗೂ ‘ಶಕ್ತಿ’ ಸೌಲಭ್ಯ ವಿಸ್ತರಿಸಲು ಮನವಿ

ಪ್ರಜಾವಾಣಿ ವಾರ್ತೆ

ಕೊಪ್ಪ (ಚಿಕ್ಕಮಗಳೂರು): ‘ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸುವ ‘ಶಕ್ತಿ’ ಯೋಜನೆಯನ್ನು ರಾಜ್ಯ ಸರ್ಕಾರವು ಖಾಸಗಿ ಬಸ್‌ಗಳಿಗೂ ವಿಸ್ತರಿಸಬೇಕು’ ಎಂದು ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘದವರು ಮನವಿ ಮಾಡಿದ್ದಾರೆ.

‘ರಾಜ್ಯ ಸರ್ಕಾರದ ‘ಶಕ್ತಿ’ ಯೋಜನೆಯನ್ನು ಮಲೆನಾಡು ಭಾಗದ ಖಾಸಗಿ ಬಸ್ ಮಾಲೀಕರಾದ ನಾವು ಸ್ವಾಗತಿಸುತ್ತೇವೆ. ಈ ಸೌಲಭ್ಯವನ್ನು ಸರ್ಕಾರಿ ಬಸ್‌ಗಳಿಗೆ ಮಾತ್ರ ಸೀಮಿತಗೊಳಿಸದೆ, ಖಾಸಗಿ ಬಸ್‌ಗಳಿಗೂ ವಿಸ್ತರಿಸಬೇಕು, ಖಾಸಗಿ ಬಸ್‌ಗಳಿಗೆ ಉಚಿತ ಪ್ರಯಾಣದ ಅನುದಾನವನ್ನು ಒದಗಿಸಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತೇವೆ’ ಎಂದು ಸಂಘದ ಉಪಾಧ್ಯಕ್ಷ ಬಿ.ಎಂ.ಕೃಷ್ಣಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮಲೆನಾಡು ಭಾಗದ ಬೆಟ್ಟ, ಗುಡ್ಡ, ಕಣಿವೆಯ ದುರ್ಗಮ ಪ್ರದೇಶಗಳಲ್ಲಿ ಬಸ್ ಸಂಚಾರ ನಡೆಸಲು ಹೆಚ್ಚಿನ ಖರ್ಚಾದರೂ ಪ್ರಯಾಣಿಕರಿಗೆ ಉತ್ತಮ ಸೇವೆ ನೀಡುತ್ತಾ ಬಂದಿದ್ದೇವೆ. ಹಿರಿಯ ನಾಗರಿಕರು, ಅಂಗವಿಕಲರು, ಸ್ವಾತಂತ್ರ್ಯ ಯೋಧರಿಗೆ, ಸೈನಿಕರಿಗೆ, ಶಾಲಾ ಮಕ್ಕಳಿಗೆ ಹಾಗೂ ನಿತ್ಯ ಸಂಚರಿಸುವ ಪ್ರಯಾಣಿಕರಿಗೆ ಶೇ50 ರಷ್ಟು ರಿಯಾಯಿತಿ ಸೌಲಭ್ಯವನ್ನೂ ನೀಡುತ್ತಿದ್ದೇವೆ’ ಎಂದು ಅವರು ಹೇಳಿದ್ದಾರೆ.

ಸಂಚಾರ ನಿಯಂತ್ರಣ ಕೇಂದ್ರಕ್ಕೆ ಡಿಜಿ–ಐಜಿಪಿ ಅಲೋಕ್ ಮೋಹನ್ ಭೇಟಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ನಿಯಂತ್ರಣ ಕೇಂದ್ರಕ್ಕೆ (ಟಿಎಂಸಿ) ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಅಲೋಕ್ ಮೋಹನ್ ಅವರು ಮಂಗಳವಾರ ಭೇಟಿ ನೀಡಿದರು.

ನಗರದ ಹಲವು ಪ್ರದೇಶಗಳಲ್ಲಿ ನಿತ್ಯವೂ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಈ ಬಗ್ಗೆ ದೂರುಗಳು ಬರುತ್ತಿವೆ. ದಟ್ಟಣೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ಇತ್ತೀಚಿಗೆ ನಡೆದ ಸಭೆಯಲ್ಲಿ ಸೂಚನೆ ನೀಡಿದ್ದಾರೆ.

ಇದೇ ಕಾರಣಕ್ಕೆ ಕೇಂದ್ರಕ್ಕೆ ಭೇಟಿ ನೀಡಿದ್ದ ಅಲೋಕ್‌ಮೋಹನ್, ಸಂಚಾರ ಸ್ಥಿತಿ–ಗತಿ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಯಾವುದಾದರೂ ಸ್ಥಳದಲ್ಲಿ ದಟ್ಟಣೆ ಉಂಟಾದರೆ, ಅದರ ನಿಯಂತ್ರಣಕ್ಕೆ ಯಾವೆಲ್ಲ ಕ್ರಮ ಕೈಗೊಳ್ಳಲಾಗುತ್ತದೆ? ಎಂಬುದನ್ನು ಅಲೋಕ್ ಮೋಹನ್ ತಿಳಿದುಕೊಂಡರು. ಅತೀ ಹೆಚ್ಚು ಹಾಗೂ ಹೆಚ್ಚು ದಟ್ಟಣೆ ಉಂಟಾಗುವ ರಸ್ತೆಗಳ ಬಗ್ಗೆ ತಿಳಿದುಕೊಂಡರು. ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಪತ್ತೆ ಮತ್ತು ದಂಡ ವಸೂಲಿ ಪ್ರಕ್ರಿಯೆ ಬಗ್ಗೆ ಮಾಹಿತಿ ಪಡೆದುಕೊಂಡರು.


ನಗರದ ಸಂಚಾರ ನಿಯಂತ್ರಣ ಕೇಂದ್ರಕ್ಕೆ (ಟಿಎಂಸಿ) ಡಿಜಿ–ಐಜಿಪಿ ಅಲೋಕ್ ಮೋಹನ್ ಮಂಗಳವಾರ ಭೇಟಿ ನೀಡಿದರು

ಹಲವು ವೃತ್ತಗಳಲ್ಲಿ ಅಳವಡಿಸಿರುವ ಕ್ಯಾಮೆರಾಗಳ ಮೂಲಕ ದೃಶ್ಯಗಳನ್ನು ವೀಕ್ಷಿಸುವ ವ್ಯವಸ್ಥೆ ಕೇಂದ್ರದಲ್ಲಿದೆ. ಈ ಬಗ್ಗೆ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ಡಿಜಿ–ಐಜಿಪಿ ಅವರಿಗೆ ಮಾಹಿತಿ ನೀಡಿದರು.

ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಇದ್ದರು.

ವಿಐಎಸ್‌ಎಲ್ ಪುನರುಜ್ಜೀವನಕ್ಕೆ ಸಂಸದ ರಾಘವೇಂದ್ರ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು (ವಿಐಎಸ್‌ಎಲ್) ಪುನರುಜ್ಜೀವನಗೊಳಿಸಲು ಕೇಂದ್ರ ಸರ್ಕಾರ ತುರ್ತಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಭಾರತೀಯ ಉಕ್ಕು ಪ್ರಾಧಿಕಾರದ ಅಧ್ಯಕ್ಷ ಅಮರೇಂದು ಪ್ರಕಾಶ್ ಅವರಿಗೆ ಮಂಗಳವಾರ ಮನವಿ ಮಾಡಿದರು.

ಶಿವಮೊಗ್ಗ ಜಿಲ್ಲೆಯ ವಿಶೇಷವಾಗಿ ಭದ್ರಾವತಿಯ ಆರ್ಥಿಕ ಅಭಿವೃದ್ಧಿ ಮತ್ತು ನೌಕರರ ಹಿತದೃಷ್ಟಿಯಿಂದ ಸ್ಥಾವರವನ್ನು ಮುಚ್ಚುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು. ಸ್ಥಾವರ ಪುನಶ್ಚೇತನ ಮಾಡಲು ಅಗತ್ಯ ಬಂಡವಾಳ ಒದಗಿಸಬೇಕು ಹಾಗೂ ಸ್ಥಗಿತಗೊಂಡಿರುವ ಎಲ್ಲ ಉತ್ಪಾದನಾ ಘಟಕಗಳನ್ನು ಪುನರಾರಂಭಿಸಬೇಕು ಎಂದು ಕೋರಿದರು.

ಕಂಪನಿಯಲ್ಲಿ ಕಾರ್ಯನಿರ್ವಾಹಕರು ಸೇರಿದಂತೆ ಒಟ್ಟು ಉದ್ಯೋಗಿಗಳ ಸಂಖ್ಯೆ 280 ಎಂದು ಸಂಸದರು ತಮ್ಮ ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಇದು ಒಟ್ಟು 1,340 ಗುತ್ತಿಗೆ ಕಾರ್ಮಿಕರನ್ನು ಹೊಂದಿದೆ. 10 ಸಾವಿರ ಕುಟುಂಬಗಳು ನೇರವಾಗಿ ಮತ್ತು ಪರೋಕ್ಷವಾಗಿ ತಮ್ಮ ಜೀವನೋಪಾಯಕ್ಕಾಗಿ ಈ ಉಕ್ಕು ಸ್ಥಾವರವನ್ನು ಅವಲಂಬಿಸಿವೆ ಎಂದು ತಿಳಿಸಿದ್ದಾರೆ.

ಪುನರುಜ್ಜೀವನದ ಭಾಗವಾಗಿ ಈ ಕಾರ್ಖಾನೆಗೆ ಬಳ್ಳಾರಿ ಜಿಲ್ಲೆಯಲ್ಲಿ 140 ಹೆಕ್ಟೇರ್ ಕಬ್ಬಿಣದ ಅದಿರು ಗಣಿಗಾರಿಕೆ ನೀಡಲು ಪ್ರಯತ್ನಿಸಲಾಗಿತ್ತು. ಆದರೆ, ದಾವೆಯ ಹಂತಕ್ಕೆ ಹೋಗಿದ್ದರಿಂದ ಇದನ್ನು ಕಾರ್ಯಗತಗೊಳಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ, ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು ಉಕ್ಕು ಸ್ಥಾವರ ಮುಚ್ಚುವ ಪ್ರಕ್ರಿಯೆ ಆರಂಭಿಸಿದೆ. ಇದರ ಬದಲು ಸ್ಥಾವರನನ್ನು ಹೆಚ್ಚು ಕಾರ್ಯಸಾಧ್ಯವಾದ ಘಟಕವಾಗಿ ಮೇಲ್ದರ್ಜೆಗೆ ಏರಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ನೀಟ್: ಧ್ರುವ ಅಡ್ವಾಣಿ ರಾಜ್ಯಕ್ಕೆ ಮೊದಲಿಗ

ಒಂದನೇ ಪುಟದಿಂದ...

ವಿದ್ಯಾರ್ಥಿನಿ ಲಾವಣ್ಯ ಗುಪ್ತಾ 1018 ರ್‍ಯಾಂಕ್ ಪಡೆದಿದ್ದಾರೆ.

ಪರೀಕ್ಷೆ ಬರೆದಿದ್ದ ರಾಜ್ಯದ 1.34 ಲಕ್ಷ ವಿದ್ಯಾರ್ಥಿಗಳಲ್ಲಿ 75248 ಮಂದಿ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ಕಳೆದ ವರ್ಷ ಈ ಸಂಖ್ಯೆ 72262 ಇತ್ತು.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಪಶುವೈದ್ಯಕೀಯ, ಹೋಮಿಯೊಪಥಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಪ್ರತಿ ವರ್ಷ ’ನೀಟ್‘ ನಡೆಸುತ್ತದೆ. 2022–23ನೇ ಸಾಲಿನ ಪರೀಕ್ಷೆ ಮೇ 7ರಂದು ದೇಶದಾದ್ಯಂತ ನಡೆದಿತ್ತು. ಇಂಗ್ಲಿಷ್, ಹಿಂದಿ, ಅಸ್ಸಾಮಿ, ಬೆಂಗಾಲಿ, ಗುಜರಾತಿ, ಮಲಯಾಳಂ, ಕನ್ನಡ, ಮರಾಠಿ, ತಮಿಳು, ತೆಲುಗು, ಸೇರಿದಂತೆ 13 ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿತ್ತು. ರಾಜ್ಯದ 29 ನಗರಗಳ 81 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದ್ದವು. ಮಾಹಿತಿಗೆ: nta.neet.nic.in ಸಂಪರ್ಕಿಸಬಹುದು.

ರಾಜ್ಯದ ವೈದ್ಯಕೀಯ ಸೀಟುಗಳ ಸಂಖ್ಯೆ ಹೆಚ್ಚಳ: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯ ಸರ್ಕಾರಿ ಕೋಟಾದಡಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಸಂಖ್ಯೆ ಏರಿಕೆಯಾಗಿದೆ. ಸರ್ಕಾರಿ ಕೋಟಾದಡಿ ಇಲಾಖೆಯಿಂದ ಲಭ್ಯವಿರುವ ಅಂಕಿಅಂಶಗಳ ಪ್ರಕಾರ ಒಟ್ಟು ಸೀಟುಗಳ ಸಂಖ್ಯೆ 4,735ರಿಂದ 4,899ಕ್ಕೆ ಏರಿದೆ. ಲಭ್ಯವಿರುವ ಒಟ್ಟು ವೈದ್ಯಕೀಯ ಸೀಟುಗಳ ಸಂಖ್ಯೆ 11,320. ವೈದ್ಯಕೀಯ ಶಿಕ್ಷಣ ಇಲಾಖೆ ಮೂಲಗಳ ಪ್ರಕಾರ ಇನ್ನೂ 150 ಸೀಟುಗಳು ಸೇರ್ಪಡೆಯಾಗುವ ಸಾಧ್ಯತೆ ಇದೆ. ಚಿತ್ರದುರ್ಗದಲ್ಲಿ ಹೊಸದಾಗಿ ಸ್ಥಾಪಿಸಲಾಗಿರುವ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲೇ 314 ಸೀಟುಗಳು ದೊರೆಯಲಿವೆ. ಚನ್ನಪಟ್ಟಣದ ಒಂದು ಖಾಸಗಿ ವೈದ್ಯಕೀಯ ಕಾಲೇಜು 150, ಅಂಬೇಡ್ಕರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ 50, ಕಲಬುರಗಿಯ ಇಎಸ್‌ಐ ವೈದ್ಯಕೀಯ ಕಾಲೇಜು 25 ಸೀಟುಗಳ ಹೆಚ್ಚಳಕ್ಕೆ ರಾಷ್ಟ್ರೀಯ ವೈದ್ಯ ಕೀಯ ಮಂಡಳಿಯಿಂದ (ಎನ್‌ಎಂಸಿ) ಅನುಮತಿ ಪಡೆದಿವೆ.

ನೀಟ್: ಇಬ್ಬರಿಗೆ ಪ್ರಥಮ ರ್‍ಯಾಂಕ್

ನವದೆಹಲಿ (ಪಿಟಿಐ): ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ‘ನೀಟ್–2023’ರ ಫಲಿತಾಂಶ ಪ್ರಕಟವಾಗಿದ್ದು, ಮೊದಲ ರ್‍ಯಾಂಕ್ ಅನ್ನು ಇಬ್ಬರು ವಿದ್ಯಾರ್ಥಿಗಳು ಹಂಚಿಕೊಂಡಿದ್ದಾರೆ. ಉತ್ತರ ಪ್ರದೇಶದ ಅತ್ಯಧಿಕ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ.

ತಮಿಳುನಾಡಿನ ಪ್ರಭಾಂಜನ್ ಜೆ. ಮತ್ತು ಆಂಧ್ರದ ಬೋರಾ ವರುಣ್ ಚಕ್ರವರ್ತಿ ಶೇ 99.99ರಷ್ಟು ಅಂಕ ಗಳಿಸಿದ್ದು, ಪ್ರಥಮ ರ್‍ಯಾಂಕ್ ಹಂಚಿಕೊಂಡಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಂಗಳವಾರ ಪ್ರಕಟಿಸಿದೆ. ಪರೀಕ್ಷೆಯನ್ನು ಒಟ್ಟು 20.38 ಲಕ್ಷ ಅಭ್ಯರ್ಥಿಗಳು ಬರೆದಿದ್ದು, ಈ ಪೈಕಿ 11.45 ಲಕ್ಷ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ರಾಜ್ಯಗಳ ಪೈಕಿ ಉತ್ತರಪ್ರದೇಶದಿಂದ ಗರಿಷ್ಠ ಅಂದರೆ 1.39 ಲಕ್ಷ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ (1.31 ಲಕ್ಷ), ರಾಜಸ್ಥಾನ (1 ಲಕ್ಷಕ್ಕೂ ಅಧಿಕ) ಇದೆ. ಉತ್ತರಪ್ರದೇಶ ಮತ್ತು ಮಹಾರಾಷ್ಟ್ರ ಹೆಚ್ಚಿನ ಜನಸಂಖ್ಯೆ ಇರುವ ರಾಜ್ಯಗಳಾಗಿದ್ದು, ಜನಸಂಖ್ಯೆ ಆಧಾರದಲ್ಲಿ ಮೊದಲ 10 ರಾಜ್ಯಗಳ ಪಟ್ಟಿಯಲ್ಲಿ ರಾಜಸ್ಥಾನ ಕೂಡಾ ಇದೆ.

ವಾಹನದಟ್ಟಣೆಗೆ ಪರಿಹಾರ ಕಲ್ಪಿಸಲು ಡಿಸಿಎಂ ಶಿವಕುಮಾರ್ ನಗರ ಸುತ್ತಾಟ

25 ವರ್ಷಗಳ ದೂರದೃಷ್ಟಿಯ ಮೇಲ್ಸೇತುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರದಲ್ಲಿ ದಟ್ಟಣೆಗೆ ಕಾರಣವಾಗಿರುವ ಪ್ರದೇಶಗಳಲ್ಲಿ ಪರಿಶೀಲನೆ ನಡೆಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 25 ವರ್ಷಗಳ ದೂರ ದೃಷ್ಟಿಯಲ್ಲಿ ಮೇಲ್ಸೇತುವೆ, ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

‘ಹೆಬ್ಬಾಳ ಹಾಗೂ ಕೆ.ಆರ್. ಪುರಗಳಲ್ಲಿ ಎಲ್ಲೆಲ್ಲಿ ಸುರಂಗ ಮಾರ್ಗ ನಿರ್ಮಿಸಲು ಸಾಧ್ಯ ಎನ್ನುವುದನ್ನು ಪರಿಶೀಲಿಸಲಾಗುವುದು. ಅಲ್ಪದೂರದ ಮೇಲ್ಸೇತುವೆ ಜೊತೆಗೆ 25 ವರ್ಷಗಳ ದೂರದೃಷ್ಟಿಯಿಂದ ಬಹುದೂರದ ಮೇಲ್ಸೇತುವೆ ಕುರಿತು ಚರ್ಚೆ ಮಾಡಲಾಗಿದೆ. ಜನರಿಂದ ಆಸ್ತಿಗಳನ್ನು ವಶಪಡಿಸಿಕೊಳ್ಳದೆಯೇ ಎಲ್ಲಿ ಎಷ್ಟು ಕೆಲಸ ಮಾಡಬಹುದು ಎಂದು ಪರಿಶೀಲನೆ ಮಾಡಲಾಗುತ್ತಿದೆ. ಬೆಂಗಳೂರಿನ ನಾಗರಿಕರು ಹಾಗೂ ನಗರದ ಬಗ್ಗೆ ಕಾಳಜಿ–ದೂರದೃಷ್ಟಿ ಹೊಂದಿರುವವರ ತಜ್ಞರ ಜೊತೆ ಸಭೆ ಮಾಡಿ, ಈ ಬಗ್ಗೆ 15 ದಿನಗಳಲ್ಲಿ ತೀರ್ಮಾನ ಮಾಡುತ್ತೇವೆ’ ಎಂದು ಶಿವಕುಮಾರ್ ಹೇಳಿದರು.


ಬಿಡಿಎ ಕೇಂದ್ರ ಕಚೇರಿಯಲ್ಲಿ ಮಂಗಳವಾರ ನಡೆಸಿದ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಡಿಎ ಆಯುಕ್ತ ಕುಮಾರ್ ನಾಯಕ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಡಿಸಿಎಂ ಆಪ್ತ ಕಾರ್ಯದರ್ಶಿ ರಾಜೇಂದ್ರ ಪ್ರಸಾದ್ ಇದ್ದರು.

ಹೆಬ್ಬಾಳ ಜಂಕ್ಷನ್

ಡಿ.ಕೆ. ಶಿವಕುಮಾರ್ ಅವರು ಮೊದಲು ಹೆಬ್ಬಾಳ ಜಂಕ್ಷನ್‌ಗೆ ಭೇಟಿ ನೀಡಿ ಮೇಲ್ಸೇತುವೆ ನಿರ್ಮಾಣ, ಸುತ್ತಮುತ್ತ ಪ್ರದೇಶದ ಪರಿಶೀಲನೆ ನಡೆಸಿದರು. ಸಂಚಾರ ದಟ್ಟಣೆ ನಿಯಂತ್ರಣ, ರಸ್ತೆ, ಮೇಲ್ಸೇತುವೆ ವಿಸ್ತರಣೆ ಹಾಗೂ ಹೆಬ್ಬಾಳ ಕೆರೆಯ ಸೌಂದರ್ಯಕ್ಕೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದರು. ಅಲ್ಲದೆ 2047ರ ವೇಳೆಗೆ ಹೆಚ್ಚಾಗುವ ವಾಹನ ದಟ್ಟಣೆಗೆ ಯಾವ ರೀತಿ ಕ್ರಮ ಕೈಗೊಳ್ಳಬಹುದು ಎಂದು ವಿವರಣೆ ನೀಡಿದರು. 63 ಕಿ.ಮೀ. ಅವಳಿ ಸುರಂಗ ಮಾರ್ಗ ನಿರ್ಮಾಣದ ಬಗ್ಗೆ ಸಲಹೆ ನೀಡಿದರು. ಹೆಬ್ಬಾಳದಲ್ಲಿ ನಮ್ಮ ಮೆಟ್ರೊ ಸ್ಟೇಷನ್, ಮೆಟ್ರೊ ಮಾರ್ಗಗಳ ನಿರ್ಮಾಣದ ಬಗ್ಗೆ ಮಾಹಿತಿ ಪಡೆದರು.



ಹೆಬ್ಬಾಳ ಸೇತುವೆ ಜಂಕ್ಷನ್‌ನಲ್ಲಿ ಮೇಲ್ಸೇತುವೆ, ನಮ್ಮ ಮೆಟ್ರೊ ಕಾಮಗಾರಿಗಳನ್ನು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮಂಗಳವಾರ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು



ಎಚ್‌.ಬಿ.ಆರ್‌. ಬಡಾವಣೆಯ 5ನೇ ಬ್ಲಾಕ್‌ನಲ್ಲಿ ರಾಜಕಾಲುವೆಯಲ್ಲಿ ಮಂಗಳವಾರ ಹೂಳೆತ್ತುವ ಕೆಲಸ ನಡೆಯಿತು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

‘ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆಗೆ ಬಿಎಂಆರ್‌ಸಿಎಲ್ ಸೇರಿದಂತೆ ಯಾರ ವಿರೋಧವೂ ಇಲ್ಲ. ಗುಣಮಟ್ಟದ ಕೆಲಸವಾಗಬೇಕು ಎಂಬುದೇ ನಮ್ಮ ಗುರಿ. ಹೆಬ್ಬಾಳ ಮೇಲ್ಸೇತುವೆ ಮರು ವಿನ್ಯಾಸಕ್ಕೆ ಬಿಡಿಎ ಮಾಜಿ ಅಧ್ಯಕ್ಷ ವಿಶ್ವನಾಥ್ ಅವರು ಪೂಜೆ ಮಾಡಿದ್ದಾರೆ. ಅದರ ಬಗ್ಗೆ ಪರಿಶೀಲಿಸುತ್ತೇವೆ. ತಾಂತ್ರಿಕವಾಗಿ, ಅನುಕೂಲಕರವಾಗಿದ್ದರೆ ನಾವು ಅದನ್ನು ಮುಂದುವರಿಸುತ್ತೇವೆ. ನಾವು ಎಲ್ಲರ ಸಲಹೆ ಕೇಳುತ್ತೇವೆ’ ಎಂದು ಶಿವಕುಮಾರ್ ತಿಳಿಸಿದರು.

ನೀರುಗಾಲುವೆ ಪರಿಶೀಲನೆ

ಹೊರ ವರ್ತುಲ ರಸ್ತೆ, ನಾಗವಾರ ಮೇಲ್ಸೇತುವೆ, ಟೆಲಿಕಾಂ ಲೇಔಟ್‌ಗೆ ಭೇಟಿ ನೀಡಿದ ಡಿಸಿಎಂ, ನೀರುಗಾಲುವೆ ಕಾಮಗಾರಿ ಪರಿಶೀಲನೆ ನಡೆಸಿದರು. ಈ ಪ್ರದೇಶ ಹಿಂದೆ ಮಳೆ ಬಂದಾಗಲೆಲ್ಲಾ ಜಲಾವೃತವಾಗಿತ್ತು. ಬಿಬಿಎಂಪಿ ರಾಜಕಾಲುವೆ, ತಡೆಗೋಡೆ ಕಾಮಗಾರಿ ಕೈಗೆತ್ತಿಕೊಂಡಿದ್ದು, ಅದರ ಪರಿಶೀಲನೆ ನಡೆಸಿದರು. ಕಲ್ಯಾಣ ನಗರ, ಎಚ್‌ಆರ್‌ಬಿಆರ್ ಲೇಔಟ್‌ಗಳಲ್ಲಿ ನೀರು ಕಾಲುವೆ ಕಾಮಗಾರಿ ಪರಿಶೀಲನೆ ನಡೆಸಿದರು. ಕೆ.ಆರ್ ಪುರದಲ್ಲಿ ನಮ್ಮ ಮೆಟ್ರೊ ಕಾಮಗಾರಿ ವೀಕ್ಷಿಸಿದರು.

‘ಕಾಲುವೆಗಳ ಹೂಳು ಎತ್ತಿದ ನಂತರ ಆ ಹೂಳನ್ನು ಎಲ್ಲಿ ಹಾಕಲಾಗುತ್ತಿದೆ ಎಂಬುದರ ಬಗ್ಗೆ ಮಾಹಿತಿ ಕೇಳಿದ್ದೇನೆ. ರಾಜಕಾಲುವೆಗಳ ಹೂಳು ಎಲ್ಲಿ ಹೋಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಾಗಬೇಕು. ಅಲ್ಲದೆ, ಕಟ್ಟಡ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಸುರಿಯಲಾಗುತ್ತಿದೆ. ಈ ಬಗ್ಗೆಯೂ ಮಾಹಿತಿ ಸಂಗ್ರಹಿಸಬೇಕಿದೆ. ಲಾರಿ-ಟ್ರ್ಯಾಕ್ಟರ್ ಮಾಲೀಕರು ಈ ಬಗ್ಗೆ ಮಾಹಿತಿ ನೀಡಬೇಕು. ಸ್ಥಳೀಯ ಪೊಲೀಸ್ ಠಾಣೆಗಳು ನಿಗಾವಹಿಸುವಂತೆ ಸೂಚಿಸಲಾಗಿದೆ’ ಎಂದು ಡಿಸಿಎಂ ಹೇಳಿದರು.

‘ನಮ್ಮ ಮೆಟ್ರೊ’ ರಾತ್ರಿ ಕಾಮಗಾರಿ..

‘ನಮ್ಮ ಮೆಟ್ರೊ ಕಾಮಗಾರಿ ರಾತ್ರಿ ವೇಳೆಯೂ ನಡೆಯುತ್ತಿದೆ. ಕಾಮಗಾರಿಗಳು ತ್ವರಿತಗತಿಯಲ್ಲಿ ನಡೆಯುವಂತೆ ಅನುವು ಮಾಡಿಕೊಡಲು ಪೊಲೀಸ್ ಅಧಿಕಾರಿಗಳ ಜತೆಗೂ ಚರ್ಚೆ ಮಾಡಲಾಗುತ್ತಿದೆ. ಒಂದು ನಿಮಿಷವೂ ಹೆಬ್ಬಾಳ ಮೇಲ್ಸೇತುವೆ ಮೇಲೆ ವಾಹನ ಸಂಚಾರ ನಿಲ್ಲಿಸಲ್ಲ. ಮೆಟ್ರೊ ಕಾಮಗಾರಿ ಆರಂಭವಾದ್ರೂ ವಾಹನ ದಟ್ಟಣೆಯಾಗದಂತೆ ನೋಡಿಕೊಳ್ಳುತ್ತೇವೆ’ ಎಂದು ಶಿವಕುಮಾರ್ ತಿಳಿಸಿದರು.

ಪ್ರತಿಭಟನೆ ಮಾಡ್ತೀಯಾ...?

ಟಿನ್ ಫ್ಯಾಕ್ಟರಿ ಬಳಿ ಪರಿಶೀಲನೆಗೆ ಬಂದ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕ ಭೈರತಿ ಬಸವರಾಜು ಹೂಗುಚ್ಛ ನೀಡಿ ಸ್ವಾಗತಿಸಿದಾಗ, ‘ಸಭೆ ಕರೆದರೆ ಪ್ರತಿಭಟನೆ ಮಾಡಿಕೊಂಡು ಹೋಗ್ತಿಯಾ... ಈಗ..’ ಎಂದು ಛೇಡಿಸಿದರು.

‘ನಮಗೆ ಆಧಾರ್ ಹಾಗೂ ಮತದಾರರ ಗುರುತಿನ ಚೀಟಿ ಇಲ್ಲ. ಹೀಗಾಗಿ ಪೌರ ಕಾರ್ಮಿಕ ಗುರುತಿನ ಚೀಟಿಗೆ ಉಚಿತ ಟಿಕೆಟ್ ಪ್ರಯಾಣಕ್ಕೆ ಅವಕಾಶ ಕಲ್ಪಿಸಿ’ ಎಂದು ಮಹಿಳಾ ಪೌರ ಕಾರ್ಮಿಕರು ಮನವಿ ಮಾಡಿದರು. ಈ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಡಿಸಿಎಂ ಸೂಚಿಸಿದರು.

ಸುದ್ದಿ 2 ನಿಮಿಷ

ಪ್ರಾಸಿಕ್ಯೂಷನ್ ಇಲಾಖೆ: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಪ್ರಾಸಿಕ್ಯೂಷನ್ ಇಲಾಖೆಯ ಪ್ರಭಾರ ನಿರ್ದೇಶಕರನ್ನಾಗಿ ಎಚ್.ಕೆ. ಜಗದೀಶ್ ಅವರನ್ನು ಮುಂದುವರಿಸಿರುವ ಕ್ರಮವನ್ನು ಆಕ್ಷೇಪಿಸಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ವಕೀಲೆ ಸುಧಾ ಕಾಟ್ವಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠವು ಪ್ರತಿವಾದಿಯಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಲಾಗಿದೆ.

’ಪ್ರಾಸಿಕ್ಯೂಷನ್ ಇಲಾಖೆಯ ನಿರ್ದೇಶಕ ಹುದ್ದೆಯಿಂದ ಎಸ್. ಎಂ.ಹಿರೇಮಣಿ 2019ರ ಜುಲೈ 31ರಂದು ನಿವೃತ್ತರಾದರು. ತೆರವಾದ ಈ ಸ್ಥಾನಕ್ಕೆ 2019ರ ಆಗಸ್ಟ್ 5ರಂದು ಎಚ್.ಕೆ. ಜಗದೀಶ್ ಅವರನ್ನು ಆರು ತಿಂಗಳ ಅವಧಿಗೆ ಪ್ರಭಾರ ನಿರ್ದೇಶಕರಾಗಿ ನೇಮಿಸಲಾಯಿತು. ಅಲ್ಲಿಂದಲೂ ಕಾಲಕಾಲಕ್ಕೆ ಅವರ ನೇಮಕಾತಿ ಅವಧಿಯನ್ನು ವಿಸ್ತರಿಸಿಕೊಂಡು ಬರಲಾಗಿದೆ‘ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

‘ನಿರ್ದೇಶಕ ಸ್ಥಾನಕ್ಕೆ ಕಾನೂನು ಪ್ರಕಾರ ಹೊಸದಾಗಿ ನೇಮಕಾತಿ ನಡೆಸಬೇಕು ಎಂದು ಅರ್ಜಿದಾರರು 2023ರ ಫೆಬ್ರುವರಿ 27ರಂದು ಸಲ್ಲಿಸಿದ ಮನವಿ ಪತ್ರವನ್ನು ಪರಿಗಣಿಸಿಲ್ಲ. ಎಚ್.ಕೆ. ಜಗದೀಶ್ ನೇಮಕಾತಿ ಕಾನೂನಿಗೆ ವಿರೋಧವಾಗಿದೆ. ಅವರನ್ನು ಪ್ರಾಸಿಕ್ಯೂಷನ್ ಇಲಾಖೆಯ ಪ್ರಭಾರ ನಿರ್ದೇಶಕ ಹುದ್ದೆಯಿಂದ ವಜಾಗೊಳಿಸಬೇಕು. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರರ ಪರ ವಕೀಲ ಎಸ್. ಉಮಾಪತಿ ವಾದ ಮಂಡಿಸಿದರು.

24 ಗಂಟೆಯೂ ಹೋಟೆಲ್ ತೆರೆಯಲು ಅವಕಾಶ ನೀಡಿ



ಬೆಂಗಳೂರು: ಹೋಟೆಲ್‌ಗಳನ್ನು 24 ಗಂಟೆಯೂ ತೆರೆಯಲು ಅವಕಾಶ ನೀಡಬೇಕು ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರಿಗೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಮನವಿ ಮಾಡಿದೆ.

ತಡರಾತ್ರಿ 1 ಗಂಟೆಯವರೆಗೆ ಎಲ್ಲ ಹೋಟೆಲ್, ಬೇಕರಿ, ಸ್ವೀಟ್ ಸ್ಟಾಲ್ ಹಾಗೂ ಐಸ್ ಕ್ರೀಂ ಪಾರ್ಲರ್‌ಗಳನ್ನು ತೆರೆಯಲು ಅವಕಾಶವಿದೆ. ರಾಜ್ಯ ಸರ್ಕಾರ 24 ಗಂಟೆಯೂ ಹೋಟೆಲ್ ತೆರೆಯಲು ಮಾರ್ಗಸೂಚಿ ನೀಡಿದ್ದರೂ ಪೊಲೀಸ್ ಇಲಾಖೆ ಅನುಮತಿ ನೀಡಿಲ್ಲ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಹೋಟೆಲ್‌ಗಳಲ್ಲಿ ಸಾರ್ವಜನಿಕರಿಗೆ ಅಗತ್ಯವಿರುವ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆಯನ್ನು ಉಚಿತವಾಗಿ ಪೂರೈಸಲಾಗುತ್ತಿದೆ. ಆದ್ದರಿಂದ, ಕೇರಳ, ತಮಿಳುನಾಡು, ದೆಹಲಿ, ಗುಜರಾತ್ ರಾಜ್ಯಗಳಲ್ಲಿ 24 ಗಂಟೆಯೂ ಹೋಟೇಲ್ ತೆರೆಯಲು ಅವಕಾಶ ನೀಡಲಾಗಿದೆ. ನಮಗೂ ಅವಕಾಶ ಕಲ್ಪಿಸಬೇಕು ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರಿಗೆ ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ.

ಕೆಪಿಟಿಸಿಎಲ್: 2 ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸಲು ನಿರ್ದೇಶನ

ಬೆಂಗಳೂರು: ‘ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆಪಿಟಿಸಿಎಲ್) ನಿವೃತ್ತ ನೌಕರರೊಬ್ಬರ ವಿರುದ್ಧ 2007ರಿಂದ ಬಾಕಿ ಇರುವ ಇಲಾಖಾ ವಿಚಾರಣೆಯನ್ನು ಎರಡು ತಿಂಗಳ ಒಳಗೆ ಪೂರ್ಣಗೊಳಿಸಿ’ ಎಂದು ಹೈಕೋರ್ಟ್ ಉಪಲೋಕಾಯುಕ್ತರಿಗೆ ನಿರ್ದೇಶಿಸಿದೆ.

ಈ ಸಂಬಂಧ ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ವಿಚಾರಣೆ ಪೂರ್ಣಗೊಂಡ ಎರಡು ತಿಂಗಳ ಒಳಗೆ ವಿಚಾರಣೆಯ ಫಲಿತಾಂಶ ಆಧರಿಸಿ ಬೋರೇಗೌಡ ಅವರ ಗ್ರ್ಯಾಚುಟಿ, ಉಳಿಕೆ ಪಿಂಚಣಿ ಮೊತ್ತ ಪಾವತಿಸುವ ಬಗ್ಗೆ ಸೂಕ್ತ ಆದೇಶ ಹೊರಡಿಸಬೇಕು’ ಎಂದು ಕೆಪಿಟಿಸಿಎಲ್‌ಗೆ ನಿರ್ದೇಶಿಸಿದ ನ್ಯಾಯಪೀಠ ಮೇಲ್ಮನವಿ ಇತ್ಯರ್ಥಪಡಿಸಿದೆ.

ಬಿ.ಎಲ್. ಬೋರೇಗೌಡ 2012ರಲ್ಲೇ ಸೇವೆಯಿಂದ ನಿವೃತ್ತಿ ಹೊಂದಿದ್ದು, ಅವರಿಗೆ ಪೂರ್ಣ ಪ್ರಮಾಣದಲ್ಲಿ ಪಿಂಚಣಿ ಮತ್ತಿತರ ನಿವೃತ್ತಿ ಸೌಲಭ್ಯ ಕಲ್ಪಿಸುವಂತೆ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ 2018ರ ಸೆಪ್ಟೆಂಬರ್ 10ರಂದು ಆದೇಶಿಸಿತ್ತು. ಈ ತೀರ್ಪನ್ನು ಪ್ರಶ್ನಿಸಿ ಕೆಪಿಟಿಸಿಎಲ್ ಮೇಲ್ಮನವಿ ಸಲ್ಲಿಸಿದೆ.

ಸಿ.ಎಂ. ಸೇರಿ 36 ಆರೋಪಿಗಳಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣದ ಆರೋಪಿ ಕೆ.ಎಸ್. ಈಶ್ವರಪ್ಪ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಬಂಧಿಸಬೇಕು’ ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಸೇರಿದಂತೆ 36 ಜನರಿಗೆ ಸಮನ್ಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಹೈಗ್ರೌಂಡ್ಸ್ ಠಾಣೆಯ ಪೊಲೀಸರು ದಾಖಲಿಸಿರುವ ದೂರನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ‘ದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶೆ ಜೆ.ಪ್ರೀತ್ ಮಂಗಳವಾರ ವಿಚಾರಣೆ ನಡೆಸಿ ಸಮನ್ಸ್ ಜಾರಿಗೆ ಆದೇಶಿಸಿದರು. ವಿಚಾರಣೆಯನ್ನು ಜುಲೈ 28ಕ್ಕೆ ಮುಂದೂಡಲಾಗಿದೆ.

ಪಿಎಸ್‌ಐ ಜಾಹೀದಾ ನೀಡಿದ್ದ ದೂರು

‘ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಯಾವುದೇ ಪೂರ್ವಾನುಮತಿ ಪಡೆಯದೇ ಸಾರ್ವಜನಿಕ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಅಕ್ರಮವಾಗಿ ಗುಂಪು ಸೇರಿ ಸಾರ್ವಜನಿಕರಿಗೆ ತೊಂದರೆ ಉಂಟುಮಾಡಿದ್ದಾರೆ’ ಎಂದು ಆರೋಪಿಸಿ ಮಹಿಳಾ ಪಿಎಸ್‌ಐ ಜಾಹೀದಾ ನೀಡಿದ ದೂರು ಆಧರಿಸಿ ಸ್ವಯಂಪ್ರೇರಿತವಾಗಿ; ಅಕ್ರಮ ಕೂಟ (ಐಪಿಸಿ 143) ಹಾಗೂ ಅಕ್ರಮ ಬಂಧನ (ಐಪಿಸಿ 341) ಆರೋಪ ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸಚಿವರಾದ ಎಂ.ಬಿ.ಪಾಟೀಲ, ಪ್ರಿಯಾಂಕ ಖರ್ಗೆ, ರಾಮಲಿಂಗಾ ರೆಡ್ಡಿ, ಶಾಸಕರಾದ ಟಿ.ಬಿ. ಜಯಚಂದ್ರ, ಪ್ರಕಾಶ್ ರಾಥೋಡ್ ಮತ್ತು ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಸೇರಿದಂತೆ 36 ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. 2023ರ ಏಪ್ರಿಲ್ 14ರಂದು ಈ ಪ್ರತಿಭಟನೆ ನಡೆದಿತ್ತು.

ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಸಾವು

ಬೆಂಗಳೂರು: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಸವಾರ ಮೃತಪಟ್ಟಿದ್ದಾರೆ.

‘ಮೃತ ಸವಾರನ ಹೆಸರು ಗೊತ್ತಾಗಿಲ್ಲ. 55 ವರ್ಷದಿಂದ 60 ವರ್ಷ ವಯಸ್ಸಿರಬಹುದು. ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದ್ದು, ಗುರುತು ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ದೊಡ್ಡಬಳ್ಳಾಪುರ ರಸ್ತೆಯ ಪುಟ್ಟೇನಹಳ್ಳಿ ವೃತ್ತದಲ್ಲಿ ರಾತ್ರಿ 11.30 ಗಂಟೆ ಸುಮಾರಿಗೆ ಬೈಕ್ ಹೊರಟಿತ್ತು. ಇದೇ ಮಾರ್ಗದಲ್ಲಿ ತೆರಳುತ್ತಿದ್ದ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ರಸ್ತೆಗೆ ಬಿದ್ದಿದ್ದ ಸವಾರ ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ’ ಎಂದರು.



ರಸ್ತೆಯಲ್ಲೂ ತಂತಿನಡಿಗೆ..

ವಿ.ವಿ.ಪುರ ‘ಫುಡ್‌ಸ್ಟ್ರೀಟ್’ ಮಾರ್ಗದಲ್ಲಿ ಕೈಗೊಂಡಿರುವ ಕಾಮಗಾರಿ ನಿಧಾನಗತಿಯಲ್ಲಿ ನಡೆಯುತ್ತಿರುವುದರಿಂದ ನಾಗರಿಕರು ಪ್ರತಿನಿತ್ಯ ಪರದಾಡಬೇಕಾಗಿದೆ. – ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಸಹ ಜೀವನಕ್ಕೆ ಮದುವೆಯ ಮಾನ್ಯತೆ: ಹೈಕೋರ್ಟ್ ನಕಾರ

ಕೊಚ್ಚಿ(ಪಿಟಿಐ): ವಿವಾಹಯೇತರ ಸಹ ಜೀವನಕ್ಕೆ ಕಾನೂನಿನಡಿ ಮಾನ್ಯತೆ ಇಲ್ಲ. ಶಾಸ್ತ್ರೋಕ್ತವಾಗಿ ನಡೆಯುವ ಮದುವೆಗಷ್ಟೇ ಕಾನೂನಿನ ಮನ್ನಣೆ ಲಭಿಸುತ್ತದೆ. ಪರಸ್ಪರ ಒಪ್ಪಂದದ ಮೇರೆಗೆ ನಡೆಸುವ ಸಹ ಜೀವನವನ್ನು ಮದುವೆಯೆಂದು ಪರಿಗಣಿಸಲಾಗದು ಎಂದು ಕೇರಳ ಹೈಕೋರ್ಟ್ ಹೇಳಿದೆ.

2006ರಿಂದಲೂ ಹಿಂದೂ ಮತ್ತು ಕ್ರೈಸ್ತ ಧರ್ಮಕ್ಕೆ ಸೇರಿದ ಪುರುಷ ಮತ್ತು ಮಹಿಳೆಯೊಬ್ಬರು ಸಹ ಜೀವನ ನಡೆಸುತ್ತಿದ್ದು, ಅವರಿಗೆ ಮಗುವೂ ಇದೆ. ಈ ಇಬ್ಬರು ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯದ ಮೆಟ್ಟಿಲೇರಿದ್ದರು. ಶಾಸ್ತ್ರೋಕ್ತವಾಗಿ ಇಬ್ಬರಿಗೂ ಮದುವೆಯಾಗಿಲ್ಲ. ಹಾಗಾಗಿ, ವಿಚ್ಛೇದನ ನೀಡಲು ಸಾಧ್ಯವಿಲ್ಲ ಎಂದು ಕೋರ್ಟ್ ಅರ್ಜಿಯನ್ನು ವಜಾಗೊಳಿಸಿತ್ತು. ಈ ಆದೇಶವನ್ನು ಇಬ್ಬರೂ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ನ್ಯಾಯಮೂರ್ತಿಗಳಾದ ಎ. ಮೊಹಮ್ಮದ್ ಮುಸ್ತಾಕಿಯಾ ಮತ್ತು ಸೋಫಿ ಥಾಮಸ್ ಅವರಿದ್ದ ವಿಭಾಗೀಯ ಪೀಠವು, ಸಹ ಜೀವನದ ಆಧಾರದ ಮೇಲೆ ಮದುವೆಯ ಹಕ್ಕು ಸ್ಥಾಪಿಸಲು ಅಥವಾ ವಿಚ್ಛೇದನ ಕೋರಲು ಬರುವುದಿಲ್ಲ ಎಂದು ಹೇಳಿದೆ.

ಸುಳ್ಳು ಜಾಹೀರಾತು ಆರೋಪ

ಸಿ.ಎಂ, ರಾಹುಲ್, ಡಿಕೆಶಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿದ್ದಾರೆ’ ಎಂದು ಆರೋಪಿಸಿ ಬಿಜೆಪಿ ಸಲ್ಲಿಸಿರುವ ಖಾಸಗಿ ದೂರಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸಮನ್ಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಕಾರ್ಯದರ್ಶಿ ಬಿ.ಎಸ್. ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ‘ದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶೆ ಜೆ.ಪ್ರೀತ್ ಮಂಗಳವಾರ ವಿಚಾರಣೆ ನಡೆಸಿ ಆರೋಪಿಗಳ ಸ್ವಯಂ ಹೇಳಿಕೆ ದಾಖಲಿಸುವ ಕಾರಣಕ್ಕಾಗಿ ಸಮನ್ಸ್ ಜಾರಿಗೊಳಿಸಿದರು. ಮುಂದಿನ ವಿಚಾರಣೆಯನ್ನು ಜುಲೈ 27ಕ್ಕೆ ಮುಂದೂಡಲಾಗಿದೆ. ಫಿರ್ಯಾದುದಾರರ ಪರ ವಕೀಲ ಎಂ.ವಿನೋದ್ ಕುಮಾರ್ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?



‘ಇತ್ತೀಚೆಗೆ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ 2023ರ ಮೇ 5ರಂದು ಜಾಹೀರಾತು ನೀಡಿ, ಆಡಳಿತಾರೂಢ ರಾಜ್ಯ ಬಿಜೆಪಿ ಸರ್ಕಾರ ಶೇ 40 ಕಮಿಷನ್ ಸರ್ಕಾರ. ಇದು ಕಳೆದ ನಾಲ್ಕು ವರ್ಷಗಳಲ್ಲಿ ₹ 1.50 ಲಕ್ಷ ಕೋಟಿ ಲೂಟಿ ಹೊಡೆದಿರುವ ಭ್ರಷ್ಟ ಸರ್ಕಾರ ಎಂದು ಆರೋಪಿಸಿದ್ದರು. ಈ ಆರೋಪಕ್ಕೆ ಫಿರ್ಯಾದುದಾರರೇ ಇಲ್ಲ. ಇದು ರಾಷ್ಟ್ರೀಯ ಪಕ್ಷವೊಂದರ ವಿರುದ್ಧ ಮಾಡಲಾಗಿರುವ ಆಧಾರ ರಹಿತ, ಪೂರ್ವಗ್ರಹ ಪೀಡಿತ ಮತ್ತು ಮಾನಹಾನಿಕರ ಆರೋಪ’ ಎಂದು ದೂರಿನಲ್ಲಿ ವಿವರಿಸಲಾಗಿದೆ.

‘ಈ ದೂರಿಗೆ ಸಂಬಂಧಿಸಿದಂತೆ ಮೂವರೂ ಆರೋಪಿಗಳ ವಿರುದ್ಧದ ಜರುಗಿಸಬೇಕು ಮತ್ತು ಭಾರತೀಯ ದಂಡ ಸಂಹಿತೆಯ ಅಪರಾಧಿಕ ಕಲಂಗಳ ಅಡಿಯಲ್ಲಿ ಶಿಕ್ಷಿಸಬೇಕು’ ಎಂದು ಫಿರ್ಯಾದುದಾರರು ಕೋರಿದ್ದಾರೆ.

2013ರ ಗೆಲುವಿನ ಯಶಸ್ಸು ನನ್ನದೇ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭೂತಪೂರ್ವ ಗೆಲುವಿನ ಲಾಭವನ್ನು ಕೆಲವರು ಪಡೆಯುತ್ತಿದ್ದಾರೆ. 2013ರಲ್ಲಿ ನನ್ನ ನೇತೃತ್ವದಲ್ಲೇ ಚುನಾವಣೆ ನಡೆದು, ಪಕ್ಷ ಅಧಿಕಾರಕ್ಕೆ ಬಂದಾಗ ನಿಮ್ಮಿಂದಲೇ ಎಂದು ಯಾರೂ ಹೇಳಲಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಬೇಸರ ವ್ಯಕ್ತಪಡಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪರಿಶಿಷ್ಟ ಸಮುದಾಯಗಳ ಸಹೋದರತ್ವ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ‘ನನಗೂ ಮುಖ್ಯಮಂತ್ರಿಯಾಗುವ ಅರ್ಹತೆ ಇದೆ. ಮುನಿಯಪ್ಪ ಸೇರಿದಂತೆ ಇನ್ನೂ ಹಲವರಿಗೂ ಇದೆ. ಅಂಬೇಡ್ಕರ್ ರಚಿಸಿದ ಸಂವಿಧಾನ ಅಂತಹ ಯೋಗ್ಯತೆ ನೀಡಿದೆ. ಹಾಗಾಗಿ, ದಲಿತರು ಈ ರಾಜ್ಯದ ಮುಖ್ಯಮಂತ್ರಿ ಏಕೆ ಆಗಬಾರದು’ ಎಂದು ಪ್ರಶ್ನಿಸಿದರು.

ಪೋಕ್ಸೊ: ತಂದೆಯ ಸ್ನೇಹಿತನಿಗೆ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂದೆಯಂತೆ ಧ್ವನಿ ಮಾಡಿ ಬಾಗಿಲು ತೆಗೆಸಿ ಮನೆಯೊಳಗೆ ನುಗ್ಗಿ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿ ಗವಿಯಪ್ಪನಿಗೆ (31) 5 ವರ್ಷ ಜೈಲು ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ನಗರದ ಪೀಣ್ಯ ಠಾಣೆಯಲ್ಲಿ 2021ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಎನ್. ರೂಪಾ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

‘11 ವರ್ಷದ ಬಾಲಕಿ ತಂದೆಯ ಸ್ನೇಹಿತನಾಗಿದ್ದ ಗವಿಯಪ್ಪ, ಆಗಾಗ ಮನೆಗೆ ಹೋಗಿ ಬರುತ್ತಿದ್ದ. 2021ರ ಜನವರಿ 13ರಂದು ತಂದೆ ಹೊರಗಡೆ ಹೋಗಿದ್ದರು. ಶಾಲೆಯಿಂದ ಮನೆಗೆ ಬಂದಿದ್ದ ಬಾಲಕಿ, ಬಾಗಿಲು ಹಾಕಿಕೊಂಡು ಊಟ ಮಾಡುತ್ತಿದ್ದಳು. ಅದೇ ಸಂದರ್ಭದಲ್ಲಿ ಮನೆಗೆ ಬಂದಿದ್ದ ಗವಿಯಪ್ಪ, ತಂದೆಯಂತೆ ಧ್ವನಿ ಮಾಡಿ ಬಾಗಿಲು ತೆಗೆಯುವಂತೆ ಹೇಳಿದ್ದ’ ಎಂದು ಕೃಷ್ಣವೇಣಿ ಹೇಳಿದರು.

‘ಬಾಲಕಿ ಬಾಗಿಲು ತೆಗೆಯುತ್ತಿದ್ದಂತೆ ಆಕೆಯ ಕೈ ಹಿಡಿದು ಎಳೆದಾಡಿದ್ದ ಗವಿಯಪ್ಪ, ಕೂಗಾಡದಂತೆ ಬೆದರಿಸಿದ್ದ. ನಂತರ, ಬಾಲಕಿಯ ಬಟ್ಟೆಗಳನ್ನು ಬಿಚ್ಚಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಘಟನೆ ಸಂಬಂಧ ಪೋಷಕರು ಪೀಣ್ಯ ಠಾಣೆಗೆ ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಇನ್‌ಸ್ಪೆಕ್ಟರ್ ಸುನೀಲ್ ಪವಾರ್, ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು’ ಎಂದು ತಿಳಿಸಿದರು.

ಲಿಂಗಾಯತ ಸಿ.ಎಂ ಭ್ರಷ್ಟರು: ಸಿದ್ದರಾಮಯ್ಯ ವಿರುದ್ಧದ ದೂರು ವಜಾ

ಬೆಂಗಳೂರು: ‘ವಿಧಾನಸಭೆ ಚುನಾವಣೆ ಸಂದರ್ಭದ ಪ್ರಚಾರ ಭಾಷಣದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲಿಂಗಾಯತ ಮುಖ್ಯಮಂತ್ರಿಗಳು ಭ್ರಷ್ಟರು ಎಂದು ಅವಹೇಳನಕಾರಿ ಮಾತುಗಳನ್ನಾಡಿದ್ದಾರೆ’ ಎಂದು ಆರೋಪಿಸಿ ಸಲ್ಲಿಸಲಾಗಿದ್ದ ಖಾಸಗಿ ದೂರನ್ನು ಜನಪ್ರತಿನಿಧಿಗಳ ಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಶಂಕರ್ ಶೇಠ್ ಮತ್ತು ಮಲ್ಲಯ್ಯ ಹಿರೇಮಠ ಎಂಬುವರು ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ‘ದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶೆ ಜೆ.ಪ್ರೀತ್ ಮಂಗಳವಾರ ವಜಾಗೊಳಿಸಿ ಆದೇಶಿಸಿದ್ದಾರೆ.

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಲಿಂಗಾಯತರಿಗೆ ಮುಖ್ಯಮಂತ್ರಿ ಸ್ಥಾನ ನೀಡುತ್ತೀರಾ’ ಎಂದು ಚುನಾವಣಾ ಪ್ರಚಾರದ ವೇಳೆ ಸಿದ್ದರಾಮಯ್ಯ ಅವರನ್ನು ಸುದ್ದಿಗಾರರು ಪ್ರಶ್ನಿಸಿದ್ದರು. ಅದಕ್ಕೆ ಉತ್ತರಿಸಿದ್ದ ಅವರು, ‘ಈಗ ಲಿಂಗಾಯತ ಮುಖ್ಯಮಂತ್ರಿಗಳೇ ಇದ್ದಾರಲ್ಲ. ಅವರೇ ಭ್ರಷ್ಟಾಚಾರ ನಡೆಸಿ ರಾಜ್ಯವನ್ನು ಹಾಳು ಮಾಡಿದ್ದಾರೆ’ ಎಂದಿದ್ದರು. ‘ಈ ಹೇಳಿಕೆಯಿಂದ ಸಮುದಾಯದ ಭಾವನೆಗಳಿಗೆ ಘಾಸಿಯಾಗಿದೆ‘ ಎಂದು ಆಕ್ಷೇಪಿಸಿ ಫಿರ್ಯಾದುದಾರರು ಖಾಸಗಿ ದೂರು ಸಲ್ಲಿಸಿದ್ದರು.

ನಕಲಿ ನೋಂದಣಿ: ಕ್ಯಾಬ್ ಕಂಪನಿಗಳಿಗೆ ವಂಚನೆ

ಬೆಂಗಳೂರು: ನಕಲಿ ದಾಖಲೆ ಮೂಲಕ ಖರೀದಿಸಿದ್ದ ಸಿಮ್‌ಕಾರ್ಡ್ ಬಳಸಿ ಚಾಲಕರು–ಸವಾರರ ಹೆಸರಿನಲ್ಲಿ ನೋಂದಣಿ ಮಾಡಿಸಿ ಕ್ಯಾಬ್- ಬೈಕ್ ಟ್ಯಾಕ್ಸಿ ಕಂಪನಿಗಳಿಂದ ಕಮಿಷನ್ ಪಡೆದು ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಮನೋಜ್‌ಕುಮಾರ್, ಸಚಿನ್ ಹಾಗೂ ಶಂಕರ್ ಬಂಧಿತರು. ಇವರಿಂದ 1055 ಸಿಮ್‌ಕಾರ್ಡ್‌ಗಳು, 15 ಮೊಬೈಲ್, 4 ಲ್ಯಾಪ್‌ಟಾಪ್, ಕಂಪ್ಯೂಟರ್ ಬಯೋಮೆಟ್ರಿಕ್ ಸಾಧನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಮನೋಜ್, ಟ್ರಾವೆಲ್ಸ್ ಕಂಪನಿಗಳಿಗೆ ಕಾರು ಹಾಗೂ ಬೈಕ್‌ಗಳನ್ನು ಜೋಡಿಸುವ ಕೆಲಸ ಮಾಡುತ್ತಿದ್ದ. ಸಚಿನ್, ಫೈನಾನ್ಸ್ ಕಂಪನಿಯೊಂದರ ಉದ್ಯೋಗಿ. ಶಂಕರ್, ಮೊಬೈಲ್ ಸೇವಾ ಕಂಪನಿಯೊಂದರ ಸಿಮ್ ಕಾರ್ಡ್ ಹಂಚಿಕೆದಾರ. ಮೂವರು ಸೇರಿ ಕೃತ್ಯ ಎಸಗುತ್ತಿದ್ದರು’ ಎಂದರು.

ಸಾಫ್ಟ್‌ವೇರ್‌ನಲ್ಲಿ ನಕಲಿ ದತ್ತಾಂಶ ದಾಖಲು: ‘ರ್‍ಯಾಪಿಡೊ ಹಾಗೂ ಉಬರ್ ಕಂಪನಿಗಳಿಗೆ ಕಾರು–ಬೈಕ್ ಜೋಡಿಸುವ ಸಂಬಂಧ ಮನೋಜ್ ಒಪ್ಪಂದ ಮಾಡಿಕೊಂಡಿದ್ದ. ಸಚಿನ್ ಹಾಗೂ ಶಂಕರ್, ಕಂಪನಿ ಸಾಫ್ಟ್‌ವೇರ್‌ನಲ್ಲಿ ನಕಲಿ ದತ್ತಾಂಶ ದಾಖಲಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ನಕಲಿ ದಾಖಲೆ ಬಳಸಿ ಶಂಕರ್ ನೀಡುತ್ತಿದ್ದ ಸಿಮ್‌ಕಾರ್ಡ್‌ಗಳನ್ನು ಬಳಸಿ ಚಾಲಕರ ಹೆಸರಿನಲ್ಲಿ ನೋಂದಣಿ ಮಾಡಿಸಲಾಗುತ್ತಿತ್ತು. ನಂತರ, ಚಾಲಕರು ಕೆಲಸ ಮಾಡದಿದ್ದರೂ ಗ್ರಾಹಕರಿಗೆ ಸೇವೆ ನೀಡುತ್ತಿದ್ದಾರೆಂದು ಹೇಳಿ ಕಂಪನಿಗಳಿಂದ ಕಮಿಷನ್ ರೂಪದ ಪ್ರೋತ್ಸಾಹ ಧನ ಪಡೆದು ವಂಚಿಸಲಾಗುತ್ತಿತ್ತು. ಚಾಲಕರು/ಸವಾರರನ್ನು ನೋಂದಣಿ ಮಾಡಿಸಿದರೆ ಮನೋಜ್‌ಗೆ ಹೆಚ್ಚಿನ ಕಮಿಷನ್ ಸಿಗುತ್ತಿತ್ತು’ ಎಂದು ವಿವರಿಸಿದರು.

ಆರಂಭವಾಗದ ಆನ್‌ಲೈನ್ ಪೋರ್ಟಲ್; ಪಿಯು ವಿದ್ಯಾರ್ಥಿಗಳಿಗೆ ತೊಂದರೆ

ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗಿಲ್ಲ ಪ್ರವೇಶ

ಪ್ರಜಾವಾಣಿ ವಾರ್ತೆ

ಉಡುಪಿ: ಜೂನ್ 1ರಿಂದಲೇ ರಾಜ್ಯದಾದ್ಯಂತ ಪದವಿಪೂರ್ವ ಕಾಲೇಜುಗಳು ಆರಂಭವಾಗಿದ್ದರೂ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಗೊಳಪಟ್ಟಿರುವ ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಆರಂಭವಾಗಿಲ್ಲ.

ಸರ್ಕಾರಿ ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕಾಗಿದ್ದು ಇದುವರೆಗೂ ಆನ್‌ಲೈನ್ ಪೋರ್ಟಲ್ ಅರ್ಜಿ ಸಲ್ಲಿಕೆಗೆ ತೆರೆದುಕೊಳ್ಳದ ಪರಿಣಾಮ ಕಾಲೇಜುಗಳು ಆರಂಭವಾದರೂ ವಸತಿ ನಿಲಯಗಳಿಗೆ ಪ್ರವೇಶಾತಿ ಪಡೆದುಕೊಳ್ಳಲು ಸಾಧ್ಯವಾಗದೆ ಬಡ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ.

ಪ್ರತಿವರ್ಷ ಜೂನ್‌ನಲ್ಲಿ ಪಿಯು ಕಾಲೇಜು ಆರಂಭವಾದರೂ ಸರ್ಕಾರಿ ಹಾಸ್ಟೆಲ್‌ಗಳ ಪ್ರವೇಶಾತಿ ಪ್ರಕ್ರಿಯೆ ಮಾತ್ರ ಜುಲೈನಲ್ಲಿ ಆರಂಭವಾಗುತ್ತಿದೆ. ಕಾಲೇಜು ಆರಂಭವಾಗುವ ಹೊತ್ತಿಗೆ ವಸತಿ ನಿಲಯಗಳನ್ನು ಆರಂಭಿಸುವಂತೆ ಮನವಿ ಮಾಡಿದರೂ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡರು.

ಉಡುಪಿ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೊಳಪಟ್ಟಿರುವ 15 ಮೆಟ್ರಿಕ್ ಪೂರ್ವ ಹಾಗೂ 8 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿವೆ. ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಯಲ್ಲಿ 26 ಮೆಟ್ರಿಕ್ ಪೂರ್ವ ಹಾಗೂ 18 ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿವೆ.

ಎರಡೂ ಇಲಾಖೆ ವ್ಯಾಪ್ತಿಯ 26 ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ಪ್ರತಿವರ್ಷ ದಾಖಲಾತಿ ಪಡೆಯುವ ಶೇ 70ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಹೊರ ಜಿಲ್ಲೆಗಳಿಗೆ ಸೇರಿದವರಾಗಿತ್ತಾರೆ. ಉದ್ಯೋಗ ಅರಸಿ ಹೊರ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯ ಕೂಲಿ ಕಾರ್ಮಿಕರು ಉಡುಪಿಗೆ ಬಂದು ನೆಲೆಸಿರುವುದು ಇದಕ್ಕೆ ಪ್ರಮುಖ ಕಾರಣ.

ಗುಣಮಟ್ಟದ ಶಿಕ್ಷಣ ಹಾಗೂ ಉಚಿತ ವಸತಿ ಸೌಲಭ್ಯ ಸಿಗುವ ಕಾರಣಕ್ಕೆ ಹೊರ ಜಿಲ್ಲೆಗಳಿಂದ ಬಡ ಹಾಗೂ ಕೆಳ ಮಧ್ಯಮ ವರ್ಗಕ್ಕೆ ಸೇರಿದ ಹೆಚ್ಚಿನ ವಿದ್ಯಾರ್ಥಿಗಳು ಜಿಲ್ಲೆಯ ಸರ್ಕಾರಿ ವಸತಿ ನಿಲಯಗಳಲ್ಲಿ ಪ್ರವೇಶಾತಿ ಪಡೆಯಲು ಆಸಕ್ತಿ ತೋರುತ್ತಾರೆ. ಹೀಗೆ ಕಲಿಕೆಗೆ ಬರುವ ವಿದ್ಯಾರ್ಥಿಗಳಿಗೆ ಕಾಲೇಜು ಆರಂಭದಲ್ಲೇ ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ಸಾಧ್ಯವಾಗದೆ ತೊಂದರೆ ಅನುಭವಿಸುತ್ತಾರೆ.

ಪೋಷಕರ ಜತೆ ವಾಸವಿರುವ ವಿದ್ಯಾರ್ಥಿಗಳು ಕಾಲೇಜು ಆರಂಭದ ಎರಡು ತಿಂಗಳು ಮನೆಯಿಂದಲೇ ಕಾಲೇಜುಗಳಿಗೆ ತೆರಳಿದರೆ, ವಾಸ್ತವ್ಯ ವ್ಯವಸ್ಥೆ ಇಲ್ಲದ ವಿದ್ಯಾರ್ಥಿಗಳ ಪಾಡಂತೂ ಹೇಳತೀರದು. ಪರಿಚಿತರ ಮನೆಯಲ್ಲಿ ತಿಂಗಳ ಕಾಲ ವಾಸ್ತವ್ಯ ಹೂಡಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಕೆಲವು ವಿದ್ಯಾರ್ಥಿಗಳು ಒಂದೆರಡು ತಿಂಗಳ ಮಟ್ಟಿಗೆ ಪಿ.ಜಿಯಲ್ಲಿ ಉಳಿದುಕೊಂಡು ಕಾಲೇಜುಗಳಿಗೆ ತೆರಳುತ್ತಾರೆ.

‘ಆದೇಶ ಬಂದಿಲ್ಲ’

ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಆನ್‌ಲೈನ್ ಮೂಲಕ ದಾಖಲಾತಿ ನಡೆಯಬೇಕಿದ್ದು, ಸದ್ಯಕ್ಕೆ ಪೋರ್ಟಲ್ ತೆರೆಯಲಾಗಿಲ್ಲ. ಪ್ರತಿವರ್ಷ ಜುಲೈನಲ್ಲಿ ಪೋರ್ಟಲ್ ತೆರೆಯಲಾಗುತ್ತದೆ. ಸರ್ಕಾರದಿಂದ ನಿರ್ದೇಶನ ಬಂದ ಕೂಡಲೇ ಪ್ರವೇಶಾತಿಗೆ ಕ್ರಮ ತೆಗೆದುಕೊಳ್ಳಲಾಗುವುದು.

ಸಚಿನ್, ಜಿಲ್ಲಾ ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ

‘ಶೀಘ್ರ ಅನುಮತಿ ಸಾಧ್ಯತೆ’

ಜಿಲ್ಲೆಯ ಮೆಟ್ರಿಕ್ ಪೂರ್ವ ವಸತಿ ನಿಲಯಗಳಲ್ಲಿ ಪ್ರವೇಶಾತಿ ಆರಂಭವಾಗಿದ್ದು ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಲಾಗುತ್ತಿದೆ. ಆದರೆ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಆನ್‌ಲೈನ್ ಅರ್ಜಿ ಸ್ವೀಕಾರ ಆರಂಭವಾಗಿಲ್ಲ. ಜುಲೈ 15ರ ನಂತರ ಅವಕಾಶ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದೇವೆ. ಕಳೆದ ವರ್ಷ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆಲ್ಲ ವಸತಿ ವ್ಯವಸ್ಥೆ ಮಾಡುವಂತೆ ಸರ್ಕಾರದ ಆದೇಶವಿತ್ತು. ಈ ವರ್ಷವೂ ಆದೇಶ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅನಿತಾ ಮಡ್ಲೂರು, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭಾಗಿ

ಸುರ್ಜೇವಾಲಾ ಸಭೆಗೆ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ಮಂಗಳವಾರ ನಡೆಸಿದ ಬೆಂಗಳೂರಿನ ಕಾಂಗ್ರೆಸ್ ಜನಪ್ರತಿನಿಧಿಗಳ ಸಭೆಯಲ್ಲಿ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭಾಗಿಯಾಗಿರುವುದು ಪ್ರತಿಪಕ್ಷಗಳ ಟೀಕೆಗೆ ಕಾರಣವಾಗಿದೆ.

ಬೆಂಗಳೂರು ಅಭಿವೃದ್ಧಿ, ಬಿಬಿಎಂಪಿ ಚುನಾವಣೆ ಮತ್ತು ಬಿಬಿಎಂಪಿಯನ್ನು ವಿಭಜಿಸುವ (ಗ್ರೇಟರ್ ಬೆಂಗಳೂರು) ಕುರಿತು ಚರ್ಚಿಸಲು ಸುರ್ಜೇವಾಲಾ ಸಭೆ ಆಯೋಜಿಸಿದ್ದರು. ಬೆಂಗಳೂರು ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬೆಂಗಳೂರಿನ ಸಚಿವರು, ಶಾಸಕರು ಮತ್ತು ಕಾಂಗ್ರೆಸ್ಸಿನ ಕೆಲವು ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯ ಸರ್ಕಾರ ರಚಿಸಿದ 'ತಜ್ಞರ ಸಮಿತಿ' ಅಧ್ಯಕ್ಷ, ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ಮತ್ತು ಸಮಿತಿಯ ಸದಸ್ಯ ಸಿದ್ದಯ್ಯ ಭಾಗಿಯಾಗಿದ್ದರು.

ಬಿಬಿಎಂಪಿ ಪುನರ್‌ರಚಿಸಲು ಬಿ.ಎಸ್. ಪಾಟೀಲ್ ನೇತೃತ್ವದಲ್ಲಿ ರಾಜ್ಯ ಸರ್ಕಾರ ಸೋಮವಾರ ಸಮಿತಿ ರಚಿಸಿತ್ತು.



ಕಾಂಗ್ರೆಸ್ ಜನಪ್ರತಿನಿಧಿಗಳ ಸಭೆಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಸಚಿವರಾದ ಜಮೀರ್ ಅಹಮದ್ ಖಾನ್, ಕೆ.ಜೆ. ಜಾರ್ಜ್, ಡಿ.ಕೆ. ಶಿವಕುಮಾರ್, ರಣದೀಪ್ ಸಿಂಗ್ ಸುರ್ಜೇವಾಲಾ ಇದ್ದರು

ಲೋಕಸಭೆ ಮತ್ತು ಬಿಬಿಎಂಪಿ ಚುನಾವಣೆಗೆ ಪೂರ್ವಸಿದ್ಧತೆ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ವಾರ್ಡ್‌ಗಳ ಮರು ವಿಂಗಡನೆ, ಮೀಸಲಾತಿ ಬಗ್ಗೆಯೂ ಚರ್ಚೆಯಾಗಿದೆ. ಶೀಘ್ರ ಚುನಾವಣೆ ನಡೆಸಲು ಕಾನೂನು ತೊಡಕುಗಳಿವೆ ಎಂದು ಉಪ ಮುಖ್ಯಮಂತ್ರಿ ಹೇಳಿದ ಕಾರಣ ಈ ಬಗ್ಗೆ ಅಡ್ವೊಕೇಟ್ ಜನರಲ್ (ಎ.ಜಿ) ಜತೆಗೂ ಕಾಂಗ್ರೆಸ್ ನಾಯಕರು ಗಂಭೀರ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ.

ಸಭೆಯ ಬಳಿಕ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, 'ಬಿಬಿಎಂಪಿಗೆ ಆದಷ್ಟು ಬೇಗ ಚುನಾವಣೆ ನಡೆಸಬೇಕೆಂದು ಎಲ್ಲರೂ ಸಲಹೆ ನೀಡಿದರು. ವಾರ್ಡ್‌ಗಳ ವಿಂಗಡಣೆ ಆಗಬೇಕಿದೆ. ನವೆಂಬರ್ ವೇಳೆಗೆ ಚುನಾವಣೆ ಆಗಬೇಕು. ಬಿಜೆಪಿ ಮಾಡಿರುವ ವಾರ್ಡ್ ವಿಂಗಡಣೆ ಸರಿಯಿಲ್ಲ. ಬಿಜೆಪಿಯವರು ತಮಗೆ ಅನುಕೂಲ ಆಗುವಂತೆ ವಿಂಗಡಣೆ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿದರು.

'ಬಿಜೆಪಿಯವರು ಮಾಡಿರುವ ವಾರ್ಡ್ ವಿಂಗಡನೆಗೆ ನಾವು ಆಕ್ಷೇಪ ವ್ಯಕ್ತಪಡಿಸಿದ್ದೆವು. ವಾರ್ಡ್ ಮೀಸಲಾತಿ ಕೂಡಾ ನಿಗದಿ ಆಗಬೇಕಿದೆ. ಬಿಬಿಎಂಪಿ ಮೂರು ಭಾಗ ಮಾಡಬೇಕೆಂಬ ಬಗ್ಗೆ ಚರ್ಚೆ ಸದ್ಯಕ್ಕಿಲ್ಲ' ಎಂದರು.

ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಬೆಂಗಳೂರು ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಿದ್ದೇವೆ. ಬಿಬಿಎಂಪಿ ಚುನಾವಣೆ ಬಗ್ಗೆಯೂ ಸಲಹೆ ನೀಡಿದ್ದೇವೆ. ಬಿಬಿಎಂಪಿ ಆಡಳಿತಾತ್ಮಕವಾಗಿ ವಿಭಜನೆ ಆಗಬೇಕು. ಬೆಂಗಳೂರು ಅಭಿವೃದ್ಧಿಯಾಗಬೇಕು. ಈ ಕುರಿತು ಸುರ್ಜೇವಾಲಾ ಜತೆ ಚರ್ಚೆ ಮಾಡಿದ್ದೇವೆ' ಎಂದರು.

'ಸಭೆಯ ರಹಸ್ಯವೇನು?'

ಬೆಂಗಳೂರು: ನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ಎಟಿಎಂ ಸರ್ಕಾರದ ಸಭೆಯ ರಹಸ್ಯವೇನು ಎಂದು ಬಿಜೆಪಿ ಪ್ರಶ್ನಿಸಿದೆ.

'ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಯಾವುದೇ ರೀತಿಯ ಅಧಿಕೃತ ಸಂಬಂಧವಿಲ್ಲದ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ಬಿಬಿಎಂಪಿ ಉನ್ನತ ಅಧಿಕಾರಿಗಳ ಜತೆಗೇನು ಕೆಲಸ? ಇದು ಶೇ 85 ಡೀಲ್ ಫಿಕ್ಸಿಂಗ್ ಸಭೆಯೇ? ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರೇ ಉತ್ತರಿಸಿ' ಎಂದು ಬಿಜೆಪಿ ಟ್ವೀಟ್ ಮಾಡಿದೆ.

ಈ ಸಂಬಂಧ ರಾಜ್ಯಪಾಲರಿಗೆ ಬುಧವಾರ ದೂರು ಸಲ್ಲಿಸುವುದಾಗಿ ಬಿಜೆಪಿ ಹೇಳಿದೆ.

'ಜನಪಥ್ ಹಂಗಿನ ಸರ್ಕಾರವೇ?'

'ರಾಜ್ಯದಲ್ಲಿ ಇರುವುದು ಸಿದ್ದರಾಮಯ್ಯ ನೇತೃತ್ವದ ಸರ್ಕಾರವೋ ಅಥವಾ ದಿಲ್ಲಿಯ ಜನಪಥ್ ರಸ್ತೆಯ 10ನೇ ನಂಬರ್‌ನ ಹಂಗಿನ ಸರ್ಕಾರವೋ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸುರ್ಜೇವಾಲಾ ಅವರು ನಡೆಸಿರುವ ಸಭೆ ಕುರಿತು ಟ್ವೀಟ್ ಮಾಡಿರುವ ಅವರು, 'ಸುರ್ಜೇವಾಲಾ ಅವರಿಗೆ ಸರ್ಕಾರದ ಸಭೆಗಳನ್ನು ನಡೆಸುವ ಜವಾಬ್ದಾರಿ, ಅವಕಾಶ ಕೊಟ್ಟವರು ಯಾರು? ಮುಖ್ಯಮಂತ್ರಿ ಉತ್ತರಸಬೇಕು' ಎಂದು ಒತ್ತಾಯಿಸಿದ್ದಾರೆ.

ಕನ್ನಡಿಗರು ಮತಹಾಕಿರುವುದು 'ಕೈ' ಸರ್ಕಾರಕ್ಕೂ ಅಥವಾ 'ಕೈಗೊಂಬೆ' ಸರ್ಕಾರಕ್ಕೋ? ಜನರ ವೋಟು ಹಂಗಿನ ಸರ್ಕಾರದ ಪಾಲಾಗಿದೆ ಎನ್ನುವುದು ಸರ್ಕಾರಕ್ಕೆ ತಿಂಗಳು ತುಂಬುವ ಮೊದಲೇ ಸಾಬೀತಾಗಿದೆ ಎಂದೂ ಕುಮಾರಸ್ವಾಮಿ ಅವರು ಟೀಕಿಸಿದ್ದಾರೆ.



ಯೋಗಾಭ್ಯಾಸ ಅಂತರಾಷ್ಟ್ರೀಯ ಯೋಗ ದಿನಾಚರಣೆ ಸಮೀಪಿಸಿದ ಹಿನ್ನೆಲೆಯಲ್ಲಿ ಕಾರವಾರದ ಕದಂಬ ನೌಕಾನೆಲೆಯಲ್ಲಿರುವ ಯುದ್ಧವಿಮಾನ ವಾಹಕ ನೌಕೆ ಐ.ಎನ್‌.ಎಸ್. ವಿಕ್ರಮಾದಿತ್ಯದ ಮೇಲೆ ನೌಕಾದಳದ ಸಿಬ್ಬಂದಿ ಮಂಗಳವಾರ ಯೋಗಾಭ್ಯಾಸ ನಡೆಸಿದರು

ಟೋಲ್ ಏರಿಕೆ: ಪ್ರತಾಪ್ ಸಿಂಹ ಸಮರ್ಥನೆ

ಪ್ರಜಾವಾಣಿ ವಾರ್ತೆ

ಮೈಸೂರು: ಎಕ್ಸ್‌ಪ್ರೆಸ್‌ವೇ ಟೋಲ್ ದರ ಏರಿಕೆಯನ್ನು ಸಂಸದ ಪ್ರತಾಪ ಸಿಂಹ ಸಮರ್ಥಿಸಿಕೊಂಡರು.

ಇಲ್ಲಿ ಮಂಗಳವಾರ ಮಾತನಾಡಿದ ಅವರು, 'ರಾಷ್ಟ್ರದಾದ್ಯಂತ ಎಲ್ಲ ಟೋಲ್‌ಗಳಲ್ಲಿ ಪ್ರತಿ ಹಣಕಾಸು ವರ್ಷದ ಆರಂಭದಲ್ಲಿ ಟೋಲ್ ದರ ಏರಿಸಲಾಗುತ್ತದೆ. ಹಾಗೆಯೇ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ ಟೋಲ್ ಶುಲ್ಕ ಸಹ ಹೆಚ್ಚಾಗಿದೆ. ಕಾಂಗ್ರೆಸ್ ಸರ್ಕಾರಕ್ಕೆ ಶಕ್ತಿ ಇದ್ದರೆ ರಾಜ್ಯ ವ್ಯಾಪ್ತಿಯಲ್ಲಿನ ಎಲ್ಲ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ವೆಚ್ಚ ಭರಿಸಿ, ಟೋಲ್ ಅನ್ನು ತೆಗೆದುಹಾಕಲಿ' ಎಂದು ಅವರು ಹೇಳಿದರು.

'ವಿದ್ಯುತ್ ದರ ಹೆಚ್ಚಳ ಕೈಬಿಡಿ'

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದಲ್ಲಿ ವಿದ್ಯುತ್ ದರ ಹೆಚ್ಚಳಕ್ಕೆ ಆಡಳಿತ ಪಕ್ಷದ ಶಾಸಕ ತನ್ವೀರ್ ಸೇಠ್ ವಿರೋಧ ವ್ಯಕ್ತಪಡಿಸಿದ್ದು, ಈ ನಿರ್ಧಾರವನ್ನು ಹಿಂಪಡೆಯುವಂತೆ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತ ನೀಡುವ ಯೋಜನೆಗೆ ವ್ಯತಿರಿಕ್ತವೆಂಬಂತೆ ವಿದ್ಯುತ್ ದರವನ್ನು ಹೆಚ್ಚಿಸಿರುವುದು ಸರಿಯಲ್ಲ. ಉಚಿತ ವಿದ್ಯುತ್ ಕೊಟ್ಟು ಕಿತ್ತುಕೊಂಡಂತಾಗಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಬೆಲೆ ಏರಿಕೆಗೆ ನಿಗಮಗಳು 2022ರ ನವೆಂಬರ್‌ನಲ್ಲಿ ಮನವಿ ಸಲ್ಲಿಸಿದ್ದು, ಈ ವರ್ಷ ಮೇನಲ್ಲಿ ಅನುಮತಿ ನೀಡಲಾಗಿದೆ. ಕಾಂಗ್ರೆಸ್ ಸರ್ಕಾರವೇ ಬೆಲೆ ಏರಿಸಿದೆಯೆಂದು ಜನ ತಿಳಿದುಕೊಂಡಿದ್ದು, ಪಕ್ಷದ ವರ್ಚಸ್ಸಿಗೂ ಧಕ್ಕೆಯಾಗಿದೆ. ಜನರ ಹಿತದೃಷ್ಟಿಯಿಂದ ಆದೇಶ ಮರು ಪರಿಶೀಲಿಸಿ ಹೊರೆಯಾಗದ ರೀತಿಯಲ್ಲಿ ಜಾರಿಗೊಳಿಸಬೇಕು' ಎಂದು ಆಗ್ರಹಿಸಿದ್ದಾರೆ.

ರಾಜ್ಯದೆಲ್ಲೆಡೆ ವಿದ್ಯುತ್ ಕಣ್ಣಾಮುಚ್ಚಾಲೆ

ಒಂದನೇ ಪುಟದಿಂದ...

ಜೆರಾಕ್ಸ್, ಕಂಪ್ಯೂಟರ್ ಸೆಂಟರ್‌ಗಳ ಮಾಲೀಕರು ಜನರೇಟರ್ ಮೊರೆ ಹೋಗುವಂತಾಗಿದೆ. ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿನ ವರ್ತಕರು ಎಲೆಕ್ಟ್ರಾನಿಕ್ ತೂಕದ ಯಂತ್ರ ಬಳಸುತ್ತಿರುವ ಕಾರಣ ಕೆಲಸದಲ್ಲಿ ವಿಳಂಬವಾಗುತ್ತಿದ್ದು, ರೈತರು ಸಮಸ್ಯೆಗೆ ತುತ್ತಾಗಿದ್ದಾರೆ.

ನಿರ್ವಹಣೆ ಕಾರಣಕ್ಕೆ ಹಲವು ಬಾರಿ ಮಾಹಿತಿ ನೀಡದೆಯೇ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ) ಬೇಕಾಬಿಟ್ಟಿ ವಿದ್ಯುತ್ ಕಡಿತ ಮಾಡುತ್ತಿರುವ ದೂರುಗಳೂ ಕೇಳಿ ಬಂದಿವೆ.

ಕಲ್ಯಾಣ ಕರ್ನಾಟಕದಲ್ಲಿ ಇನ್ನೂ ಮುಂಗಾರು ಮಳೆ ಆರಂಭವಾಗಿಲ್ಲ. ಕೆಂಡದಂತಹ ಬಿಸಿಲು ಹಾಗೂ ಸೆಕೆ ಇದೆ. ಹೀಗಾಗಿ, ಐದು ನಿಮಿಷ ವಿದ್ಯುತ್ ಇಲ್ಲದಿದ್ದರೆ ಫ್ಯಾನ್, ಕೂಲರ್, ಎ.ಸಿಗಳು ಬಂದ್ ಆಗಿ ಬೆವರು ಹರಿಯಲು ಶುರುವಾಗುತ್ತದೆ. ಇತ್ತೀಚೆಗೆ ಕಲಬುರಗಿಯ ಐವಾನ್ ಇ ಶಾಹಿ ಬಡಾವಣೆ ಪ್ರದೇಶದಲ್ಲಿ ಸಂಜೆ ಸುಮಾರು ಒಂದು ಗಂಟೆ ವಿದ್ಯುತ್ ಕಡಿತ ಮಾಡಲಾಗಿತ್ತು. ಈ ಬಗ್ಗೆ ಜೆಸ್ಕಾಂ ಯಾವುದೇ ಮುನ್ಸೂಚನೆಯನ್ನೂ ನೀಡಿರಲಿಲ್ಲ.

ಕಲಬುರಗಿ ಅಷ್ಟೇ ಅಲ್ಲದೇ ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿಯೂ ವಿದ್ಯುತ್ ಕೈ ಕೊಡುವುದು ಸಾಮಾನ್ಯವಾಗಿದೆ.

ಮಂಗಳೂರು ಭಾಗದಲ್ಲಿ ಯಾವುದೇ ಮುನ್ಸೂಚನೆ ನೀಡದೆಯೇ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳುವ ಪ್ರಮಾಣ ಕೆಲ ದಿನಗಳಿಂದ ಈಚೆಗೆ ಹೆಚ್ಚುತ್ತಿದೆ. ಕೆಲವೊಮ್ಮೆ ವಿದ್ಯುತ್ ಇಲ್ಲದೇ ಗಂಟೆಗಟ್ಟಲೆ ಕಳೆಯಬೇಕಾದ ಸ್ಥಿತಿ ಇದೆ.

ಕೊಡಗು ಜಿಲ್ಲೆಯ ವಿವಿಧೆಡೆ ಮಳೆ–ಗಾಳಿಗೆ ಮರದ ಕೊಂಬೆಗಳು ವಿದ್ಯುತ್ ಲೇನ್‌ನ ಮೇಲೆ ಬೀಳುವುದು ಸಾಮಾನ್ಯ. ಸಿಬ್ಬಂದಿ ಸ್ಥಳ ತಲುಪಿ ಸರಿಪಡಿಸುವವರೆಗೂ ಆ ಮುಂದಿನ ಎಲ್ಲ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕವೇ ಇರುವುದಿಲ್ಲ. ಕೈಗಾರಿಕಾ ಜಿಲ್ಲೆಯಾಗದ ಕಾರಣ ವಿದ್ಯುತ್ ಬಳಕೆ ಪ್ರಮಾಣ ಇತರ ಜಿಲ್ಲೆಗಳಂತೆ ಇಲ್ಲ. ಹೀಗಿದ್ದೂ ಈ ಭಾಗದಲ್ಲಿ ಸಹ ವಿದ್ಯುತ್ ಪೂರೈಕೆ ವ್ಯತ್ಯಯಗೊಳ್ಳುತ್ತಿರುವುದು ಸಾಮಾನ್ಯವಾಗಿದೆ.



ಮೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯನ್ನು ಅನಿಯಮಿತವಾಗಿ ಕಡಿತಗೊಳಿಸುವುದು ಇಲ್ಲವೇ ಇಲ್ಲ ಎಂಬಷ್ಟು ಕಡಿಮೆಯಾಗಿತ್ತು. ಆದರೆ, ಈ ಸಲ ವಿದ್ಯುತ್ ಕೈಕೊಡುತ್ತಿದೆ.

ರಾಜೇಶ್, ಗ್ರಾಹಕ, ಮಂಗಳೂರು

ನಮ್ಮ ಬಳಿ ಸಾಕಷ್ಟು ವಿದ್ಯುತ್ ಸಂಗ್ರಹವಿದೆ. ಕೊಪ್ಪಳ ಹಾಗೂ ಗಂಗಾವತಿ ತಾಲ್ಲೂಕುಗಳಲ್ಲಿ ವಿದ್ಯುತ್ ಕಂಬಗಳು ಉರುಳಿ ಬಿದ್ದಿದ್ದರಿಂದ ಅಲ್ಲಿ ದುರಸ್ತಿ ಸಂದರ್ಭದಲ್ಲಿ ಕೆಲಕಾಲ ವಿದ್ಯುತ್ ಕಡಿತ ಮಾಡಿದ್ದೆವು

ರಾಹುಲ್ ಪಾಂಡ್ವೆ

ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ಚಿಂಚನಸೂರ, ಶೆಟ್ಟರ್, ಬೋಸರಾಜು ಕಣಕ್ಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ನ ಮೂರು ಸ್ಥಾನಗಳಿಗೆ ಇದೇ 30ರಂದು ನಡೆಯಲಿರುವ ಉಪ ಚುನಾವಣೆಗಳಿಗೆ ಮಂಗಳವಾರ ಅಧಿಸೂಚನೆ ಹೊರಡಿಸಲಾಗಿದೆ. ಈ ಮೂರೂ ಸ್ಥಾನಗಳಿಗೆ ಪ್ರತ್ಯೇಕವಾಗಿ ಚುನಾವಣೆಯಲ್ಲಿ ನಡೆಯಲಿದ್ದು, ನಾಮಪತ್ರ ಸಲ್ಲಿಸಲು ಇದೇ 20ರವರೆಗೆ ಕಾಲಾವಕಾಶವಿದೆ.

ವಿಧಾನಸಭೆಯಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಹೊಂದಿರುವುದರಿಂದ ಮೂರೂ ಸ್ಥಾನಗಳಿಗೆ ಆ ಪಕ್ಷದ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ನಿಚ್ಚಳವಾಗಿದೆ. ಈ ಮಧ್ಯೆ, ಅವಕಾಶ ಗಿಟ್ಟಿಸಿಕೊಳ್ಳಲು ಕಾಂಗ್ರೆಸ್ಸಿನಲ್ಲಿ ಪೈಪೋಟಿ ಜೋರಾಗಿದೆ.

ಅಭ್ಯರ್ಥಿಗಳ ಆಯ್ಕೆ ಕುರಿತು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಚರ್ಚೆ ನಡೆಸಿದ್ದಾರೆ. ಸುರ್ಜೇವಾಲಾ ಅವರನ್ನು ಜಗದೀಶ ಶೆಟ್ಟರ್ ಸೇರಿದಂತೆ ಕೆಲವು ಆಕಾಂಕ್ಷಿಗಳು ಕೂಡಾ ಭೇಟಿ ಮಾಡಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಬಾಬುರಾವ್ ಚಿಂಚನಸೂರ, ಆರ್. ಶಂಕರ್ ಮತ್ತು ಲಕ್ಷ್ಮಣ ಸವದಿ ಅವರು ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರಿಂದ ಸ್ಥಾನಗಳು ತೆರವಾಗಿವೆ.

ಈ ಮೂರು ಸ್ಥಾನಗಳ ಅಧಿಕಾರಾವಧಿ ಬೇರೆ ಬೇರೆ ಆಗಿರುವುದರಿಂದ ಪ್ರತ್ಯೇಕವಾಗಿ ಚುನಾವಣೆ ನಡೆಯಲಿದೆ. ಮೂರು ಸ್ಥಾನಗಳ ಪೈಕಿ, ಚಿಂಚನಸೂರ ಅವರಿಂದ ತೆರವಾದ ಸ್ಥಾನಕ್ಕೆ ಅವರನ್ನೇ ಕಣಕ್ಕಿಳಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ.

ಆರ್. ಶಂಕರ್ ಅವರಿಂದ ತೆರವಾದ ಸ್ಥಾನಕ್ಕೆ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಅವರಿಂದ ತೆರವಾದ ಸ್ಥಾನಕ್ಕೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರನ್ನು ಕಣಕ್ಕಿಳಿಸುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಕಲ್ಯಾಣ ಕರ್ನಾಟಕ ಭಾಗದ ಕೋಲಿ ಸಮಾಜದ ಚಿಂಚನಸೂರ ಅವರಿಗೇ ಮತ್ತೆ ಅವಕಾಶ ಕಲ್ಪಿಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಸಕ್ತರಾಗಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಸೋತರೂ ಸೂಕ್ತ ಸ್ಥಾನಮಾನದ ಭರವಸೆ ನೀಡಿದ್ದ ಕಾರಣ ಶೆಟ್ಟರ್ ಅವರಿಗೆ ಅವಕಾಶ ಬಹುತೇಕ ಖಚಿತ. ಎಐಸಿಸಿ ಕಾರ್ಯದರ್ಶಿಗಳಾದ ಮನ್ಸೂರ್ ಅಲಿ ಖಾನ್, ಪಿ.ವಿ ಮೋಹನ್ ಹಾಗೂ ಎಂ.ಸಿ. ವೇಣುಗೋಪಾಲ್ ಕೂಡಾ ಆಕಾಂಕ್ಷಿಗಳಾಗಿದ್ದಾರೆ' ಎಂದೂ ಮೂಲಗಳು ಹೇಳಿವೆ.

'ಗೃಹಲಕ್ಷ್ಮಿ': ಮಂಜೂರಾತಿ ಪ್ರಾಧಿಕಾರ

ಬೆಂಗಳೂರು: 'ಗೃಹ ಲಕ್ಷ್ಮಿ' ಯೋಜನೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನೇ ಮಂಜೂರಾತಿ ಪ್ರಾಧಿಕಾರವೆಂದು ಪರಿಗಣಿಸುವ ಸಂಬಂಧ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಈ ಯೋಜನೆಯಡಿ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು ₹2,000 ನೀಡಲಾಗುವುದು. ಇದಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಪರಿಶೀಲಿಸಿ ಮಂಜೂರಾತಿ ನೀಡುವ ಕೆಲಸ ಈ ಅಧಿಕಾರಿಗಳದ್ದು ಎಂದು ಆದೇಶ ತಿಳಿಸಿದೆ.

ಜನಾರ್ದನ ರೆಡ್ಡಿ ಸ್ಥಿರಾಸ್ತಿ ಜಪ್ತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮವಾಗಿ ಅದಿರು ಮಾರಾಟ ಮತ್ತು ರಫ್ತು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಮತ್ತು ಅವರ ಕುಟುಂಬದ ಸದಸ್ಯರಿಗೆ ಸೇರಿದ 118 ಸ್ಥಿರಾಸ್ತಿಗಳನ್ನು ಜಪ್ತಿ ಮಾಡುವಂತೆ ಕೋರಿದ್ದ ಸಿಬಿಐ ಮನವಿಯನ್ನು ಜನಪ್ರತಿನಿಧಿಗಳ ಕೋರ್ಟ್ ಭಾಗಶಃ ಮಾನ್ಯ ಮಾಡಿದೆ.

ಈ ಕುರಿತಂತೆ ಸಿಬಿಐ ದಾಖಲಿಸಿದ್ದ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶ ಬಿ.ಜಯಂತ್ ಕುಮಾರ್ ವಿಚಾರಣೆ ನಡೆಸಿ ಇದೇ 12ರಂದು ಆದೇಶ ಪ್ರಕಟಿಸಿದ್ದಾರೆ.

ಸಿಬಿಐ 118 ಸ್ಥಿರಾಸ್ತಿಗಳನ್ನು ಲಗತ್ತಿಸಲು ಪಟ್ಟಿ ಮಾಡಿತ್ತು. ಷೆಡ್ಯೂಲ್ ಪ್ರಕಾರ ಲಗತ್ತಿಸಲು ಕೋರಿದ್ದ ಸ್ಥಿರಾಸ್ತಿಗಳು ₹ 65.05 ಕೋಟಿಗಳ ಮೌಲ್ಯ ಹೊಂದಿದ್ದು, ಇವುಗಳಲ್ಲಿ ನ್ಯಾಯಾಲಯವು ರೆಡ್ಡಿ ಮತ್ತು ಅವರ ಪತ್ನಿ ಲಕ್ಷ್ಮಿ ಅರುಣಾ ಹೆಸರಿನಲ್ಲಿರುವ 77 ಅನ್ನು ಸ್ಥಿರಾಸ್ತಿಗಳನ್ನು ಲಗತ್ತಿಸಲು ಅನುಮತಿ ನೀಡಿದೆ.

'ಪ್ರಕರಣದಲ್ಲಿ ಒಟ್ಟು 21 ಜನ ಆರೋಪಿಗಳಿದ್ದು, 6.05 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರಿನ ಅಕ್ರಮ ಮಾರಾಟ ಮತ್ತು ರಫ್ತಿಗೆ ಸಂಬಂಧಿಸಿದಂತೆ ಸರ್ಕಾರದ ಬೊಕ್ಕಸಕ್ಕೆ ₹ 198 ಕೋಟಿ ನಷ್ಟ ಉಂಟು ಮಾಡಿದ್ದಾರೆ' ಎಂದು ಸಿಬಿಐ ಪ್ರತಿಪಾದಿಸಿತ್ತು.

ಸದಾಶಿವ ಆಯೋಗದ ವರದಿ ಮಂಡನೆ?

ಬೆಂಗಳೂರು: 'ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಮುಂದಿನ ತಿಂಗಳು ನಡೆಯುವ ಬಜೆಟ್ ಅಧಿವೇಶನದಲ್ಲೇ ಮಂಡಿಸಲು ಪ್ರಯತ್ನಿಸಲಾಗುವುದು' ಎಂದು ಗೃಹಸಚಿವ ಜಿ.ಪರಮೇಶ್ವರ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪರಿಶಿಷ್ಟ ಸಮುದಾಯಗಳ ಸಹೋದರತ್ವ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಗೆ ನಾನೇ ಅಧ್ಯಕ್ಷನಾಗಿದ್ದೆ. ಕೊಟ್ಟ ಭರವಸೆಯಂತೆ ಮೊದಲ ಅಧಿವೇಶನದಲ್ಲೇ ವರದಿಯನ್ನು ಮಂಡಿಸಲು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು. ವರದಿಯ ಕುರಿತು ಸದನದಲ್ಲಿ ವಿಸ್ತೃತ ಚರ್ಚೆಗಳು ನಡೆಯಬೇಕು. ನಂತರ ಒಳಮೀಸಲಾತಿ ನಿಗದಿಮಾಡಿ ಕೇಂದ್ರಕ್ಕೆ ಶಿಫಾರಸು ಮಾಡಲಾಗುವುದು' ಎಂದು ಸುಳಿವು ನೀಡಿದರು.

'ಪರಿಶಿಷ್ಟರ ಒಳ ಮೀಸಲಾತಿ ಕುರಿತು ಬಿಜೆಪಿ ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಬದಿಗೆ ಸರಿಸಿ, ಮನಸ್ಸಿಗೆ ತೋಚಿದಂತೆ ಚುನಾವಣಾ ಹೊಸ್ತಿಲಲ್ಲಿ ತರಾತುರಿಯಲ್ಲಿ ಮೀಸಲಾತಿ ಘೋಷಿಸಿತು. ಪರಿಶಿಷ್ಟರ ಮಧ್ಯೆಯೇ ಒಡೆದು ಆಳುವ ನೀತಿ ಅನುಸರಿಸಿತು. ಆದರೆ, ಪರಿಶಿಷ್ಟ ಸಮುದಾಯದ ಸಹೋದರರು ಅದಕ್ಕೆ ಅವಕಾಶ ನೀಡದೆ ಬಿಜೆಪಿಗೆ ತಕ್ಕ ಉತ್ತರ ನೀಡಿದರು. ಅದರ ಫಲವಾಗಿಯೇ 51 ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ 37 ಸ್ಥಾನ ಪಡೆಯಲು ಸಾಧ್ಯವಾಯಿತು' ಎಂದರು. ಪ್ರಜಾ ಪರಿವರ್ತನಾ ವೇದಿಕೆ ಅಧ್ಯಕ್ಷ ಬಿ. ಗೋಪಾಲ್ ಪ್ರಾಸ್ತಾವಿಕ ಭಾಷಣ ಮಾಡಿದರು.

2ನೇ ದಿನ 41.34 ಲಕ್ಷ ಸ್ತ್ರೀಯರ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಕ್ತಿ ಯೋಜನೆ ಜಾರಿಯಾದ ಎರಡನೇ ದಿನ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಒಟ್ಟು 41,34,726 ಮಹಿಳೆಯರು ಪ್ರಯಾಣಿಸಿದ್ದಾರೆ.

ಭಾನುವಾರ ತಡರಾತ್ರಿ 1 ಗಂಟೆಯಿಂದ ಸೋಮವಾರ ಮಧ್ಯರಾತ್ರಿ 12 ಗಂಟೆಯಿಂದ ಮಂಗಳವಾರ ಮಧ್ಯಾಹ್ನ 12 ಗಂಟೆಯವರೆಗೆ ಪ್ರಯಾಣಿಸಿದ ಮಹಿಳೆಯರ ವಿವರಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೀಡಿದೆ. ಸರ್ಕಾರ ಭರಿಸಲಿರುವ ಈ ಟಿಕೆಟ್‌ಗಳ ಒಟ್ಟು ಮೊತ್ತ ₹8,83,53,434 ಆಗಿದೆ.

ಕೆಎಸ್‌ಆರ್‌ಟಿಸಿಯಲ್ಲಿ 11,40,057 ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದರು. ಅದರ ಮೌಲ್ಯ ₹3,57,84,677 ಆಗಿದೆ. ಬಿಎಂಟಿಸಿಯಲ್ಲಿ 17,57,887 ಮಹಿಳೆಯರು ಈ ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದು, ಅದರ ಮೌಲ್ಯ ₹1,75,33,234, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ 8,31,840 ಮಹಿಳೆಯರು ಪ್ರಯಾಣಿಸಿದ್ದಾರೆ. ಅದರ ಮೌಲ್ಯ ₹2,10,66,638, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 4,04,942 ಮಹಿಳೆಯರು ಪ್ರಯಾಣ ಮಾಡಿದ್ದು, ಅದರ ಮೌಲ್ಯ ₹1,39,68,885 ಆಗಿದೆ ಎಂದು ತಿಳಿಸಿದೆ.



'ಶಕ್ತಿ' ಯೋಜನೆ ಮೂಲಕ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿರುವುದರಿಂದ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ನಿರ್ವಾಹಕರೊಬ್ಬರು ದಾಖಲೆ ಪರಿಶೀಲಿಸಿ ಟಿಕೆಟ್ ಕೊಡಲು ಹರಸಾಹಸ ಮಾಡುತ್ತಿರುವ ದೃಶ್ಯ ಕಲಬುರಗಿಯ ನಗರ ಬಸ್ ನಿಲ್ದಾಣದಲ್ಲಿ ಮಂಗಳವಾರ ಕಂಡುಬಂತು —ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನೆ

'ಗ್ಯಾರಂಟಿ ಯೋಜನೆಗೆ ಯಾವ ಹಣ ಬಳಕೆ?'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಲು ಹಣ ಹೇಗೆ ಹೊಂದಿಸುತ್ತಾರೆ ಎಂಬುದನ್ನು ಮುಖ್ಯಮಂತ್ರಿ ಈವರೆಗೆ ತಿಳಿಸಿಲ್ಲ. ಒಂದು ಕೈಯಿಂದ ಕಿತ್ತು, ಇನ್ನೊಂದು ಕೈಗೆ ಕೊಡುವಂತೆ ಆಗಬಾರದು. ಎಲ್ಲಿಂದ ಹಣ ತರುವರು? ಯಾವ ಯೋಜನೆಯ ಹಣವನ್ನು ಕಡಿತಗೊಳಿಸುವರು ಎಂಬುದನ್ನು ಕೂಡಲೇ ತಿಳಿಸಬೇಕು. ತಿಳಿದುಕೊಳ್ಳುವ ಹಕ್ಕು ಜನರಿಗೆ ಇದೆ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಗ್ಯಾರಂಟಿ ಯೋಜನೆ ಅನುಷ್ಠಾನಗೊಳಿಸಲು ತಗಲುವ ಅಂದಾಜು ವೆಚ್ಚದ ಹಣವನ್ನು ಸಾರಿಗೆ ನಿಗಮ, ಎಸ್ಕಾಂಗಳಿಗೆ ಮುಂಗಡವಾಗಿ ಸರ್ಕಾರ ನೀಡಬೇಕಿತ್ತು. ಸಾಲ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಅವುಗಳಿಲ್ಲ. ಯೋಜನೆ ಜಾರಿಯಿಂದ ನಿಗಮಗಳು ಪ್ರತಿದಿನ ನಷ್ಟ ಅನುಭವಿಸುವಂತಾಗಬಾರದು' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ವಿದ್ಯುತ್ ದರ ನಾವು ಏರಿಸಿಲ್ಲ': 'ವಿದ್ಯುತ್ ದರವನ್ನು ನಮ್ಮ ಸರ್ಕಾರ ಏರಿಕೆ ಮಾಡಿಲ್ಲ. ದರ ಏರಿಕೆಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಸಲ್ಲಿಸಿದ್ದ ಪ್ರಸ್ತಾವವನ್ನು ಸ್ವೀಕರಿಸಿರಲಿಲ್ಲ. ಆದರೆ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದೆ. ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವಂತೆ ದರ ಏರಿಸಿದೆ' ಎಂದರು.

ಮೂರು ಸ್ಥಾನಗಳಿಗೆ ಸ್ಪರ್ಧೆ: 'ವಿಧಾನ ಪರಿಷತ್‌ನ ಮೂರು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಪಕ್ಷದ ವತಿಯಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಕುರಿತು 2 ರಿಂದ 3 ದಿನಗಳಲ್ಲಿ ತೀರ್ಮಾನಿಸುತ್ತೇವೆ' ಎಂದರು.

ಜೆಡಿಎಸ್ ಜೊತೆ ಚರ್ಚೆ ನಡೆದಿಲ್ಲ: 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ ಕುರಿತು ಈವರೆಗೆ ಚರ್ಚಿಸಿಲ್ಲ. ಮುಂದೇನು ಆಗುವುದೋ ಗೊತ್ತಿಲ್ಲ. ರಾಜಕೀಯದಲ್ಲಿ ಏನಾದರೂ ಆಗಬಹುದು' ಎಂದರು.

'ವಿರೋಧ ಪಕ್ಷದ ನಾಯಕನ ಸ್ಥಾನದ ಆಕಾಂಕ್ಷಿ ನಾನಲ್ಲ. ನಾನು ಅದನ್ನು ಬಯಸುವುದೂ ಇಲ್ಲ. ಅಧಿವೇಶನ ಕರೆದ ಕೂಡಲೇ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲಾಗುವುದು. ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ' ಎಂದರು.

'ಚುನಾವಣೆ ವೇಳೆ ಬದಲಾವಣೆ ಸಹಜ'



ಭಗವಂತ ಖೂಬಾ


ಹುಬ್ಬಳ್ಳಿ: 'ಚುನಾವಣೆ ಘೋಷಣೆಯಾದಾಗ ಬಿಜೆಪಿ ಕೆಲ ಬದಲಾವಣೆ ಮಾಡುವುದು ಸಹಜ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಯಾರಿಗೆ ಟಿಕೆಟ್ ಕೊಡಬೇಕು ಅಥವಾ ಕೊಡಬಾರದು ಎಂಬುದು ಇನ್ನೂ ಚರ್ಚೆಗೆ ಬಂದಿಲ್ಲ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರಗಳ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದರು.

ರಾಜ್ಯದ ಹಾಲಿ 12 ಸಂಸದರಿಗೆ ಟಿಕೆಟ್ ಕೈತಪ್ಪುವ ವಿಷಯದ ಕುರಿತು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಬದಲಾವಣೆ ಮೊದಲಿನಿಂದಲೂ ಇದೆ. ಯಾವ ರೀತಿ ಬದಲಾವಣೆ ಎಂಬುದು ನಿಖರ ಮತ್ತು ಬಹಿರಂಗವಾಗಿ ಹೇಳಲು ಆಗದು. ಪಕ್ಷದಲ್ಲಿ ವೇದಿಕೆ ಇದೆ. ಅಲ್ಲಿಯೇ ಚರ್ಚಿಸುತ್ತೇವೆ' ಎಂದರು.

'ಕಾಂಗ್ರೆಸ್ ನಾಯಕರು ಚುನಾವಣೆಯಲ್ಲಿ ಜನರನ್ನು ನಂಬಿಸಿ ವಂಚಿಸಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದ ಆರ್ಥಿಕ ಸ್ಥಿತಿ ಅಧೋಗತಿಗೆ ಒಯ್ಯುವ ದುರುದ್ದೇಶದಿಂದ ಅಧಿಕಾರಕ್ಕೆ ಬಂದಿದ್ದಾರೆ. ಕಾಂಗ್ರೆಸ್ ವಂಚನೆ ಜನರಿಗೆ ಮನವರಿಕೆಯಾಗಿದೆ. ಎರಡು ತಿಂಗಳಲ್ಲಿ ಕಾಂಗ್ರೆಸ್‌ನ ಬಣ್ಣ ಬಯಲಾಗಲಿದೆ' ಎಂದರು.

ಪತ್ರಕರ್ತ, ಕವಿ 'ಹಾಡು-ಪಾಡು' ರಾಮು ಇನ್ನಿಲ್ಲ

ಪ್ರಜಾವಾಣಿ ವಾರ್ತೆ



ಮೈಸೂರು: ಇಲ್ಲಿನ ಸರಸ್ವತಿಪುರಂ ನಿವಾಸಿ, ಪತ್ರಕರ್ತ, ಕವಿ, 'ಹಾಡು-ಪಾಡು' ರಾಮು ಎಂದೇ ಪ್ರಸಿದ್ಧರಾಗಿದ್ದ ಟಿ.ಎಸ್.ರಾಮಸ್ವಾಮಿ (69) ಮಂಗಳವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು.


ಅವಿವಾಹಿತರಾಗಿದ್ದ ಅವರಿಗೆ ಸೋದರ ಟಿ.ಎಸ್. ವೇಣುಗೋಪಾಲ್, ಸೋದರಿ ರಾಜಲಕ್ಷ್ಮಿ ಇದ್ದಾರೆ.

ಪುಣೆ ವಿಶ್ವವಿದ್ಯಾಲಯದಲ್ಲಿ ಭಾಷಾ ವಿಜ್ಞಾನ ಹಾಗೂ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿ ಪಡೆದಿದ್ದರು. ದಲಿತ ಹಾಗೂ ಪ್ರಗತಿಪರ ಚಳವಳಿಗಳಲ್ಲಿ ಸಕ್ರಿಯರಾಗಿದ್ದರು.


'ಅಗ್ನಿಸೂಕ್ತ', 'ವಿಷ್ಣುಕ್ರಾಂತಿ ಮತ್ತು ಇತರ ಪದ್ಯಗಳು', 'ರಾಮು ಕವಿತೆಗಳು' ಅವರ ಪ್ರಕಟಿತ ಕವನ ಸಂಕಲನಗಳು. 'ರಾಮು ಕವಿತೆಗಳು' ಕೃತಿಯನ್ನು 'ಋತುಮಾನ' ಪ್ರಕಾಶನವು ಪ್ರಕಟಿಸಿದಾಗ ತಮ್ಮ ಹೆಸರನ್ನು ಉಲ್ಲೇಖಿಸದಂತೆ ಅವರು ಹೇಳಿದ್ದರು.

ಆಂದೋಲನ ಪತ್ರಿಕೆಯ ಭಾನುವಾರದ ಪುರವಣಿ 'ಹಾಡು-ಪಾಡು' ಇವರ ನೇತೃತ್ವದಲ್ಲಿ ದಶಕಕ್ಕೂ ಹೆಚ್ಚು ಕಾಲ ರೂಪುಗೊಂಡಿತು. ಆದ್ದರಿಂದಲೇ 'ಹಾಡು–ಪಾಡು' ರಾಮು ಎಂದು ಹೆಸರಾಗಿದ್ದರು. ಅವರಿಗೆ 2007ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸಂದಿತು. ದೇವನೂರ ಮಹಾದೇವ, ವಿಮರ್ಶಕ ಓ.ಎಲ್.ನಾಗಭೂಷಣಸ್ವಾಮಿ, ರಹಮತ್ ತರೀಕೆರೆ ಸೇರಿದಂತೆ ಸಾಹಿತ್ಯ ಲೋಕದ ಹಲವರ ಒಡನಾಡಿಗಳಾಗಿದ್ದರು.


ಕವಿತೆ ಓದಿ ಅಂತಿಮ ನಮನ: ಎಚ್.ಎಸ್.ರಾಘವೇಂದ್ರರಾವ್, ಓಎಲ್‌ಎನ್, ರಾಜೇಂದ್ರ ಚೆನ್ನಿ, ಜ.ನಾ.ತೇಜಶ್ರೀ ಸೇರಿದಂತೆ ಹಲವು ಲೇಖಕರು ರಾಮು ಕವಿತೆಗಳನ್ನು ಓದುವ ಮೂಲಕ ಕಾವ್ಯ ನಮನ ಅರ್ಪಿಸಿದರು. ರಂಗಕರ್ಮಿ ಎಚ್. ಜನಾರ್ದನ ಅವರು ಕುವೆಂಪು ಅವರ 'ಓ ನನ್ನ ಚೇತನ' ಗೀತೆಯೊಂದಿಗೆ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮಧ್ಯಾಹ್ನ 2ಕ್ಕೆ ನೆರವೇರಿತು.



ರೋಬಾಟ್ ಬಾಣಸಿಗ ಸಿದ್ಧ!



ಜೀವನದ ಎಲ್ಲ ಕ್ಷೇತ್ರಗಳಲ್ಲೂ ರೋಬಾಟ್‌ಗಳು ಪ್ರವೇಶ ಮಾಡುತ್ತಿವೆ. ಈಗ ಇವು ನಮ್ಮ ಅಡುಗೆಮನೆಯನ್ನೂ ಪ್ರವೇಶ ಮಾಡಲಿವೆ ಎನ್ನುತ್ತಿದ್ದಾರೆ ವಿಜ್ಞಾನಿಗಳು. ದಣಿವಿಲ್ಲದೇ ಕೆಲಸ ಮಾಡುವ ಇವುಗಳಿಂದ ವಯೋವೃದ್ಧರು, ಅಂಗವಿಕಲರು, ಒಬ್ಬಂಟಿಗಳಿಗೆ ಸಹಾಯವಾಗಬಹುದು.



ನೇಸರ ಕಾಡನಕುಪ್ಪೆ

'ನೋಡಿ ಕಲಿ, ಮಾಡಿ ತಿಳಿ' ಎನ್ನುವ ಮಾತು ಯಾರಿಗೆ ತಾನೇ ಗೊತ್ತಿಲ್ಲ? ವಿದ್ಯಾರ್ಥಿಗಳಿಗಾದಿಯಾಗಿ ಎಲ್ಲರಿಗೂ ಈ ಮಾತನ್ನು ಹೇಳುವುದುಂಟು. ಇನ್ನು ಮುಂದೆ ಈ ಮಾತನ್ನು ರೋಬಾಟ್‌ಗಳಿಗೂ ಹೇಳಬೇಕೋ ಏನೋ! ಏಕೆಂದರೆ, ಅಡುಗೆಯನ್ನು ಮಾಡುವ ವಿಡಿಯೊಗಳನ್ನು ನೋಡಿ, ಕಲಿತು ಪ್ರಯೋಗ, ಮಾಡುವ ರೋಬಾಟ್ ಅನ್ನು ವಿಜ್ಞಾನಿಗಳು ಸಂಶೋಧಿಸಿದ್ದಾರೆ!

ಹೌದು, ಇಂತಹ ಕಾಲವೂ ಬಂದಿದೆ. ಈಗೆಲ್ಲಾ ಯೂಟ್ಯೂಬ್ ವಿಡಿಯೊಗಳನ್ನು ನೋಡಿ ಅಡುಗೆ ಮಾಡುವ ಟ್ರೆಂಡ್ ಹೆಚ್ಚಾಗುತ್ತಿದೆ. ಹಿಂದೆಲ್ಲಾ ಅಡುಗೆ ತಯಾರಿಗಾಗಿಯೇ ಜೊತೆಗೆ ಇರಿಸಿಕೊಳ್ಳುತ್ತಿದ್ದ ಅಡುಗೆ ಸಿದ್ಧತೆಯ ಪುಸ್ತಕ ಈಗ ಪ್ರಸ್ತುತವಾಗಿ ಉಳಿದೇ ಇಲ್ಲ. ಬೇಕಾಗುವ ಸಾಮಗ್ರಿ, ತಯಾರಿಯ ವಿಧಾನ ಇತ್ಯಾದಿಗಳನ್ನು ಬರೆದಿಟ್ಟುಕೊಳ್ಳಬೇಕಾದ ಗೋಜೇ ಇಲ್ಲ. ಏಕೆಂದರೆ, ಅಡುಗೆ ತಯಾರಿಯ ವಿಡಿಯೊಗಳು ಬಹು ದೊಡ್ಡ ಸಂಖ್ಯೆಯಲ್ಲಿ ಎಲ್ಲ ಭಾಷೆಗಳಲ್ಲೂ ಇಂಟರ್ನೆಟ್‌ನಲ್ಲಿ ಸಿಗುತ್ತವೆ.

ಆದರೆ, ಇಲ್ಲಿ ಹೇಳುತ್ತಿರುವುದು ಕೊಂಚ ಭಿನ್ನವಾದುದು. ನಿಧಾನಗತಿಯಲ್ಲಿ 'ಅಲೆಕ್ಸಾ'ದಂತಹ, ಮನೆಯನ್ನು ಶುಚಿಗೊಳಿಸುವ ಕೃತಕ ಬುದ್ಧಿಮತ್ತೆಯ ಸಾಧನಗಳು ಮನೆಗೆ ಪ್ರವೇಶ ನೀಡಿವೆ ಅಥವಾ ನೀಡುತ್ತಿವೆ ಅಲ್ಲವೇ? ಕೆಲವೇ ದಿನಗಳಲ್ಲಿ ಮನೆಕೆಲಸ ಮಾಡುವ ಮಾನವರೂಪದಲ್ಲೇ ಇರುವ ರೋಬಾಟ್‌ಗಳೂ ನಮ್ಮ ಮನೆಯನ್ನು ಪ್ರವೇಶ ಮಾಡಬಹುದು. 'ಸೋಫಿಯಾ' ಮಾದರಿಯ ಹೊಸ ವಿಚಾರಗಳನ್ನು ಕಲಿತುಕೊಳ್ಳುವ ರೋಬಾಟ್‌ಗಳ ಸಂಖ್ಯೆಯೂ ಹೆಚ್ಚಾಗಬಹುದು.

ಪ್ರಸಿದ್ಧ ಕೇಂಬ್ರಿಜ್ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿಭಾಗದ ಸಂಶೋಧಕ ಗ್ರೆಗೋಶ್ ಸೊಶಾಕಿ ಅವರ ತಂಡವು ಈ ವಿನೂತನ ರೋಬಾಟ್ ಅನ್ನು ರೂಪಿಸಿದ್ದಾರೆ. ಈ ರೋಬಾಟ್‌ಗೆ ಮಾನವರೂಪವನ್ನು ನೀಡುವ ಉದ್ದೇಶವೂ ಇವರಿಗಿದೆ. ಈ ರೋಬಾಟ್‌ನ ಕಾರ್ಯವೈಖರಿ ಬಹಳ ಸರಳವಾಗಿದೆ. ತನ್ನಲ್ಲಿರುವ ವಿಡಿಯೊ ಕ್ಯಾಮೆರಾಗಳ ಸಹಾಯದಿಂದ ಇಂಟರ್ನೆಟ್‌ನಲ್ಲಿರುವ ಅಡುಗೆತಯಾರಿಯ ವಿಡಿಯೊಗಳನ್ನು ನೋಡುವುದು. ಬಳಿಕ ಅಡುಗೆಗೆ ಬೇಕಾದ ಸಾಮಗ್ರಿಗಳಿಂದ ಮೆಕ್ಯಾನಿಕಲ್ ಕೈಗಳ ಸಹಾಯದಿಂದ ಅಡುಗೆ ತಯಾರಿಸುವುದು.

ಈ ಪ್ರಕ್ರಿಯೆ ಓದಲು ಬಹು ಸರಳವಾಗಿ ಕಂಡರೂ ಬಹು ಸಂಕೀರ್ಣವಾದುದು. ಏಕೆಂದರೆ, ಅಡುಗೆ ತಯಾರಿಗೆ ಕೇವಲ ಬೇಕಾಗುವ ಸಾಮಗ್ರಿಗಳಿದ್ದರೆ ಸಾಲದು. ವಾಸನೆಯ ಗ್ರಹಿಕೆ ಇರಬೇಕು. ಅಡುಗೆ ಬೇಯುವ ಹದದ ಬಗ್ಗೆ ಜ್ಞಾನವಿರಬೇಕು. ಅಡುಗೆಯ ಸ್ವರೂಪ ಹಾಗೂ ಅಂದದ ಬಗ್ಗೆ ತಿಳಿವಳಿಕೆ ಇರಬೇಕು. ಮೇಲಾಗಿ ಅಡುಗೆ ಮಾಡಲು ಅನುಭವವೂ ಇರಬೇಕು. ಇಷ್ಟೆಲ್ಲಾ ವಿಚಾರಗಳು ಅಡುಗೆ ಸಿದ್ಧಪಡಿಸುವ ವ್ಯಕ್ತಿಗೆ ತಿಳಿದಿದ್ದೂ ಅಡುಗೆ ಹಾಳಾಗುವ ಸಾಧ್ಯತೆ ಇರುತ್ತದೆ. ಇನ್ನು ಯಂತ್ರವೊಂದು ಅಡುಗೆ ಮಾಡಬೇಕು ಎಂದಾದರೆ, ಅದನ್ನು ಇನ್ನೆಷ್ಟು ಸಂಕೀರ್ಣ ಗುಣಗಳಿಂದ ಸಿದ್ಧಪಡಿಸಬೇಕಾಗುವುದು ಅಲ್ಲವೇ!?

'ಇದೇ ನಮಗೆ ಸವಾಲಾಗಿದ್ದು, ಜ್ಞಾನಶೇಖರಣೆ, ದತ್ತಾಂಶ ವಿಶ್ಲೇಷಣೆ, ಕ್ಯಾಮೆರಾ, ದತ್ತಾಂಶ ರವಾನೆ ಈಗ ಸವಾಲಾಗೇ ಉಳಿದಿಲ್ಲ. ತಂತ್ರಜ್ಞಾನ ಆಗಲೇ ಸುಧಾರಿಸಿದೆ. ಅಡುಗೆ ತೀರಾ ಯಾಂತ್ರಿಕವಾಗಿರಬಾರದು. ಅಡುಗೆಯ ತಯಾರಿಯಲ್ಲಿ ಕೊಂಚ ದೋಷವೂ ಇರಬೇಕು. ಆಗಲೇ ಅಡುಗೆ ಚೆನ್ನಾಗಿ ಆಗುವುದು. ಅಲ್ಲದೇ, ಅಡುಗೆಯು ಪ್ರತಿ ಬಾರಿ ತಯಾರಿಸಿದಾಗಲೂ ಕೊಂಚ ವಿಭಿನ್ನವಾದ ರುಚಿಯನ್ನು ನೀಡಬೇಕು. ಅದು ಮಾನವಸಹಜವಾದುದು. ನಾವು ತಯಾರಿಸುವ ರೋಬಾಟ್‌ಗೆ ಈ ವಿಚಾರಗಳನ್ನು ಹೆಚ್ಚು ಕಲಿಸಲಾಯಿತು' ಎಂದು ಸಂಶೋಧಕ ಸೊಶಾಕಿ ವಿಶ್ಲೇಷಿಸಿದ್ದಾರೆ.

ಸೊಶಾಕಿ ಅವರ ತಂಡವು ಮೊದಲು ಎಂಟು ಖಾದ್ಯಗಳ ಅಡುಗೆಯ ತಯಾರಿ ವಿಡಿಯೊಗಳನ್ನು ಸಿದ್ಧಪಡಿಸಿದೆ. ಬಳಿಕ ಅದನ್ನು ಇಂಟರ್ನೆಟ್‌ಗೆ ಅಪ್‌ಲೋಡ್ ಮಾಡಿದೆ. ಬ್ರೊಕೋಲಿ, ಕ್ಯಾರೆಟ್, ಸೇಬು, ಬಾಳೆ ಹಾಗೂ ಕಿತ್ತಲೆಹಣ್ಣುಗಳನ್ನು ಬಳಸಿಕೊಂಡು ಅಡುಗೆಯನ್ನು ಮಾಡಬಹುದಾದ ವಿಡಿಯೊಗಳಿವು. ಈ ವಿಡಿಯೊಗಳನ್ನು ರೋಬಾಟ್‌ಗೆ ತೋರಿಸಿದಾಗ ವಿಡಿಯೊದ ಪ್ರತಿ ದೃಶ್ಯಗಳನ್ನು (ಫ್ರೇಂ) ರೋಬಾಟ್ ಸೂಕ್ಷ್ಮವಾಗಿ ವಿಶ್ಲೇಷಿಸಿದೆ. ಹಣ್ಣು-ತರಕಾರಿಗಳನ್ನು ಕತ್ತರಿಸುವ ರೀತಿ, ಬೇಯಿಸುವ ವಿಧಾನ – ಒಟ್ಟಾರೆಯಾಗಿ ಅಡುಗೆಯ ಎಲ್ಲ ಹಂತಗಳನ್ನು ರೋಬಾಟ್ ಗಮನಿಸಿ ತನ್ನ ಸ್ಮರಣೆಯಲ್ಲಿ ಶೇಖರಿಸಿಕೊಟ್ಟುಕೊಂಡಿದೆ. ಬಳಿಕ, ತನ್ನ ಬಳಿ ಇರುವ ಅಡುಗೆ ಸಾಮಗ್ರಿಗಳನ್ನು ವಿಡಿಯೊದಲ್ಲಿರುವ ವಿಧಾನದಂತೆಯೇ ತಯಾರಿಸುತ್ತದೆ.

'ಈ ರೋಬಾಟ್‌ಗೆ ಕಚ್ಚಾ ಸಾಮಗ್ರಿಗಳನ್ನು ಮನುಷ್ಯರೇ ಕೊಡಬೇಕಾದ್ದು ದೊಡ್ಡ ಮಿತಿ. ರೋಬಾಟ್ ಸ್ವತಃ ತಾನೇ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವುದು ಸದ್ಯಕ್ಕೆ ಸಾಧ್ಯವಿಲ್ಲ. ಏಕೆಂದರೆ, ಸಾರ್ವಜನಿಕ ಸ್ಥಳಗಳಲ್ಲಿ ರೋಬಾಟ್ ಸಂಚಾರಕ್ಕೆ ಕಾನೂನುಗಳ ತಯಾರಿ, ಸಮ್ಮತಿ ಅಗತ್ಯವಿದೆ. ಅದು ಭವಿಷ್ಯದ ಹೆಜ್ಜೆ. ಆದರೆ, ನಾವೀಗ ಯಂತ್ರವೊಂದು ಅಡುಗೆ ಮಾಡಬಲ್ಲದು ಎಂಬುದನ್ನು ಸಾಬೀತುಪಡಿಸಿದ್ದೇವೆ. ರೋಬಾಟ್‌ನಿಂದ ಉದ್ದೇಶಪೂರ್ವಕವಾಗಿಯೇ ಕೆಲವು ತಪ್ಪುಗಳನ್ನು ಮಾಡಿಸಿದ್ದೇವೆ. ಅದು ಅಡುಗೆಯ ಸ್ವಾದದ ಮೇಲೆ ಸಕಾರಾತ್ಮಕವಾಗಿಯೂ ನಕಾರಾತ್ಮಕವಾಗಿಯೂ ಪರಿಣಾಮ ಬೀರಬಲ್ಲದು' ಎಂದು ಸೊಶಾಕಿ ವಿವರಿಸಿದ್ದಾರೆ.

ಹೋಟೆಲ್ ಉದ್ಯಮಕ್ಕೆ ಈ ರೋಬಾಟ್ ವರದಾನವಾಗಲಿದೆ. ದಣಿವಿಲ್ಲದೇ ಕೆಲಸ ಮಾಡುವ ಶಕ್ತಿ ಈ ರೋಬಾಟ್‌ಗೆ ಇರಲಿದೆ. ವಯೋವೃದ್ಧರು, ಅಂಗವಿಕಲರು ಅಥವಾ ಒಬ್ಬಂಟಿಗಳಿಗೆ ಈ ರೋಬಾಟ್ ಸಹಾಯಮಾಡಲಿದೆ ಎಂದು ಈ ವಿಜ್ಞಾನಿಗಳು ನಂಬಿದ್ದಾರೆ. ಅಮೆರಿಕದ ಮ್ಯಾನ್‌ಹಟನ್‌ನ ಪ್ರತಿಷ್ಠಿತ 'ದಿ ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ಸ್' (ಐಇಇಇ) ಸಂಶೋಧನಾ ನಿಯತಕಾಲಿಕೆಯಲ್ಲಿ ಈ ಸಂಶೋಧನಾ ತಂಡವು ಈ ರೋಬಾಟ್ ಬಗ್ಗೆ ವೈಜ್ಞಾನಿಕ ಲೇಖನವನ್ನೂ ಪ್ರಕಟಿಸಿದೆ.

ಗುಳಿಗೆ ಗಾತ್ರದ ಗಣಕ ಭಂಡಾರ

ಒಂದು ಗುಳಿಗೆಯೊಳಗೇ ಸೂಪರ್ ಕಂಪ್ಯೂಟರಿನಲ್ಲಿ ಇರುವಷ್ಟು ಮಾಹಿತಿಯನ್ನು ಸಂಗ್ರಹಿಸಬಹುದಂತೆ. ಅಗಾಧ ಮಾಹಿತಿಯನ್ನು ಡಿಎನ್‌ಎ ರೂಪದಲ್ಲಿ ಗುಳಿಗೆಯೊಂದರಲ್ಲಿ ಅಡಗಿಸಿ ಇಡಬಹುದಾದ ತಂತ್ರವನ್ನು ವಿಜ್ಞಾನಿಗಳು ರೂಪಿಸಿದ್ದಾರೆ.

ಕೊಳ್ಳೇಗಾಲ ಶರ್ಮ



ಎರಡು ವರ್ಷಕ್ಕೊಮ್ಮೆ ಫೋನು ಬದಲಾಯಿಸಿ ಬೇಸರವಾಗಿದೆಯೇ? ತಾಳಿ. ಹೊಸ ಡಿಎನ್‌ಎ ಗಣಕ ತಂತ್ರಜ್ಞಾನಗಳು ಸಫಲವಾದರೆ ಈ ಸಮಸ್ಯೆ ಕಡಿಮೆ ಆದೀತು. ಎರಡು ವರ್ಷಗಳ ಹಿಂದೆ ಇದ್ದ ಸ್ಮಾರ್ಟ್ ಫೋನುಗಳು ಅತಿ ಹೆಚ್ಚು ಎಂದರೆ 64 ಗಿಗಾಬೈಟುಗಳಷ್ಟು ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳಬಲ್ಲವಾಗಿದ್ದುವು. ಇಂದು ಅದರ ದುಪ್ಪಟ್ಟು, ನಾಲ್ಕು ಪಟ್ಟು ಸಾಮರ್ಥ್ಯ ಇರುವ ಫೋನುಗಳಿವೆ. ಕೆಲವೇ ವರ್ಷಗಳ ಹಿಂದೆ ಒಂದು ಗಣಕಯಂತ್ರದಲ್ಲಿ ಸಂಗ್ರಹಿಸಿ ಇಟ್ಟುಕೊಳ್ಳಲಷ್ಟೆ ಆಗುತ್ತಿದ್ದ ವೀಡಿಯೋಗಳು, ಚಿತ್ರಗಳು, ಪುಸ್ತಕಗಳನ್ನೆಲ್ಲ ಈಗ ಅಂಗೈಯೊಳಗಿನ ಈ ಸಾಧನದಲ್ಲಿ ಅಡಗಿಸಿಟ್ಟುಕೊಳ್ಳಬಹುದು. ಹಾಗಿದ್ದರೆ ಇನ್ನೆರಡು ವರ್ಷದಲ್ಲಿ ಇದಕ್ಕಿಂತಲೂ ಹೆಚ್ಚಿನ ಸಾಮರ್ಥ್ಯದ ಸಾಧನ ಸಿಗಬಹುದೇ? ಬಹುಶಃ ಚೀನಾದ ನ್ಯಾಶನಲ್ ನ್ಯಾಚುರಲ್ ಸೈನ್ಸ್ ಫೌಂಡೇಶನ್ ಸಂಸ್ಥೆಯ ವಿಜ್ಞಾನಿ ಪೆಂಗ್‌ಫೆಂಗ್ ಶಿಯಾವು ಮತ್ತು ಸಂಗಡಿಗರ ಸಾಧನೆ ಫಲ ಕೊಟ್ಟಿತಾದರೆ, ಗುಳಿಗೆಯೊಳಗೇ ಸೂಪರ್ ಕಂಪ್ಯೂಟರಿನಲ್ಲಿ ಇರುವಷ್ಟು ಮಾಹಿತಿಯನ್ನು ಸಂಗ್ರಹಿಸಬಹುದು. ಶಿಯಾವು ಮತ್ತವರ ತಂಡ ಅಗಾಧ ಮಾಹಿತಿಯನ್ನು ಡಿಎನ್‌ಎ ರೂಪದಲ್ಲಿ ಗುಳಿಗೆಯೊಂದರಲ್ಲಿ ಅಡಗಿಸಿ ಇಡಬಹುದಾದ ತಂತ್ರವನ್ನು ರೂಪಿಸಿದ್ದಾರೆ. 'ಹೈಡ್ರೋಜೆಲ್ ಡಿಎನ್‌ಎ' ಎನ್ನುವ ಇದು ಇಂದು ನಾವು ಕೂಡಿಡುತ್ತಿರುವ ಮಾಹಿತಿಯನ್ನು ಕೋಟಿ ಪಟ್ಟು ಪುಟ್ಟದಾದ ವಸ್ತುವಿನಲ್ಲಿ ಹುದುಗಿಸಿ ಇಡಲು ನೆರವಾಗುತ್ತದಂತೆ.

ಡಿಎನ್‌ಎ ಜೈವಿಕ ವಸ್ತುವಲ್ಲವೇ? ಅದಕ್ಕೂ ಗಣಕಯಂತ್ರ, ಅರ್ಥಾತ್ ಕಂಪ್ಯೂಟರಿಗೂ ಸಂಬಂಧವೇನು ಎಂದಿರಾ? ಗಣಕಯಂತ್ರವೆಂದರೆ ಮಾಹಿತಿಯ ಭಂಡಾರ. 'ಬೈಟ್' ಎನ್ನುವ ಅಳತೆಯಲ್ಲಿ ಹೇಳುವುದಾದರೆ, ಒಂದು 'ಗಿಗಾಬೈಟು' ಅಥವಾ ಒಂದು 'ಜೀಬಿ', ಸುಮಾರು ನೂರುಕೋಟಿ ಮಾಹಿತಿಯ ಅಂಶಗಳಿಗೆ ಸಮ. ನಮ್ಮಲ್ಲಿ ಇದೀಗ ಇರುವ ಯಾವುದೇ ಸಾಧನದಲ್ಲಿಯೂ ನೂರು ಜೀಬಿ ಮಾಹಿತಿಯನ್ನು ಸಂಗ್ರಹಿಸಲು ಏನಿಲ್ಲವೆಂದರೂ ಒಂದು ಗ್ರಾಂ ವಸ್ತು ಅಗತ್ಯ. ಈ ಒಂದು ಗ್ರಾಂ ವಸ್ತು, ಸಿಲಿಕಾನ್, ಚಿನ್ನ, ಗ್ಯಾಡೋಲಿನಿಯಂ ಮೊದಲಾದ ವಸ್ತುಗಳಿಂದ ರಚಿಸಿದ ಅತಿ ಸೂಕ್ಷ್ಮವಾದ ವಿದ್ಯುತ್ ಸರ್ಕೀಟುಗಳ ರೂಪದಲ್ಲಿ ಮಾಹಿತಿಯನ್ನು ಸಂಗ್ರಹಿಸುತ್ತದೆ. ಇದನ್ನೇ ನಾವು 'ಚಿಪ್' ಎನ್ನುತ್ತೇವೆ. ಫೋನು ಕೆಲಸ ಮಾಡಲು ಬಳಸುವ ಸಿಮ್ ಅಥವಾ ಅದರಲ್ಲಿ ಫೋಟೋ, ಹಾಡುಗಳನ್ನು ಸಂಗ್ರಹಿಸಿ ಇಡುವ 'ಡೇಟಕಾರ್ಡು' ಇಂತಹ ಚಿಪ್‌ಗಳೇ. ಒಂದು ಗ್ರಾಂ ವಸ್ತುವಿನಲ್ಲಿ ಇನ್ನೂ ಹೆಚ್ಚು ಮಾಹಿತಿ ಸಂಗ್ರಹಿಸುವುದು ಸಾಧ್ಯವಾದರೆ, ಪುಟ್ಟದಾದ ಇನ್ನೂ ಹೆಚ್ಚು ಸಮರ್ಥವಾದ ಸಾಧನಗಳನ್ನು ರೂಪಿಸಬಹುದು ಎನ್ನುವುದು ಎಂಜಿನಿಯರುಗಳ ಕನಸು.

ಆದರೆ ಸಿಲಿಕಾನು, ಚಿನ್ನ ಮೊದಲಾದ ಲೋಹದ ವಸ್ತುಗಳ ಸರ್ಕೀಟಿಗೆ ಒಂದು ಮಿತಿ ಇದೆ. ಅದನ್ನು ನಾವು ಈಗಾಗಲೇ ತಲುಪಿಯಾಗಿದೆಯಾಗಿ, ಇನ್ನೂ ದಟ್ಟವಾಗಿ ಮಾಹಿತಿಯನ್ನು ಸಂಗ್ರಹಿಸಬೇಕೆಂದರೆ ಬೇರೊಂದು ವಸ್ತು ಇಲ್ಲವೇ ಮಾರ್ಗ ಬೇಕಾಗುತ್ತದೆ. ನಮ್ಮ ಜೀವಕೋಶಗಳಲ್ಲಿ ಇರುವ ಡಿಎನ್‌ಎ ಇಂತಹುದೊಂದು ವಸ್ತು ಎನ್ನುವುದು ತಂತ್ರಜ್ಞರ ಅನಿಸಿಕೆ. ಎಂಟುನೂರು ಕೋಟಿ ಜನರಲ್ಲಿನ ಎಲ್ಲ ಬಗೆಯ ಗುಣಾವಗುಣಗಳ ಒಂದು ಪುಟ್ಟ ಜೀವಕೋಶದೊಳಗೆ ಇರುವ ಡಿಎನ್‌ಎಯಲ್ಲಿ ಸಂಗ್ರಹವಾಗಿರುತ್ತದೆಯಷ್ಟೆ. ಇಂತಹ ಡಿಎನ್‌ಎಯನ್ನು ನಮಗೆ ಬೇಕಿರುವ ಫೋಟೋ, ಚಿತ್ರ, ಹಾಡು, ವಿಡಿಯೊ ಅಥವಾ ಜನಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸಿ ಇಡುವಂತೆ ಮಾಡಬಾರದೇಕೆ?


ಇದು ಹುಚ್ಚು ಕನಸು ಎನ್ನಬೇಡಿ. ಡಿಎನ್‌ಎಯಲ್ಲಿ ನಾಲ್ಕೇ ನಾಲ್ಕು ರಾಸಾಯನಿಕಗಳಿವೆ. ಇವನ್ನು ಜೋಡಿಸುವ ರೀತಿಯಲ್ಲಿಯೇ ಮಾಹಿತಿಯನ್ನು ಸೇರಿಸಬಹುದು. ಹಾಗೆ ಮಾಡುವುದು ಸಾಧ್ಯವಾದರೆ ಒಂದು ಗ್ರಾಂ ಡಿಎನ್‌ಎಯಲ್ಲಿ ಸಾವಿರ ಜೀಬಿ ಅಲ್ಲ, ಕೋಟಿ, ಕೋಟಿ ಜೀಬಿಗಳಷ್ಟು ಮಾಹಿತಿಯನ್ನು ಸಂಗ್ರಹಿಸಬಹುದು. ಇಷ್ಟು ಮಾಹಿತಿಯನ್ನು ಕೇವಲ ದೊಡ್ಡ ಕೋಣೆಗಳೊಳಗೆ ಇಟ್ಟ ಸೂಪರ್ ಕಂಪ್ಯೂಟರುಗಳಷ್ಟೆ ಈಗ ಸಂಗ್ರಹಿಸಿ ಇಡುತ್ತಿವೆ. ಇದು ಸಾಧ್ಯವಾದರೆ, ಅಂಗೈಯಲ್ಲಿಯೇ ಇಡೀ ಗೂಗಲ್ ಪ್ರಪಂಚವನ್ನು ಇಟ್ಟುಕೊಂಡಂತೆ.

ಡಿಎನ್‌ಎಯಲ್ಲಿ ಮಾಹಿತಿ ಹಾಕಿಡುವುದಕ್ಕೆ ಹಲವು ಅಡ್ಡಿಗಳಿವೆ. ಮೊದಲನೆಯದಾಗಿ ಅದನ್ನು ಸಂಗ್ರಹಿಸುವ ವಿಧಾನ. ಒಂದೋ ಡಿಎನ್‌ಎಯನ್ನು ಇನ್ಯಾವುದಾದರೂ ವಸ್ತುವಿಗೆ ಅಂಟಿಸಿ ಇಡಬೇಕು. ಇಲ್ಲವೇ ಅದನ್ನು ಇನ್ಯಾವುದಾದರೂ ವಸ್ತುವಿನೊಳಗೆ ಹುದುಗಿಸಿ ಇಡಬೇಕು. ಇದು ಸಾಧ್ಯ. ಆದರೆ ಹಾಗೆ ಅಂಟಿಸುವ ಹಾಗೂ ತದನಂತರ ಅದನ್ನು ಅಂಟಿಸಿದಲ್ಲಿಂದ ಕೀಳುವುದು ಸುಲಭ, ಹಾಗೂ ಸರಳವಾಗಿರಬೇಕು. ಇದೀಗ ಇರುವ ತಂತ್ರಗಳು ಅಷ್ಟು ಸರಳವಲ್ಲ. ಜೊತೆಗೆ ಹೀಗೆ ಅಂಟಿಸಿ ಇಟ್ಟಾಗ, ಡಿಎನ್‌ಎ ಜೊತೆಗೆ ಬೇರೆ ಕಲ್ಮಶಗಳೂ ಸೇರಿಕೊಂಡು, ಮಾಹಿತಿ ಕರಪ್ಟ್ ಆಗಬಹುದು.

ಡಿಎನ್‌ಎಯನ್ನು ಇನ್ಯಾವುದಾದರೂ ವಸ್ತುವಿನೊಳಗೆ ತುಂಬಿ ಬಳಸೋಣವೆಂದರೆ, ತುಂಬುವ ಹಾಗೂ ವಸ್ತುವಿನಿಂದ ಹೊರಗೆ ತೆಗೆಯುವ ಕ್ರಿಯೆಯೇ ಬಲು ನಾಜೂಕಾಗಿ ಬಿಡುತ್ತದೆ. ಈ ಕ್ರಿಯೆಗಳು ಜಟಿಲವಾದಷ್ಟೂ, ಮಾಹಿತಿಯನ್ನು ಹೆಕ್ಕುವುದು ಕಷ್ಟ. ಶಿಯಾವು ತಂಡ ಮಾಡಿರುವುದು ಇದನ್ನೇ. ಡಿಎನ್‌ಎಯನ್ನು ಸರಳವಾಗಿ ತುಂಬಿ, ಹೊರಗೆಡವುವ ತಂತ್ರವೊಂದನ್ನು ಅವರು ರೂಪಿಸಿದ್ದಾರೆ. ಇದಕ್ಕಾಗಿ ಜೆಲ್ಲಿಯಂತಹ ವಸ್ತುವನ್ನು ರೂಪಿಸಿದ್ದಾರೆ. ಇದೊಂದು ಜಲಾಕರ್ಷಿ ಅಂದರೆ ನೀರನ್ನು ಹಿಡಿದಿಟ್ಟುಕೊಳ್ಳಬಲ್ಲ ಜೆಲ್ಲಿ. 'ಎನ್-ಐಸೊಪ್ರೊಪೈಲ್‌ಅಕ್ರಿಲಾಮೈಡು' ಎನ್ನುವ ವಸ್ತುವಿನ ಪಾಲಿಮರು. ಇದರ ಅಣುಗಳು ಒಂದಿನ್ನೊಂದರ ಜೊತೆಗೆ ಜೋಡಿಸಿಕೊಳ್ಳುವಾಗ ಸಹಜವಾಗಿಯೇ ಅಡ್ಡಡ್ಡಲಾಗಿಯೂ ಜೋಡಿಸಿಕೊಂಡು ರಂಧ್ರಮಯವಾದ ವಸ್ತುವಾಗುತ್ತವೆ. ಈ ರಂಧ್ರಗಳೊಳಗೆ ನೀರನ್ನು ಹಿಡಿದಿಡಬಹುದು. ಇಂತಹ ಜಲಾಕರ್ಷಿ ವಸ್ತುಗಳನ್ನು ಈಗ ಒಳಾಂಗಣ ಗಿಡಗಳನ್ನು ಬೆಳೆಸುವ ಮಣ್ಣಿನಲ್ಲಿ ಸೇರಿಸುವುದುಂಟು. ತನ್ನ ತೂಕದ ಹಲವು ಪಟ್ಟು ಹೆಚ್ಚು ನೀರನ್ನು ಇವು ಹೀರಿಟ್ಟುಕೊಳ್ಳಬಲ್ಲವು.

ಶಿಯಾವು ತಂಡ ತಯಾರಿಸಿದ ಇಂತಹುದೊಂದು ಪಾಲಿಮರು ಉಷ್ಣಸಂವೇದಿ. ಅಂದರೆ 32 ಡಿಗ್ರಿ ಸೆಲ್ಸಿಯಸಿಗಿಂತ ಕಡಿಮೆ ಉಷ್ಣತೆಯಲ್ಲಿ ಅದು ನೀರನ್ನು ಹೀರಿಟ್ಟುಕೊಳ್ಳುತ್ತದೆ. ಸ್ವಲ್ಪ ಬಿಸಿ ಮಾಡಿದರೆ, ನೀರನ್ನೆಲ್ಲ ಬಿಟ್ಟು ಕೊಟ್ಟು ಒಣಗುತ್ತದೆ. ಇಂತಹ ಜೆಲ್ಲಿಯೊಳಗೆ ನೀರನ್ನಲ್ಲದೆ ಬೇರೆ, ಧನ ವಿದ್ಯುದಾವೇಶವಿರುವ ವಸ್ತುಗಳನ್ನೂ ಹಿಡಿದಿಟ್ಟುಕೊಳ್ಳುವುದು ಸಾಧ್ಯವಾಗುವಂತೆ ಋಣವಿದ್ಯುದಂಶವಿರುವ ಪಾಲಿಇಥಿಲೀನ್ ಇಮೈನ್ ಎನ್ನುವ ವಸ್ತುವನ್ನು ಶಿಯಾವು ತಂಡ ಕೂಡಿಸಿತು. ಇದೂ ಒಂದು ಪಾಲಿಮರು ದ್ರಾವಣವೇ. ಆದರೆ ಇದಕ್ಕೆ ಡಿಎನ್‌ಎ ಅಣುಗಳು ಸುಲಭವಾಗಿ ಅಂಟಿಕೊಳ್ಳುತ್ತವೆ. ಈ ಬಗೆಯ ಜೆಲ್ಲಿಯನ್ನು ಡಿಎನ್‌ಎ ವಿಲೀನವಾಗಿರುವ ದ್ರಾವಣದೊಳಗೆ ಅದ್ದಿದರೆ ಸಾಕು. ಅದು ಈ ಡಿಎನ್‌ಎಯನ್ನು ಹೀರಿಕೊಳ್ಳುತ್ತದೆ. ನೀರನ್ನು ಹೀರಿಕೊಂಡಂತೆ, ಡಿಎನ್‌ಎಯನ್ನೂ ಮೈಗೂಡಿಸಿಕೊಂಡು ಬಿಡುತ್ತದೆ.

ಹೀಗೊಂದು ವಸ್ತುವನ್ನು ತಯಾರಿಸಿ, ಅದೆಷ್ಟು ಡಿಎನ್‌ಎಯನ್ನು ಹಿಡಿದಿಟ್ಟುಕೊಳ್ಳಬಹುದು ಎಂದು ಇವರು ಪರಿಶೀಲಿಸಿ, ಲೆಕ್ಕ ಹಾಕಿದ್ದಾರೆ. ಪ್ರತಿ ಗ್ರಾಂ ಜೆಲ್ಲಿಯಲ್ಲಿ ಏನಿಲ್ಲವೆಂದರೂ ಏಳುನೂರು ಕೋಟಿ ಜೀಬಿಯಷ್ಟು ಮಾಹಿತಿಯನ್ನು ಸಂಗ್ರಹಿಸಬಹುದು. ಬಿಸಿ ಮಾಡಿ, ತಣಿಸಿ ಬೇಕಿದ್ದಾಗ ಮಾಹಿತಿಯನ್ನು ಸಂಗ್ರಹಿಸಿ, ಹೊರತೆಗೆಯಬಹುದು. ಹೀಗೆ ಹಲವಾರು ಬಾರಿ ಮಾಡಬಹುದಂತೆ. ಡಿಎನ್‌ಎ ಗಣಕಯಂತ್ರವನ್ನು ದೊರಕಿಸುವತ್ತ ಈ ಗುಳಿಗೆಯೊಂದು ಮಹತ್ವದ ಹೆಜ್ಜೆ ಎನ್ನುತ್ತದೆ ಈ ವರದಿಯನ್ನು ಪ್ರಕಟಿಸಿದ ಪಿಎನ್‌ಎಎಸ್ ಪತ್ರಿಕೆ.



ವಾಟ್ಸ್ ಆ್ಯಪ್ ಸಂದೇಶಕ್ಕೆ 'ಎಡಿಟ್' ಅವಕಾಶ

ವಾಟ್ಸ್‌ಆ್ಯಪ್ ಬಳಕೆದಾರರು ಇನ್ನು ಮುಂದೆ ತಾವು ಕಳುಹಿಸಿದ ಸಂದೇಶಗಳನ್ನು 'ಎಡಿಟ್' (ತಿದ್ದುವಿಕೆ) ಮಾಡಬಹುದು.

ಈ ವಿಷಯವನ್ನು ವಾಟ್ಸ್‌ಆ್ಯಪ್‌ಇತ್ತೀಚೆಗಷ್ಟೆ ಘೋಷಿಸಿದೆ.

'ಕಾಗುಣಿತ ತಪ್ಪು ಸರಿಪಡಿಸುವುದರಿಂದ ಹಿಡಿದು, ಸಂದೇಶಕ್ಕೆ ಹೆಚ್ಚುವರಿಯಾಗಿ ಮತ್ತಷ್ಟು ವಿಷಯ ಸೇರಿಸುವವರೆಗೆ ನಿಮ್ಮ ಚಾಟ್‌ಗಳ ಮೇಲೆ ನಿಮಗೆ ಹೆಚ್ಚಿನ ನಿಯಂತ್ರಣ ನೀಡಲು ನಾವು ಉತ್ಸುಕರಾಗಿದ್ದೇವೆ. ನೀವು ಮಾಡಬೇಕಾಗಿರುವುದು ಇಷ್ಟೇ. ಕಳುಹಿಸಿದ ಸಂದೇಶವನ್ನು ಲಾಂಗ್‌ಪ್ರೆಸ್ ಮಾಡಿದರೆ, ಅಲ್ಲಿ ನಿಮಗೆ 'ಎಡಿಟ್' ಆಯ್ಕೆ ಕಾಣುತ್ತದೆ. 'ಎಡಿಟ್' ಮೇಲೆ ಟ್ಯಾಪ್ ಮಾಡಿ ನೀವು ನಿಮ್ಮ ಸಂದೇಶವನ್ನು ತಿದ್ದಬಹುದು. ಆದರೆ, ಸಂದೇಶ ಕಳುಹಿಸಿದ 15 ನಿಮಿಷಗಳ ವರೆಗೆ ಮಾತ್ರ ನಿಮಗೆ ಈ ಅವಕಾಶ ಇರಲಿದೆ' ಎಂದು ವಾಟ್ಸ್‌ಆ್ಯಪ್ ತಿಳಿಸಿದೆ.

ತಿದ್ದಲಾದ ಸಂದೇಶಗಳ ಪಕ್ಕದಲ್ಲೇ 'ಎಡಿಟೆಡ್' ಎಂದು ತೋರಿಸುತ್ತಿರುತ್ತದೆ. ಹೀಗಾಗಿ ಸಂದೇಶ ಸ್ವೀಕರಿಸಿದವರಿಗೆ ಇದು ತಿದ್ದುಪಡಿಯಾದ ಸಂದೇಶ ಎಂಬುದು ಗೊತ್ತಾಗುತ್ತದೆ. ಆದರೆ, 'ಎಡಿಟ್ ಹಿಸ್ಟ್ರಿ' ಗೊತ್ತಾಗುವುದಿಲ್ಲ ಎಂದು ಮೆಸೇಜಿಂಗ್ ಆ್ಯಪ್ ತಿಳಿಸಿದೆ.

ಈ ವಿಶೇಷತೆ ಜಾಗತಿಕವಾಗಿ ಮುಂಬರುವ ವಾರಗಳಲ್ಲಿ ಎಲ್ಲರಿಗೂ ಲಭ್ಯವಾಗಲಿದೆ ಎಂದು ವಾಟ್ಸ್‌ಆ್ಯಪ್ ತಿಳಿಸಿದೆ.



ಆರೋಗ್ಯ ವ್ಯವಸ್ಥೆ 3 ತಿಂಗಳಲ್ಲಿ ಸುಧಾರಣೆಯಾಗಬೇಕು; ಸಿ.ಎಂ ಗಡುವು

‘ಸರ್ಕಾರಿ ಆಸ್ಪತ್ರೆ–ಅಧಿಕಾರಿಗಳೇ ಹೊಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಮತ್ತು ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಬೇಕು. ತಜ್ಞ ವೈದ್ಯರು ಮತ್ತು ತಂತ್ರಜ್ಞರನ್ನು ನೇಮಕ ಮಾಡಬೇಕು’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತಿಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮತ್ತು ಆರೋಗ್ಯ ಸೇವೆಯ ಲಭ್ಯತೆ ಕುರಿತು ಮುಖ್ಯಮಂತ್ರಿ ಮಂಗಳವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

‘ಸರ್ಕಾರಿ ಆಸ್ಪತ್ರೆಗಳಲ್ಲಿನ ವ್ಯವಸ್ಥೆ ಮೂರು ತಿಂಗಳಲ್ಲಿ ಸುಧಾರಣೆ ಆಗಬೇಕು. ಮೂರು ತಿಂಗಳಲ್ಲಿ ಮತ್ತೊಮ್ಮೆ ಪರಿಶೀಲಿಸುತ್ತೇನೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಅಧಿಕಾರಿಗಳೇ ಹೊಣೆ’ ಎಂದು ಎಚ್ಚರಿಕೆ ನೀಡಿದರು.

‘ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆಯಡಿ ತಜ್ಞ ವೈದ್ಯರು, ಎಂಬಿಬಿಎಸ್ ವೈದ್ಯರು ಮತ್ತು ನರ್ಸ್ ಸೇರಿದಂತೆ ಇತರ ಸಿಬ್ಬಂದಿಯ ಭರ್ತಿಗೆ ಕ್ರಮ ಕೈಗೊಳ್ಳಬೇಕು. ವೇತನ ಹೆಚ್ಚಿಸುವ ಬಗ್ಗೆ ಪರಿಶೀಲಿಸಬೇಕು. ವೈದ್ಯಕೀಯ ಉಪಕರಣಗಳ ಖರೀದಿ ವ್ಯವಸ್ಥೆ ಉತ್ತಮಪಡಿಸಬೇಕು. ಔಷಧ ಮತ್ತು ವೈದ್ಯಕೀಯ ಉಪಕರಣಗಳನ್ನು ಪೂರೈಸುವ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಒಂದು ವರ್ಷದಲ್ಲಿ ಐದು ಬಾರಿ ಬದಲಾವಣೆ ಮಾಡಲಾಗಿದೆ. ಇದರಿಂದ ಸಮಸ್ಯೆಯಾಗಿದೆ. ವ್ಯವಸ್ಥಾಪಕ ನಿರ್ದೇಶಕರು ಕನಿಷ್ಠ ಎರಡು ವರ್ಷ ಕರ್ತವ್ಯ ಸಲ್ಲಿಸಬೇಕು’ ಎಂದು ಸೂಚಿಸಿದರು.

‘ಗ್ರಾಮೀಣ ಪ್ರದೇಶದಲ್ಲಿ ವೈದ್ಯರಿಗೆ ಕಟ್ಟಿಸಿರುವ ವಸತಿಗೃಹದಲ್ಲಿ ಯಾವ ವೈದ್ಯರೂ ಉಳಿದುಕೊಳ್ಳುತ್ತಿಲ್ಲ. ಈ ಲೋಪ ಸರಿಪಡಿಸಬೇಕು’ ಎಂದು ಆಯುಕ್ತರಿಗೆ ಮುಖ್ಯಮಂತ್ರಿ ಸೂಚಿಸಿದರು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಾರ್ಯಕ್ಷಮತೆ ಹೆಚ್ಚಿಸಲು ಸಲಹೆ ನೀಡಿದ ಮುಖ್ಯಮಂತ್ರಿ, ತಮಿಳುನಾಡು ಮತ್ತು ರಾಜಸ್ಥಾನದಲ್ಲಿ ಜಾರಿಯಲ್ಲಿರುವ ಆರೋಗ್ಯ ವಿಮೆ ಮಾದರಿಯನ್ನು ಅಧ್ಯಯನ ಮಾಡಿ ವರದಿ ಕೊಡಬೇಕು ಎಂದೂ ತಿಳಿಸಿದರು.

ಔಷಧ ಖರೀದಿ ಪ್ರಕ್ರಿಯೆ ನಿರಂತರವಾಗಿ ನಡೆಯಲು ಅನುವಾಗುವಂತೆ ಎರಡು ವರ್ಷಕ್ಕೊಮ್ಮೆ ಟೆಂಡರ್ ಕರೆಯಲು ಇಲಾಖೆಯು ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಬೇಕು ಎಂದೂ ಸೂಚಿಸಿದರು.

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್‌ಕುಮಾರ್, ಆರ್ಥಿಕ ಇಲಾಖೆ ಕಾರ್ಯದರ್ಶಿ ಪಿ.ಸಿ. ಜಾಫರ್, ಮುಖ್ಯಮಂತ್ರಿಯವರ ಕಾರ್ಯದರ್ಶಿ ಎನ್. ಜಯರಾಂ ಸಭೆಯಲ್ಲಿದ್ದರು.


ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ, ಆಹಾರ ಸಚಿವ ದಿನೇಶ್ ಗುಂಡೂರಾವ್ ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಗಳಾದ ಕೆ. ಗೋವಿಂದರಾಜ್, ನಜೀರ್ ಅಹ್ಮದ್ ಸಭೆಯಲ್ಲಿದ್ದರು

ಆರೋಗ್ಯ ಮಿಷನ್ ಸ್ಥಿತಿಗತಿ

- **52%** ತಜ್ಞ ವೈದ್ಯರ ಕೊರತೆ
- **31%** ಎಂಬಿಬಿಎಸ್ ವೈದ್ಯರ ಕೊರತೆ
- **18%** ನರ್ಸ್, ಸಿಬ್ಬಂದಿ ಕೊರತೆ

ತಾಯಿಯನ್ನು ಕೊಂದು ಪೊಲೀಸ್ ಠಾಣೆಗೆ ಸೂಟ್‌ಕೇಸ್‌ನಲ್ಲಿ ಮೃತದೇಹ ತಂದ ಮಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ 70 ವರ್ಷದ ತಾಯಿಯನ್ನು ಉಸಿರುಗಟ್ಟಿಸಿ ಕೊಂದಿರುವ ಮಗಳು, ಮೃತದೇಹವನ್ನು ಸೂಟ್‌ಕೇಸ್‌ನಲ್ಲಿ ತುಂಬಿಕೊಂಡು ಬಂದು ಪೊಲೀಸರಿಗೆ ಶರಣಾಗಿರುವ ಘಟನೆ ನಗರದ ಮೈಕೊ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

‘ಕೋಡಿಚಿಕ್ಕಹಳ್ಳಿ ಮುಖ್ಯರಸ್ತೆಯ ಬಿಳೇಕಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ನೆಲೆಸಿದ್ದ ಸೋನಾಲಿ ಸೇನ್ (39), ತಮ್ಮ ತಾಯಿ ಬೀವಾಪಾಲ್ (70) ಅವರನ್ನು ಸೋಮವಾರ ಕೊಲೆ ಮಾಡಿ ಮೃತದೇಹ ಸಮೇತ ಠಾಣೆಗೆ ಬಂದು ಶರಣಾಗಿದ್ದಾರೆ.

ಸೋನಾಲಿ ಅವರನ್ನು ಬಂಧಿಸಿ, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಗಂಡನ ಮನೆಗೆ ತಾಯಿ ಕರೆತಂದು ಆರೈಕೆ: ‘ಪಶ್ಚಿಮ ಬಂಗಾಳದ ಸೋನಾಲಿ, ಫಿಸಿಯೋಥೆರಪಿಸ್ಟ್ ಆಗಿದ್ದರು. ಬೆಂಗಳೂರಿನ ಜಿಗಣಿ ಬಳಿಯ ಎಲೆಕ್ಟ್ರಿಕ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿರುವ ಸೇನ್ ಜತೆ ಸೋನಾಲಿ ವಿವಾಹವಾಗಿತ್ತು. ಪತಿ, ಅತ್ತೆ ಜೊತೆ ಸೋನಾಲಿ ವಾಸವಿದ್ದರು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಪತಿ ಮನೆಯಲ್ಲಿದ್ದ ಸೋನಾಲಿ, ಕೆಲಸಕ್ಕೆ ಹೋಗುತ್ತಿರಲಿಲ್ಲ. ಆದಾಯ ತೆರಿಗೆ ಇಲಾಖೆಯಲ್ಲಿ ಕ್ಲರ್ಕ್ ಆಗಿದ್ದ ತಂದೆ ಐದು ವರ್ಷಗಳ ಹಿಂದೆಯಷ್ಟೇ ತೀರಿಕೊಂಡಿದ್ದರು. ಹೀಗಾಗಿ, ತಾಯಿ ಬೀವಾಪಾಲ್ ಒಂಟಿಯಾಗಿದ್ದರು. ಸೋನಾಲಿ ಒಬ್ಬರೇ ಮಗಳು. ಹೀಗಾಗಿ, ತಾಯಿಯನ್ನು ನಗರಕ್ಕೆ ಕರೆತಂದು ತಮ್ಮ ಜೊತೆಗೆ ಇಟ್ಟುಕೊಂಡು ಆರೈಕೆ ಮಾಡಲಾರಂಭಿಸಿದ್ದರು’ ಎಂದು ತಿಳಿಸಿದರು.

ತಾಯಿ–ಅತ್ತೆ ಜಗಳ: ‘ಸೋನಾಲಿ ಹಾಗೂ ಸೇನ್ ದಂಪತಿ ಅನ್ಯೋನ್ಯವಾಗಿದ್ದರು. ಆದರೆ, ಸೋನಾಲಿ ತಾಯಿ ಬೀವಾ ಪಾಲ್ ಹಾಗೂ ಸೇನ್ ತಾಯಿ ನಡುವೆ ಜಗಳ ಶುರುವಾಗಿತ್ತು. ನಿತ್ಯವೂ ಇಬ್ಬರೂ ಪರಸ್ಪರ ನಿಂದಿಸುತ್ತಿದ್ದರು. ಇದರಿಂದ ಮನೆಯಲ್ಲಿ ನೆಮ್ಮದಿ ಹಾಳಾಗಿತ್ತು’ ಎಂದು ಪೊಲೀಸರು ಹೇಳಿದರು.

ನಿದ್ರೆ ಮಾತ್ರೆ ನೀಡಿ ಕೊಲೆ: ‘ತಾಯಿ–ಅತ್ತೆ ನಡುವೆಯೂ ಸೋಮವಾರ ಜಗಳ ಶುರುವಾಗಿತ್ತು. ಸಿಟ್ಟಾಗಿದ್ದ ಸೋನಾಲಿ, ತಮ್ಮ ತಾಯಿಗೆ ಬೈದಿದ್ದರು. ಆದರೆ, ತಾಯಿ ಸುಮ್ಮನಾಗಿರಲಿಲ್ಲ. ಕೋಪಗೊಂಡಿದ್ದ ಸೋನಾಲಿ, ತಾಯಿಗೆ 20 ನಿದ್ರೆ ಮಾತ್ರೆಗಳನ್ನು ನೀಡಿ ಒತ್ತಾಯದಿಂದ ನುಂಗಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಹೊಟ್ಟೆಯಲ್ಲಿ ಸಂಕಟವಾಗಿ ತಾಯಿ ನರಳುತ್ತಿದ್ದರು. ತಾಯಿಯ ಕುತ್ತಿಗೆಗೆ ವೇಲ್ ಬಿಗಿದಿದ್ದ ಮಗಳು, ಉಸಿರುಗಟ್ಟಿಸಿ ಕೊಂದಿದ್ದರು. ನಂತರ, ತಾಯಿಯ ಮೃತದೇಹವನ್ನು ಟ್ರಾಲಿ ಸೂಟ್‌ಕೇಸ್‌ನಲ್ಲಿ ತುಂಬಿದ್ದರು. ಮೃತದೇಹ ಪಕ್ಕವೇ ತಂದೆಯ ಫೋಟೊ ಸಹ ಇರಿಸಿದ್ದರು. ಸೂಟ್‌ಕೇಸ್ ಸಮೇತ ಮನೆಯಿಂದ ಹೊರಬಂದು ಕ್ಯಾಬ್‌ನಲ್ಲಿ ಮಧ್ಯಾಹ್ನ 1 ಗಂಟೆಗೆ ಮೈಕೊ ಲೇಔಟ್ ಠಾಣೆಗೆ ಬಂದಿದ್ದರು’ ಎಂದರು.

‘ಸೂಟ್‌ಕೇಸ್ ಕಂಡು ಅನುಮಾನಗೊಂಡ ಸಿಬ್ಬಂದಿ, ಸೋನಾಲಿ ಅವರನ್ನು ವಿಚಾರಿಸಿದ್ದರು. ‘ನನ್ನ ತಾಯಿಯನ್ನು ಕೊಂದು ಸೂಟ್‌ಕೇಸ್‌ನಲ್ಲಿ ಮೃತದೇಹ ತಂದಿದ್ದೇನೆ. ನನ್ನನ್ನು ಬಂಧಿಸಿ ಜೈಲಿಗೆ ಕಳುಹಿಸಿ’ ಎಂದು ಸೋನಾಲಿ ಹೇಳಿದ್ದರು. ಸೂಟ್‌ಕೇಸ್ ತೆಗೆಯುತ್ತಿದ್ದಂತೆ ಮೃತದೇಹ ನೋಡಿ ಸಿಬ್ಬಂದಿ ಸಹ ದಂಗಾದರು. ಬಳಿಕ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ತಂದೆ ಬಳಿ ತಾಯಿ ಕಳುಹಿಸಿದ್ದೇನೆ’

‘ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ತಾಯಿಯ ಯಾತನೆ ನನ್ನಿಂದ ನೋಡಲು ಆಗುತ್ತಿರಲಿಲ್ಲ. ನಾನು ನಿಮ್ಮ ತಂದೆಯ ಬಳಿ ಹೋಗಬೇಕು. ಆತ್ಮಹತ್ಯೆ ಮಾಡಿಕೊಳ್ಳುವ ಶಕ್ತಿ ನನಗಿಲ್ಲ. ನೀನೇ ನನ್ನನ್ನು ಸಾಯಿಸಿ ತಂದೆ ಬಳಿ ಕಳುಹಿಸು’ ಎಂದು ತಾಯಿ ಹೇಳಿದ್ದರು. ಹೀಗಾಗಿ, ನಾನು ಅವರಿಗೆ ನಿದ್ರೆ ಮಾತ್ರೆ ಕೊಟ್ಟಿದ್ದೆ. ಬಳಿಕ, ಸಂಕಟದಿಂದ ನರಳುತ್ತಿದ್ದರು. ಆಗ ವೇಲ್‌ನಿಂದ ಕುತ್ತಿಗೆ ಬಿಗಿದು ಕೊಂದೆ’ ಎಂದು ಸೋನಾಲಿ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

‘ತಾಯಿಯನ್ನು ತಂದೆ ಕಡೆ ಕಳುಹಿಸಿದ್ದೇನೆ. ಈಗ ನೀವು (ಪೊಲೀಸರು) ನನ್ನನ್ನು ಜೈಲಿಗೆ ಕಳುಹಿಸಿ’ ಎಂದು ಅವರು ಹೇಳಿದ್ದಾರೆ.


ಸೋನಾಲಿ ಸೇನ್

‘ಸಾಲ ಕಟ್ಟಲ್ಲ, ಏನ್ಮಾಡ್ತೀರೋ ಮಾಡ್ಕೊಳ್ಳಿ’

ಸಾಲ ವಸೂಲಿಗೆಂದು ಬರುವವರಿಗೆ ಗ್ರಾಮಕ್ಕೆ ಪ್ರವೇಶ ಇಲ್ಲ; ಸ್ತ್ರೀಶಕ್ತಿ ಸವಾಲು

ಪ್ರಜಾವಾಣಿ ವಾರ್ತೆ

ಕೋಲಾರ: ‘ನಾವು ಸಾಲ ಕಟ್ಟಲ್ಲ ಅಂದರೆ ಕಟ್ಟಲ್ಲ. ಏಕೆ ಅವತ್ತು ನೀವು ಸಾಲ ಮನ್ನಾ ಮಾಡುವುದಾಗಿ ಹೇಳಿದಿರಿ? ಮುಖ್ಯಮಂತ್ರಿಗಳೇ ನಿಮ್ಮ ಮಾತು ಉಳಿಸಿಕೊಳ್ಳಿ. ಸಾಲ ಮರುಪಾವತಿ ಮಾಡಿಸಿಕೊಳ್ಳಲು ಬರುವವರಿಗೆ ಗ್ರಾಮಕ್ಕೆ ಪ್ರವೇಶವಿಲ್ಲ’

ತಾಲ್ಲೂಕಿನ ಸುಗಟೂರು ಹೋಬಳಿಯ ಹೊಸಮಟ್ನಹಳ್ಳಿ ಹಾಗೂ ಮಂಗಸಂದ್ರ ಗ್ರಾಮದಲ್ಲಿ ಸಾಲ ಪಾವತಿಸುವುದಿಲ್ಲವೆಂದು ಸ್ತ್ರೀಶಕ್ತಿ ಸಂಘದ ಸದಸ್ಯರು ರೈತ ಸಂಘದ ನೇತೃತ್ವದಲ್ಲಿ ಮಂಗಳವಾರ ಬ್ಯಾನರ್ ಕಟ್ಟಿ ಪ್ರತಿಭಟನೆ ನಡೆಸಿದರು. ಸ್ತ್ರೀಶಕ್ತಿ ಸಂಘಗಳಿಗೆ ಡಿಸಿಸಿ ಬ್ಯಾಂಕ್‌ನಿಂದ ನೀಡಿರುವ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸಿದರು.

ಸಾಲ ಮರುಪಾವತಿ ಮಾಡಿಸಿಕೊಳ್ಳಲು ಯಾರೂ ಗ್ರಾಮಕ್ಕೆ ಬರಬಾರದೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. ಕೊಟ್ಟ ಮಾತಿನಂತೆ ಸಿದ್ದರಾಮಯ್ಯ ನಡೆದು ಕೊಳ್ಳಬೇಕೆಂದು ಆಗ್ರಹಿಸಿದರು.

‘ವೇಮಗಲ್‌ನಲ್ಲಿ ನಡೆದ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಸಿದ್ದರಾಮಯ್ಯ ಸ್ತ್ರೀಶಕ್ತಿ ಸಂಘಗಳ ಸಾಲಮನ್ನಾ ಮಾಡುವುದಾಗಿ ಭರವಸೆ ನೀಡಿದ್ದರು. ಈಗ ಕಾಂಗ್ರೆಸ್ ಸರ್ಕಾರ ಬಂದಿದೆ, ಹೇಳಿದ ಮಾತಿನಂತೆ ನಡೆದುಕೊಳ್ಳಬೇಕು. ಬ್ಯಾಂಕ್‌ಗೆ ನಷ್ಟವಾದರೆ ಅಧಿಕಾರಿಗಳು ಮುಖ್ಯಮಂತ್ರಿ ಬಳಿ ಹೋಗಿ ಕೇಳಲಿ’ ಎಂದು ರೈತ ಮುಖಂಡರಾದ ನಳಿನಿ ಗೌಡ ತಿಳಿಸಿದರು.

ವಾರದ ಹಿಂದೆ ತಾಲ್ಲೂಕಿನ ಕ್ಯಾಲನೂರು ಭಾಗದಲ್ಲಿ ಸಾಲ ಪಾವತಿಸುವಂತೆ ಹೇಳಲು ಹೋದ ಅಧಿಕಾರಿಗಳನ್ನು ಮಹಿಳೆಯರು ತರಾಟೆಗೆ ತೆಗೆದುಕೊಂಡಿದ್ದರು.



ಕೋಲಾರ ತಾಲ್ಲೂಕಿನ ಹೊಸಮಟ್ನಹಳ್ಳಿಯಲ್ಲಿ ಸಾಲ ಪಾವತಿಸುವುದಿಲ್ಲವೆಂದು ಮಹಿಳೆಯರು ರೈತ ಸಂಘದ ನೇತೃತ್ವದಲ್ಲಿ ಮಂಗಳವಾರ ಬ್ಯಾನರ್ ಕಟ್ಟಿ ಪ್ರತಿಭಟನೆ ನಡೆಸಿದರು

ಜಾನುವಾರು ಅಕ್ರಮ ಸಾಗಣೆ: ಎಂಟು ಜನರ ಬಂಧನ

ಪ್ರಜಾವಾಣಿ ವಾರ್ತೆ

ಯಾದಗಿರಿ: ಇಲ್ಲಿಯ ವೆಂಕಟೇಶ ನಗರ ತಾಂಡಾ ಕ್ರಾಸ್ ಬಳಿ ಹಸುಗಳನ್ನು ಕಳವು ಮಾಡಿ ಕಸಾಯಿಖಾನೆಗೆ ಸಾಗಿಸುತ್ತಿದ್ದ ಎಂಟು ಜನರನ್ನು ಗ್ರಾಮಾಂತರ ಠಾಣೆ ಪೊಲೀಸರು ಮಂಗಳವಾರ ಬೆಳಗಿನ ಜಾವ ಬಂಧಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಶಹಾಬಾದ್ ನಗರ ಹಾಗೂ ಖಣದಾಳ ಗ್ರಾಮದ ಮಹಮ್ಮದ್ ಇರ್ಫಾನ್, ಮುನೀರ್, ಜಾವೀದ್ ಪಟೇಲ್, ಅಮಿತ್ ಪಟೇಲ್, ಮುಬಾರಕ್, ವೆಂಕಟೇಶ, ಸಾಯಿಬಣ್ಣ ಹಾಗೂ ಶ್ರೀನಿವಾಸ ಬಂಧಿತರು.

4 ಬೊಲೆರೊ ಪಿಕಪ್ ವಾಹನಗಳಲ್ಲಿ ಕರುಗಳೂ ಸೇರಿ 25 ಹಸುಗಳನ್ನು ಸಾಗಿಸಲಾಗುತ್ತಿತ್ತು. ವಾಹನಗಳನ್ನು ತಪಾಸಣೆ ನಡೆಸಿದಾಗ ಹಸು ಸಾಗಣೆ ಮಾಡುತ್ತಿರುವುದು ತಿಳಿದುಬಂದಿದೆ. ಜಾನುವಾರುಗಳನ್ನು ರಕ್ಷಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಿ.ಬಿ.ವೇದಮೂರ್ತಿ ತಿಳಿಸಿದ್ದಾರೆ.

ಆರೋಪಿಗಳನ್ನು ವಿಚಾರಿಸಿದಾಗ ಸುತ್ತಮುತ್ತಲ ಗ್ರಾಮಗಳಿಂದ ಜಾನುವಾರು ಕಳವು ಮಾಡಿಕೊಂಡು ಬಂದು ಕಸಾಯಿಖಾನೆಗಳಿಗೆ ಸಾಗಣೆ ಮಾಡುತ್ತಿರುವುದು ತಿಳಿದು ಬಂದಿದೆ ಎಂದು ಹೇಳಿದ್ದಾರೆ.

ಯಾದಗಿರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಯಾಣಿಕರಿಗೆ ಮಾಹಿತಿ ನೀಡದ ಸಂಸ್ಥೆ; ಆಕ್ರೋಶ

ಏರ್ ಇಂಡಿಯಾ ವಿಮಾನ 8 ತಾಸು ತಡ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮುಂಬೈಗೆ ಹೊರಡಬೇಕಿದ್ದ ಏರ್ ಇಂಡಿಯಾ ವಿಮಾನ ಎಂಟು ತಾಸು ತಡವಾಗಿ ಟೇಕ್ ಆಫ್ ಆಗಿದ್ದು, ಏರ್ ಇಂಡಿಯಾ ಕಂಪನಿಯ ನಿರ್ಲಕ್ಷ್ಯಕ್ಕೆ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾನುವಾರ (ಜೂನ್ 11) ಸಂಜೆ 7.20ಕ್ಕೆ ಬೆಂಗಳೂರಿನಿಂದ ಹೊರಡಬೇಕಿದ್ದ ಏರ್ ಇಂಡಿಯಾದ ವಿಮಾನ (AI-610) ಮರುದಿನ ಅಂದರೆ, ಸೋಮವಾರ (ಜೂನ್ 12) ಬೆಳಗಿನ ಜಾವ 4 ಗಂಟೆಗೆ ಹೊರಟಿದೆ. ಹಾಗೆಯೇ ಮುಂಬೈಗೆ ಹೋಗಬೇಕಿದ್ದ ಮತ್ತೊಂದು ಏರ್ ಇಂಡಿಯಾ ವಿಮಾನ (AI-642) ಕೂಡ ಎರಡೂವರೆ ತಾಸು ತಡವಾಗಿ ಸಂಚರಿಸಿದೆ.

ವಿಮಾನ ನಿಲ್ದಾಣದಲ್ಲಿ ಕಾದು, ಕಾದು ಸುಸ್ತಾಗಿದ್ದ ಪ್ರಯಾಣಿಕರು ಏರ್ ಇಂಡಿಯಾ ಕಾರ್ಯವೈಖರಿಯ ಬಗ್ಗೆ ಏರ್‌ಪೋರ್ಟ್‌ನಲ್ಲಿಯೇ ಆಕ್ರೋಶ ಹೊರಹಾಕಿದ್ದು, ಟ್ವಿಟರ್‌ನಲ್ಲಿಯೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಮಾನ 8 ತಾಸು ತಡವಾದ ಬಗ್ಗೆ ಚಾರ್ಟರ್ಡ್ ಅಕೌಂಟೆಂಟ್ ಅರ್ಜುನ್ ವಿ., ಎಂಬುವರು ಏರ್ ಇಂಡಿಯಾ ಆಡಳಿತ ಮಂಡಳಿಯ ಕಾರ್ಯಾಚರಣೆ ಬಗ್ಗೆ ಟ್ವಿಟರ್‌ನಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ. ‘ವೋಲ್ವೊ ಬಸ್ ಬೆಂಗಳೂರಿನಿಂದ ಮುಂಬೈ ತಲುಪಲು 18 ತಾಸು ತೆಗೆದುಕೊಳ್ಳುತ್ತದೆ. ಕನಿಷ್ಠ ಪಕ್ಷ ನೀವು (ಏರ್ ಇಂಡಿಯಾ) ಮುಂಬೈಗೆ 15 ತಾಸು ಆದರೂ ತೆಗೆದುಕೊಳ್ಳಿ’ ಎಂದು ಪತ್ರಿಕಾ ಅಂಕಣಗಾರ್ತಿ ಕಲ್ಪನಾ ಶರ್ಮಾ ಟ್ವಿಟರ್‌ನಲ್ಲಿ ಲೇವಡಿ ಮಾಡಿದ್ದಾರೆ.

‘ಏರ್ ಇಂಡಿಯಾ ಕೌಂಟರ್ ಮುಂದೆ ಜಮಾಯಿಸಿದ್ದ ಪ್ರಯಾಣಿಕರಿಗೆ ಕನಿಷ್ಠ ಪಕ್ಷ ಆ ಸಂಸ್ಥೆಯ ಸಿಬ್ಬಂದಿಯು ವಿಮಾನ ವಿಳಂಬಕ್ಕೆ ಕಾರಣವೇನು ಎಂಬ ಮಾಹಿತಿ ನೀಡುವ ಸೌಜನ್ಯವನ್ನೂ ತೋರಲಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಬೆಂಗಳೂರಿನಿಂದ ಹೊರಟ ಏರ್ ಇಂಡಿಯಾ ವಿಮಾನಗಳು ಮಾತ್ರ ವಿಳಂಬವಾಗಿಲ್ಲ. ಪ್ರತಿಕೂಲ ಹವಾಮಾನದ ಕಾರಣ ಮುಂಬೈನಿಂದ ಹೊರಡುವ ಮತ್ತು ಆಗಮಿಸುವ ಎಲ್ಲ ವಿಮಾನಗಳೂ ಹಲವಾರು ತಾಸು ತಡವಾಗಿ ಸಂಚರಿಸುತ್ತಿವೆ. ಇಲ್ಲಿಗೆ ಬರುವ ವಿಮಾನಗಳನ್ನು ಬೇರೆ ನಿಲ್ದಾಣಕ್ಕೆ ಕಳಿಸಲಾಗುತ್ತಿದೆ’ ಎಂದು ಸಂಜಯ್ ಸಿಂಗ್ ಎಂಬುವರು ಟ್ವೀಟ್ ಮಾಡಿದ್ದಾರೆ.

‘ವಿಳಂಬಕ್ಕೆ ನಿರ್ದಿಷ್ಟ ಕಾರಣ ಗೊತ್ತಿಲ್ಲ. ವಿಮಾನ ನಿಲ್ದಾಣದಲ್ಲಿ ಸಮಸ್ಯೆ ಆಗಿಲ್ಲ. ಈ ಬಗ್ಗೆ ವಿಮಾನಯಾನ ಸಂಸ್ಥೆಯನ್ನೇ ಕೇಳಿ’ ಎಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಗಳು ಹೇಳಿವೆ.


ವಿಮಾನ ವಿಳಂಬವಾದ ಕಾರಣ ಏರ್ ಇಂಡಿಯಾ ಕೌಂಟರ್‌ನಲ್ಲಿ ಆಕ್ರೋಶ ಹೊರಹಾಕಿದ ಪ್ರಯಾಣಿಕರು

17ರಿಂದ ರಾಜ್ಯಮಟ್ಟದ ಕದಳಿ ಮಹಿಳಾ ಸಮಾವೇಶ

ಪ್ರಜಾವಾಣಿ ವಾರ್ತೆ

ವಿಜಯಪುರ: ರಾಜ್ಯಮಟ್ಟದ ಕದಳಿ ಮಹಿಳಾ ಸಮಾವೇಶ ಇದೇ 17, 18ರಂದು ವಿಜಯಪುರದಲ್ಲಿ ನಡೆಯಲಿದ್ದು, ಸಾಹಿತಿ ಶಶಿಕಲಾ ವಸ್ತ್ರದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

‘ಜಿಲ್ಲಾ ಶರಣ ಸಾಹಿತ್ಯ ಪರಿಷತ್, ರಾಜ್ಯ ಮತ್ತು ಜಿಲ್ಲಾ ಕದಳಿ ಮಹಿಳಾ ವೇದಿಕೆ ಸಹಯೋಗದಲ್ಲಿ ನಗರದ ಗುರುಸಂಗನ ಬಸವ ಸಮುದಾಯ ಭವನದಲ್ಲಿ ಸಮಾವೇಶ ನಡೆಯಲಿದೆ’ ಎಂದು ಪರಿಷತ್ ಅಧ್ಯಕ್ಷ ಅಪ್ಪಾರಾವ ಅಕ್ಕೋಣೆ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಎರಡು ದಿನದ ಸಮಾವೇಶದಲ್ಲಿ ಆಧುನಿಕ ವಚನಗೋಷ್ಠಿ, ಪ್ರಶ್ನೋತ್ತರ ಗೋಷ್ಠಿಗಳು ಇರಲಿವೆ. ಸಾಹಿತಿಗಳಾದ ಡಾ. ಎಚ್.ಎಲ್.ಪುಷ್ಪ, ಡಾ. ಸರಸ್ವತಿ ಚಿಮ್ಮಲಗಿ, ಅರುಣ ನರೇಂದ್ರ, ಡಾ.ಗಂಗಮ್ಮ ಸತ್ಯಂಪೇಟೆ, ಶಾರದಾ ಕೌದಿ, ಶೋಭಾದೇವಿ ಚೆಕ್ಕಿ, ಡಾ. ಶಾಂತಾ ಅಷ್ಟಿಗಿ, ಡಾ. ಬಸವರಾಜ ನೆಲ್ಲಿಸರ, ಡಾ. ವಿಜಯಾದೇವಿ, ಡಾ. ಪ್ರಜ್ಞಾ ಮತ್ತಿಹಳ್ಳಿ, ಪ್ರೇಮಕ್ಕ ಅಂಗಡಿ ಭಾಗವಹಿಸುವರು. ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಸಿ.ಸೋಮಶೇಖರ ಸಮಾರೋಪ ಭಾಷಣ ಮಾಡುವರು’ ಎಂದರು.

ಸಿಗಂದೂರು ಲಾಂಚ್: ಜನರಿಗಷ್ಟೇ ಅವಕಾಶ

ತುಮರಿ: ಇಲ್ಲಿನ ಶರಾವತಿ ಹಿನ್ನೀರಿನಲ್ಲಿ ಹೊಳೆಬಾಗಿಲಿನಿಂದ ಸಿಗಂದೂರನ್ನು ಸಂಪರ್ಕಿಸುವ ಲಾಂಚ್‌ನಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ಹೇರಲಾಗಿದ್ದು, ಜೂನ್ 14ರಿಂದ ಜನರನ್ನು ಮಾತ್ರ ಸಾಗಿಸುವುದಾಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ತಿಳಿಸಿದೆ.

ಶರಾವತಿ ಹಿನ್ನೀರಿನಲ್ಲಿ ನೀರಿನ ಹರಿವು ಕಡಿಮೆ ಆಗಿದ್ದು, ಕೆಲ ದಿನಗಳಿಂದ ಲಾಂಚ್ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಸದ್ಯ ಲಾಂಚ್‌ನಲ್ಲಿ ಜನರ ಸಂಚಾರಕ್ಕೆ ಮಾತ್ರ ಅವಕಾಶವಿದ್ದು ಸಿಗಂದೂರು ಭಕ್ತರು ಸೇರಿ ತುಮರಿ, ಬ್ಯಾಕೋಡು ಭಾಗದ ಸಾವಿರಾರು ಜನರ ನಿತ್ಯದ ಸೇವೆಗಳಲ್ಲಿ ವ್ಯತ್ಯಯವಾಗುವ ಆತಂಕ ಎದುರಾಗಿದೆ.

ಜೂನ್ ತಿಂಗಳಲ್ಲಿ ಮಳೆಯ ಕೊರತೆಯಿಂದ ಪ್ಲಾಟ್‌ಫಾರಂನಿಂದ ನೀರು ಸಾಕಷ್ಟು ದೂರದಲ್ಲಿದೆ. ಹೊಸನಗರ, ತೀರ್ಥಹಳ್ಳಿ ಭಾಗದಲ್ಲಿ ನಾಲ್ಕೈದು ದಿನ ಉತ್ತಮ ಮಳೆಯಾದರೆ ಲಾಂಚ್‌ನಲ್ಲಿ ವಾಹನಗಳನ್ನೂ ಸಾಗಿಸಲಾಗುವುದು ಎಂದು ಕಡವು ನಿರೀಕ್ಷಕ ಧನೇಂದ್ರ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ




ಸುಭಾಷಿತ

ನೀವು ಪ್ರೀತಿ ಮತ್ತು ಸಂತೋಷದಿಂದ ಇರಲು ಬಯಸುವಿರಾದರೆ, ಇತರರು ಹಾಗೆ ಇರುವಂತೆ ಮಾಡಲು ನೀವೇನು ಮಾಡಬಹುದೋ ಅದೆಲ್ಲವನ್ನೂ ಮಾಡಿ.

–ದೀಪಕ್ ಚೋಪ್ರಾ

ತಗ್ಗಿದ ಹಣದುಬ್ಬರದ ಅಬ್ಬರ ಆರ್‌ಬಿಐಗೆ ಈಗ ಮುಂಗಾರಿನ ಸವಾಲು

ಕಡಿಮೆ ಪ್ರಮಾಣದ ಆರ್ಥಿಕ ಬೆಳವಣಿಗೆ ದರವು ಭಾರತದಂತಹ ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕ ವ್ಯವಸ್ಥೆಗಳ ಪಾಲಿಗೆ ಅಪೇಕ್ಷಣೀಯ ಅಲ್ಲವೇ ಅಲ್ಲ. ಕಡಿಮೆ ಪ್ರಮಾಣದ ಬೆಳವಣಿಗೆಯು ಜನರ ಆರ್ಥಿಕ ಶಕ್ತಿಯನ್ನು ಕುಂದಿಸುತ್ತದೆ. ಕಡಿಮೆ ಪ್ರಮಾಣದ ಬೆಳವಣಿಗೆಯ ರೀತಿಯಲ್ಲಿಯೇ, ಜನರ ಬದುಕನ್ನು ಅಸಹನೀಯ ಆಗಿಸುವುದು ಹಣದುಬ್ಬರದ ಸಮಸ್ಯೆ. ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ 2022ರ ಮೇ ತಿಂಗಳ ನಂತರದಲ್ಲಿ ರೆಪೊ ದರವನ್ನು ಹೆಚ್ಚಿಸುತ್ತ ಬಂದಿದೆ. ರೆಪೊ ದರವು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಶೇಕಡ 4ರಷ್ಟು ಇದ್ದಿದ್ದು, ಈಗ ಶೇ 6.5ರ ಮಟ್ಟದಲ್ಲಿ ಇದೆ. ರೆಪೊ ದರವನ್ನು ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಕಳೆದ ಎರಡು ಸಭೆಗಳಲ್ಲಿ ಯಥಾಸ್ಥಿತಿಯಲ್ಲಿ ಕಾಯ್ದುಕೊಂಡಿದೆ. ರೆಪೊ ದರದಲ್ಲಿ ಮಾಡಿರುವ ಹೆಚ್ಚಳವು ಫಲ ನೀಡುತ್ತಿರುವ ಕಾರಣದಿಂದಾಗಿ, ಎಂಪಿಸಿ ಈ ನಿರ್ಧಾರಕ್ಕೆ ಬಂದಿರಬಹುದು. ಈ ತೀರ್ಮಾನವು ಸರಿಯಾಗಿಯೇ ಇದೆ. ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಿತಿಯನ್ನು (ಶೇ 6) ಮೀರಿ ನಿಂತಿದ್ದ ಚಿಲ್ಲರೆ ಹಣದುಬ್ಬರ ದರವು ಈಗ ಎರಡು ತಿಂಗಳುಗಳಿಂದ ಶೇ 6ಕ್ಕಿಂತ ಕಡಿಮೆ ಆಗಿದೆ. ಅಲ್ಲದೆ, ಮೇ ತಿಂಗಳಲ್ಲಿ ಶೇ 4.25ಕ್ಕೆ ಇಳಿಕೆಯಾಗಿದೆ. ದೇಶದ ಜಿಡಿಪಿ ಬೆಳವಣಿಗೆ ದರವು ಉತ್ತಮ ಮಟ್ಟದಲ್ಲಿ ಇರುವ ಸಂದರ್ಭದಲ್ಲಿ, ಹಣದುಬ್ಬರವು ಇಳಿಕೆ ಕಂಡಿರುವುದಕ್ಕಿಂತ ಹೆಚ್ಚು ಸಮಾಧಾನಕರ ಸುದ್ದಿ ಆರ್‌ಬಿಐ ಪಾಲಿಗೆ ಇನ್ನೊಂದು ಇರಲಾರದು.



ದೇಶದ ಜಿಡಿಪಿ ಬೆಳವಣಿಗೆ ಆಶಾದಾಯಕ ಮಟ್ಟದಲ್ಲಿರುವುದು ಹಾಗೂ ಹಣದುಬ್ಬರ ಇಳಿಕೆಯು ವಿಶ್ವಾಸ ಹೆಚ್ಚಿಸುವಂತಹ ವಿದ್ಯಮಾನ

ದೇಶದ ಬ್ಯಾಂಕಿಂಗ್ ವಲಯದ ನಿಯಂತ್ರಕ ಆಗಿರುವ ಆರ್‌ಬಿಐ ಮೇಲಿರುವ ಮಹತ್ವದ ಹೊಣೆಗಾರಿಕೆಗಳ ಪೈಕಿ ಪ್ರಮುಖವಾದುದು ದೇಶದಲ್ಲಿ ಬೆಲೆ ಸ್ಥಿರತೆಯನ್ನು ಸಾಧಿಸುವುದು. ಆದರೆ ಒಂದು ಹಂತದಲ್ಲಿ, ಚಿಲ್ಲರೆ ಹಣದುಬ್ಬರ ಪ್ರಮಾಣವು ಕೈಮೀರಿ ಬೆಳೆದಿತ್ತು. ಆರ್‌ಬಿಐ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಸೋತಿತ್ತು. ಈಗ ಸತತ ಮೂರು ತಿಂಗಳುಗಳಲ್ಲಿ (ಮಾರ್ಚ್, ಏಪ್ರಿಲ್ ಮತ್ತು ಮೇ) ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಕಡಿಮೆ ಇದೆ. ಆದರೆ ಇನ್ನು ಮುಂದೆ ಎಲ್ಲವೂ ಸರಿಹೋಗಲಿದೆ ಎಂಬ ಸ್ಥಿತಿ ಇಲ್ಲ. ಇದನ್ನು ಹಲವು ತಜ್ಞರು ಹೇಳಿದ್ದಾರೆ ಕೂಡ. ಎಲ್ ನಿನೊ ಪರಿಣಾಮದಿಂದಾಗಿ ಮುಂಗಾರು ಮಳೆಯು ಹದ ತಪ್ಪಿದರೆ ಕೃಷಿ ಅರ್ಥ ವ್ಯವಸ್ಥೆಯ ಚಟುವಟಿಕೆಗಳಿಗೆ ಅಡ್ಡಿ ಉಂಟಾಗುತ್ತದೆ. ಮುಂಗಾರು ಮಳೆಯು ವಾಡಿಕೆಯಂತೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಹೇಳಿದ್ದರೂ, ಮುಂಗಾರು ಮಳೆಯ ಬಗ್ಗೆ ವರದಿ ನೀಡುವ ಕೆಲವು ಖಾಸಗಿ ಸಂಸ್ಥೆಗಳು ವಾಡಿಕೆ ಮಳೆ ಆಗುವ ಬಗ್ಗೆ ಅನುಮಾನ ವ್ಯಕ್ತಪಡಿಸಿವೆ. ಮುಂಗಾರು ಕುರಿತ ಸ್ಪಷ್ಟ ಚಿತ್ರಣವೊಂದು ಇನ್ನು ಕೆಲವು ದಿನಗಳಲ್ಲಿ ಲಭ್ಯವಾಗಬಹುದು.

ಅಂತರರಾಷ್ಟ್ರೀಯ ಮಟ್ಟದಲ್ಲಿನ ಅಸ್ಥಿರತೆ ಕೂಡ ದೇಶದಲ್ಲಿ ಬೆಲೆ ಸ್ಥಿರತೆಗೆ ಸವಾಲಾಗಿ ಪರಿಣಮಿಸಬಹುದು. ಸದ್ಯಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲವು ತುಟ್ಟಿಯಾಗಿಲ್ಲ. ಆದರೆ, ಕಚ್ಚಾ ತೈಲ ಉತ್ಪಾದಿಸುವ ರಾಷ್ಟ್ರಗಳ ಪೈಕಿ ಪ್ರಮುಖ ದೇಶವಾಗಿರುವ ಸೌದಿ ಅರೇಬಿಯಾ, ಉತ್ಪಾದನೆಯನ್ನು ಜುಲೈ ತಿಂಗಳಿಗೆ ಅನ್ವಯವಾಗುವಂತೆ ದಿನಕ್ಕೆ 10 ಲಕ್ಷ ಬ್ಯಾರೆಲ್‌ಗಳಷ್ಟು ಕಡಿಮೆ ಮಾಡುವುದಾಗಿ ಹೇಳಿದೆ. ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯನ್ನು ಹೆಚ್ಚಿಸುವುದು ಇದರ ಉದ್ದೇಶ ಎಂಬುದು ಸ್ಪಷ್ಟ. ಈ ಕ್ರಮದ ಪರಿಣಾಮವಾಗಿ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆ ಆದಲ್ಲಿ, ಅದು ಕೂಡ ದೇಶದ ಅರ್ಥ ವ್ಯವಸ್ಥೆಯ ಮೇಲೆ ಪರಿಣಾಮ ಉಂಟುಮಾಡಬಹುದು. ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಯ ಕಾರಣದಿಂದಾಗಿ ಕೇಂದ್ರ ಸರ್ಕಾರವು ಈಚೆಗೆ ಪೆಟ್ರೋಲ್, ಡೀಸೆಲ್ ಬೆಲೆ ಪರಿಷ್ಕರಣೆಗೆ ಅವಕಾಶ ನೀಡುತ್ತಿಲ್ಲ. ಇದು ಕೂಡ ಚಿಲ್ಲರೆ ಹಣದುಬ್ಬರ ನಿಯಂತ್ರಣದಲ್ಲಿ ನೆರವಿಗೆ ಬಂದಿರುತ್ತದೆ. ಆದರೆ, ಕಚ್ಚಾ ತೈಲದ ಬೆಲೆ ಏರಿಕೆ ಆದಲ್ಲಿ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪರಿಷ್ಕರಣೆ ಆಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅಮೆರಿಕ ಹಾಗೂ ಯುರೋಪಿನ ಅರ್ಥ ವ್ಯವಸ್ಥೆಗಳು ಆರ್ಥಿಕ ಹಿಂಜರಿತದ ಭೀತಿಯಿಂದ ಇನ್ನೂ ಹೊರಬಂದಿಲ್ಲ. ಜರ್ಮನಿಯು ಆರ್ಥಿಕ ಹಿಂಜರಿತಕ್ಕೆ ಈಗಾಗಲೇ ಜಾರಿದೆ. ಇದರ ಪರಿಣಾಮವು ಭಾರತದ ಮೇಲೆ ಯಾವ ಬಗೆಯಲ್ಲಿ ಇರುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಇವೆಲ್ಲ ಏನೇ ಇದ್ದರೂ, ದೇಶದ ಜಿಡಿಪಿ ಬೆಳವಣಿಗೆ ಆಶಾದಾಯಕ ಮಟ್ಟದಲ್ಲಿರುವುದು ಹಾಗೂ ಹಣದುಬ್ಬರ ಇಳಿಕೆಯು ವಿಶ್ವಾಸ ಹೆಚ್ಚಿಸುವಂತಹವು.

ಶವಸಂಭೋಗವನ್ನು ಅಪರಾಧ ಎಂದು ಪರಿಗಣಿಸುವುದು ಈವರೆಗೂ ಸಾಧ್ಯವಾಗಿಲ್ಲ!

ಮೃತದೇಹ ಮತ್ತು ಘನತೆಯ ಹಕ್ಕು



ವಿಶ್ಲೇಷಣೆ

ಸಿ.ಎಚ್.ಹನುಮಂತರಾಯ

ರತ್ನಮ್ಮ ಎಂಬಾಕೆ ತುಮಕೂರು ಜಿಲ್ಲೆಗೆ ಸೇರಿದ ಜವನಹಳ್ಳಿಯ ಸಾಮಾನ್ಯ ಕುಟುಂಬವೊಂದರ ಹೆಣ್ಣುಮಗಳು. 2015ರಲ್ಲಿ 21ರ ಪ್ರಾಯದ ಪದವೀಧರೆ. ಎಷ್ಟೋ ಕನಸುಗಳನ್ನು ಹೊತ್ತು, ತನ್ನ ಗ್ರಾಮದಿಂದ ಪ್ರತಿದಿನ ಬೆಳಿಗ್ಗೆ 10.30ಕ್ಕೆ ಕಾಲ್ನಡಿಗೆಯಲ್ಲಿ ಸಮೀಪದ ಬಡವನಹಳ್ಳಿಗೆ ಹೋಗಿ ಕಂಪ್ಯೂಟರ್ ತರಬೇತಿ ಪಡೆದು ಮಧ್ಯಾಹ್ನ 3.30ರ ವೇಳೆಗೆ ಮನೆಗೆ ವಾಪಸಾಗುತ್ತಿದ್ದಳು.

ಅದೇ ವರ್ಷ ಜೂನ್ 25ರಂದು ಕಂಪ್ಯೂಟರ್ ತರಬೇತಿಗೆ ತೆರಳಿದ್ದ ಆಕೆ, ಎಂದಿನಂತೆ ಮಧ್ಯಾಹ್ನ ಮನೆಗೆ ಮರಳಿ ಬರಲಿಲ್ಲ. ಸ್ಥಳೀಯ ಹಾಲಿನ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದ ಅವಳ ಅಣ್ಣ ನಾಗೇಶ, ಇಷ್ಟು ಹೊತ್ತಾದರೂ ತಂಗಿ ಯಾಕೆ ಬರಲಿಲ್ಲ ಎಂದು ಆತಂಕಗೊಂಡ. ಸಂಜೆ ಹಾಲಿನ ಕೇಂದ್ರಕ್ಕೆ ಬಂದ ಕೆಲವರು, ದೊಡ್ಡಹಳ್ಳದ ಬಳಿ ಹುಡುಗಿಯೊಬ್ಬಳ ಶವ ಬಿದ್ದಿರುವುದಾಗಿಯೂ ಅದರ ಕತ್ತು ಸೀಳಿ ಕೊಲೆ ಮಾಡಿರುವುದಾಗಿಯೂ ಮಾತನಾಡಿಕೊಳ್ಳುತ್ತಿದ್ದರು. ಇನ್ನೂ ಮನೆಗೆ ಬಾರದಿದ್ದ ತನ್ನ ತಂಗಿಗೇ ಹಾಗಾಗಿರಬಹುದೇನೊ ಎಂದು ದಿಗಿಲುಗೊಂಡ ನಾಗೇಶ, ಕೆಲವು ಪರಿಚಿತರೊಂದಿಗೆ ದೊಡ್ಡಹಳ್ಳದ ಬಳಿಗೆ ಧಾವಿಸಿದ. ದುರದೃಷ್ಟವಶಾತ್, ಅಲ್ಲಿ ಕಂಡದ್ದು ಆತನ ತಂಗಿಯ ಶವವೇ ಆಗಿತ್ತು. ಅವಳು ಕೊಲೆಯಾಗಿದ್ದಷ್ಟೇ ಅಲ್ಲ, ಅತ್ಯಾಚಾರಕ್ಕೂ ಒಳಗಾಗಿ ಅಸುನೀಗಿದ್ದಳು.

ನಾಗೇಶನ ದೂರಿನ ಮೇರೆಗೆ ತನಿಖೆಯಾಗಿ, ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಿತು. ಆರೋಪಿ ರಂಗರಾಜು ಅಲಿಯಾಸ್ ವಾಜಪೇಯಿಗೆ ಕೊಲೆಯ ಆರೋಪಕ್ಕೆ ಭಾರತೀಯ ದಂಡ ಸಂಹಿತೆ (ಐಪಿಸಿ) ಸೆಕ್ಷನ್ 302ರ ಅಡಿಯಲ್ಲಿ ಜೀವಾವಧಿ ಶಿಕ್ಷೆ ಮತ್ತು ಶವಸಂಭೋಗ ಮಾಡಿದ್ದಕ್ಕಾಗಿ ಐಪಿಸಿ ಸೆಕ್ಷನ್ 376ರ ಅಡಿಯಲ್ಲಿ 10 ವರ್ಷ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಯಿತು.

ತನಗಾದ ಶಿಕ್ಷೆಯ ವಿರುದ್ಧ ಅಪರಾಧಿ ರಂಗರಾಜು ಕರ್ನಾಟಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ. ಈ ಮೇಲ್ಮನವಿಯು ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಮತ್ತು ಟಿ.ವೆಂಕಟೇಶ್ ನಾಯಕ್ ಅವರನ್ನು ಒಳಗೊಂಡ ವಿಭಾಗೀಯ ನ್ಯಾಯಪೀಠದಲ್ಲಿ ವಿಚಾರಣೆಗೆ ಒಳಪಟ್ಟು, ಈ ವರ್ಷದ ಮೇ 30ರಂದು ತೀರ್ಪು ಹೊರಬಿತ್ತು. ಅಪರಾಧಿಗೆ ಸೆಷನ್ಸ್ ನ್ಯಾಯಾಲಯವು ಕೊಲೆ ಆರೋಪದ ಮೇಲೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ನ್ಯಾಯಪೀಠ ಕಾಯಂಗೊಳಿಸಿತು. ಆದರೆ, ಅತ್ಯಾಚಾರದ ಸಂಬಂಧ ವಿಧಿಸಿದ್ದ ಶಿಕ್ಷೆಯನ್ನು ಮಾತ್ರ ವಜಾಗೊಳಿಸಿತು.

ಅತ್ಯಾಚಾರ ನಡೆದಿತ್ತು ಎಂಬುದಕ್ಕೆ ಬಹಳಷ್ಟು ಸಾಕ್ಷ್ಯಾಧಾರಗಳಿದ್ದರೂ ಈ ಸಂಬಂಧದ ಶಿಕ್ಷೆಯನ್ನು ವಜಾಗೊಳಿಸಿದ್ದು ಕುತೂಹಲಕ್ಕೆ ಕಾರಣವಾಯಿತು. ತೀರ್ಪಿನ ಒಳಹೊಕ್ಕು ನೋಡಿದಾಗ, ಅತ್ಯಾಚಾರದ ಆರೋಪಕ್ಕೆ ಸಂಬಂಧಿಸಿದಂತೆ ಒದಗಿಬಂದ ಸಾಕ್ಷ್ಯಾಧಾರಗಳು ಶವಸಂಭೋಗ ಕುರಿತಾದ ಆರೋಪವನ್ನು ನಿರೂಪಿಸಲು ಸಹಾಯಕವಾಗಿದ್ದವು. ಇದರಿಂದ, ಶವಸಂಭೋಗ ನಡೆದಿದೆ ಎಂಬುದು ಸಾಬೀತಾಯಿತು. ಆದರೆ, ವಾದದ ಚರ್ಚೆಯು ಭಾರತೀಯ ದಂಡಸಂಹಿತೆಯಲ್ಲಿ ಶವಸಂಭೋಗಕ್ಕೆ ಶಿಕ್ಷೆ ವಿಧಿಸಲು ಅವಕಾಶ ಇದೆಯೇ ಎನ್ನುವ ದಿಕ್ಕಿನಲ್ಲಿ ಜಿಜ್ಞಾಸೆಗೆ ಒಳಗಾಯಿತು.

ಐಪಿಸಿ ಸೆಕ್ಷನ್ 46, 297, 375, 376 ಮತ್ತು 377 ಹಾಗೂ ಭಾರತ ಸಂವಿಧಾನದ 21ರ ವಿಧಿ ವ್ಯಾಪ್ತಿಯಲ್ಲಿ ನ್ಯಾಯಪೀಠವು ಮಾನವ ಹಕ್ಕುಗಳನ್ನು ಕೂಲಂಕಷವಾಗಿ ಮತ್ತು ತಲಸ್ಪರ್ಶಿಯಾಗಿ ಪರಿಶೀಲಿಸಿತು. ಇದಕ್ಕೆ ಲಗತ್ತಾಗಿ ಕೇರಳ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಕೆಲವು ಪೂರ್ವ ನಿದರ್ಶನಗಳನ್ನು ಗಣನೆಗೆ ತೆಗೆದುಕೊಂಡಿತು.

ಈ ಕಾನೂನು ನಿಬಂಧನೆಗಳ ಚೌಕಟ್ಟಿನಲ್ಲಿ ನ್ಯಾಯಪೀಠವು ಮೃತದೇಹದೊಂದಿಗಿನ ಲೈಂಗಿಕ ಕ್ರಿಯೆಯು ಅತ್ಯಾಚಾರ ಎನಿಸಿಕೊಳ್ಳುತ್ತದೆಯೇ ಎಂಬ ಪ್ರಶ್ನೆಯ ಆಳಕ್ಕೆ ಇಳಿಯಿತು. ಆರಂಭದಲ್ಲಿ ಅದು, ಸಾವನ್ನು ವ್ಯಾಖ್ಯಾನಿಸುವ ಸೆಕ್ಷನ್ 46 ಅನ್ನು ಪರಿಶೀಲಿಸಿತು. ‘ಸಾವು ಎಂದರೆ ಮನುಷ್ಯನ ಸಾವು’ ಎಂದು ಕಂಡುಬಂದು, ಅತ್ಯಾಚಾರ ಒಬ್ಬ ‘ಜೀವಂತ ವ್ಯಕ್ತಿಯ ಮೇಲೆ ಜರುಗಬೇಕು, ಶವದ ಮೇಲಲ್ಲ’ ಎಂಬುದನ್ನು ಪರಿಗಣನೆಗೆ ತೆಗೆದುಕೊಂಡಿತು.

ಶವಸಂಸ್ಕಾರದ ವಿಧಿಗಳನ್ನು ಕೈಗೊಳ್ಳುವಾಗ ಇಲ್ಲವೇ ಸ್ಮಶಾನವನ್ನು ಅತಿಕ್ರಮಿಸಿ ಯಾವುದೇ ಶವಕ್ಕೆ ಅವಮಾನ ಉಂಟುಮಾಡುವಾಗ, ಮೃತ ವ್ಯಕ್ತಿಯ ಸಂಬಂಧಿಕರ ಭಾವನೆಗಳನ್ನು ಗಾಸಿಗೊಳಿಸುವಾಗ ಅಥವಾ ಧರ್ಮವನ್ನು ಅವಮಾನಿಸುವ ಉದ್ದೇಶ ಹೊಂದಿದ್ದಾಗ ಅನ್ವಯವಾಗುವ ಪ್ರಸ್ತುತ ಕಾನೂನು, ಶವಸಂಭೋಗಕ್ಕೆ ಸಂಬಂಧಿಸಿದ ವಿಷಯಕ್ಕೆ ಪೂರಕವಾಗಿಲ್ಲ ಎಂಬುದನ್ನು ಕಂಡುಕೊಂಡಿತು.

ಸೆಕ್ಷನ್ 375, 376ರ ಅಡಿಯಲ್ಲಿ, ಯಾವುದೇ ಜೀವಂತ ಹೆಣ್ಣು ಅಥವಾ ಗಂಡಿನ ಮೇಲೆ ನಡೆಯುವ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಯನ್ನು ಶಿಕ್ಷೆಗೆ ಒಳಪಡಿಸಬಹುದಾಗಿದೆ. ಸೆಕ್ಷನ್ 377ರ ಅಡಿಯಲ್ಲಿ, ಪ್ರಕೃತಿಗೆ ವಿರುದ್ಧವಾದ ರೀತಿಯಲ್ಲಿ ಯಾವುದೇ ಗಂಡು ಅಥವಾ ಹೆಣ್ಣು ಅಥವಾ ಪ್ರಾಣಿಯ ಜೊತೆ ನಡೆಸುವ ಲೈಂಗಿಕ ಕ್ರಿಯೆ ಶಿಕ್ಷಾರ್ಹ ಅಪರಾಧವಾಗುತ್ತದೆ. ದುರದೃಷ್ಟವೆಂದರೆ, ಸೆಕ್ಷನ್ 377ರ ಅಡಿಯಲ್ಲಿ, ‘ಮೃತದೇಹ’ ಎಂಬ ಉಲ್ಲೇಖವಿಲ್ಲ. ಹಾಗಾಗಿ, ಭಾರತೀಯ ದಂಡ ಸಂಹಿತೆಯ ಯಾವುದೇ ಕಲಂನ ಅಡಿಯಲ್ಲಿ ಹೆಣ್ಣು ಅಥವಾ ಗಂಡಿನ ಮೃತದೇಹದ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಕ್ಕೆ ಶಿಕ್ಷೆಯನ್ನು ವಿಧಿಸಲು ಅವಕಾಶವಿಲ್ಲ.

ಗಮನಾರ್ಹವಾದ ವಿಷಯವೆಂದರೆ, ಪಂಡಿತ್ ಪರಮಾನಂದ ಕಟಾರ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಮೃತದೇಹದ ಘನತೆಯನ್ನು ಕಾಪಾಡುವುದು, ಗೌರವಿಸುವುದು ರಾಜ್ಯ ಸರ್ಕಾರದ ಕರ್ತವ್ಯ ಎಂದು ತಿಳಿಸಿದೆ. ಭಾರತ ಸಂವಿಧಾನದ ವಿಧಿ 21ರ ಅಡಿಯಲ್ಲಿ ಘನತೆ ಮತ್ತು ನ್ಯಾಯಯುತ ನಡವಳಿಕೆಯ ಹಕ್ಕು ಜೀವಂತ ವ್ಯಕ್ತಿಗೆ ಮಾತ್ರವಲ್ಲದೆ ಮರಣದ ನಂತರ ಅವನ ದೇಹಕ್ಕೂ ಲಭ್ಯವಿದೆ ಎನ್ನುವುದನ್ನು ಎತ್ತಿ ಹಿಡಿದಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸಹ, ‘ಸತ್ತವರ ಘನತೆಯನ್ನು ಎತ್ತಿಹಿಡಿಯಬೇಕು ಮತ್ತು ಅವರ ಹಕ್ಕುಗಳನ್ನು ರಕ್ಷಿಸಬೇಕು’ ಎಂದು ಉಲ್ಲೇಖಿಸಿರುವುದು ಅಷ್ಟೇ ಗಮನಾರ್ಹವಾಗಿದೆ.

ಕೆನಡಾ, ಬ್ರಿಟನ್, ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ದೇಶಗಳು ಶವ ಸಂಭೋಗಕ್ಕೆ ಶಿಕ್ಷೆ ವಿಧಿಸುವ ಶಾಸನಗಳನ್ನು ಹೊಂದಿವೆ. ಇದನ್ನು ಮೃತದೇಹದ ಜೊತೆ ಲೈಂಗಿಕ ಕ್ರಿಯೆ ನಡೆಸುವ ವಿಚಿತ್ರ, ವಿಕೃತ ನಡವಳಿಕೆ, ಅಂದರೆ ‘ನೆಕ್ರೋಫಿಲಿಯ’ (Necrophilia) ಅರ್ಥಾತ್ ‘ಶವಸಂಭೋಗ’ ಎಂದು ವಿವರಿಸುತ್ತಾ, ಇದು ಕೆಲವು ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿರುವ, ಅಸಹಜ ಕ್ರಿಯೆಯ ಮಾನಸಿಕ ಆಕಾಂಕ್ಷೆಯ ಸ್ಥಿತಿ ಎಂದು ವಿವರಿಸಿ, ಶಿಕ್ಷಾರ್ಹ ಅಪರಾಧವನ್ನಾಗಿಸಿವೆ.

ದುರಂತವೆಂದರೆ, ಭಾರತೀಯ ದಂಡ ಸಂಹಿತೆಯು 1860ರಲ್ಲಿ ರೂಪುಗೊಂಡಿದ್ದು, ಇದುವರೆಗೆ 78 ಬಾರಿ ತಿದ್ದುಪಡಿಗೆ ಒಳಗಾಗಿದೆ. ಆದರೆ, ಶವಸಂಭೋಗ ಒಂದು ಅಪರಾಧ ಎಂಬುದು ಈತನಕ ಬಂದು ಹೋಗಿರುವ ಸಾವಿರಾರು ಸಂಸದರಿಗೆ ತೋಚದೇ ಹೋಗಿರುವುದು ಮಾತ್ರ ಆಶ್ಚರ್ಯವೇ ಸರಿ. ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠವು ಇದನ್ನು ಒಂದು ಅಪರಾಧವನ್ನಾಗಿಸುವಂತೆ ಕಾನೂನು ಮಾಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಶವಾಗಾರಗಳಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಿ, ಶವಗಳ ಮೇಲೆ ಅದರಲ್ಲೂ ವಯಸ್ಸಿಗೆ ಬಂದ ಹೆಣ್ಣುಮಕ್ಕಳ ಶವಗಳ ಮೇಲೆ ಲೈಂಗಿಕ ಅಪರಾಧಗಳು ನಡೆಯದಂತೆ ಹಾಗೂ ಅವುಗಳ ಘನತೆಗೆ ಕಿಂಚಿತ್ತೂ ಭಂಗ ಬರದಂತೆ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದೆ.

ಲೇಖಕ: ಹೈಕೋರ್ಟ್ ವಕೀಲ



ಚುರುಮುರಿ



ಸಾರಿಗೆ ಸವಾರಿ

• ಮಣ್ಣೆರಾಜು

‘ಪುರುಷರಿಗೆ ಮೀಸಲಾದ ಸೀಟುಗಳಲ್ಲಿ ಹೆಂಗಸರು ಕೂರುವಂತಿಲ್ಲ...’ ಬಸ್ಸಿನಲ್ಲಿ ಕಂಡಕ್ಟರ್ ಅನೌನ್ಸ್ ಮಾಡಿದರು.

ಪುರುಷರಿಗೆ ಎಲ್ಲೂ ಇಲ್ಲದ ಮೀಸಲಾತಿ ಬಸ್ಸಿನಲ್ಲಿದೆ ಎಂದು ಶಂಕ್ರಿ ಆನಂದಪಟ್ಟ.

‘ಹೆಂಗಸೊಬ್ಬಳು ಗಂಡಸರ ಸೀಟಿನಲ್ಲಿ ಕುಳಿತಿದ್ದಾಳೆ, ಅವಳನ್ನು ಏಳಿಸ್ರೀ, ನಿಮ್ಮ ಟಿಕೆಟ್ ಲೆಕ್ಕದಲ್ಲಿ ನಾನು ಅಲ್ಲಿ ಕೂರ್ತೀನಿ’ ಸುಮಿ ಗಂಡನ ಬಳಿ ಪಿಸುಗುಟ್ಟಿದಳು.

‘ಮೇಡಂ, ಇದು ಗಂಡಸರ ಸೀಟು’ ಅಂದ ಶಂಕ್ರಿ. ‘ಬಸ್ಸಿನ ಸೀಟಿಗೆ ಹೆಣ್ಣು-ಗಂಡೆಂಬ ಲಿಂಗಭೇದವಿಲ್ಲ...’ ಅಂದಳು.

‘ಹಾಗಲ್ಲಾ, ಟಿಕೆಟ್ ಖರೀದಿಸಿದ ಪುರುಷರ ಸೀಟು ಇದು’.

ಪಕ್ಕದಲ್ಲಿದ್ದ ಗಂಡಸು, ‘ರೀ ಸ್ವಾಮಿ, ಆ ಸೀಟಿಗೆ ನಾನೇ ಟಿಕೆಟ್ ತಗೊಂಡು ಹೆಂಡ್ತಿಯನ್ನು ಕೂರಿಸಿ ನಾನು ಸ್ಟ್ಯಾಂಡಿಂಗ್‌ನಲ್ಲಿದ್ದೀನಿ’ ಅಂದ.

ಇನ್ನೊಬ್ಬ ಮಹಿಳೆ ಬಳಿ ಹೋಗಿ, ‘ಮೇಡಂ, ನಿಮ್ಮ ಗಂಡನೂ ಸ್ಟ್ಯಾಂಡಿಂಗ್‌ನಲ್ಲಿದ್ದಾರಾ?’ ಶಂಕ್ರಿ ಕೇಳಿದ.

‘ಇಲ್ಲ, ಮನೇಲಿದ್ದಾರೆ’.

‘ಹಾಗಾದ್ರೆ ಎದ್ದೇಳಿ, ಇದು ಗಂಡಸರ ಸೀಟು’ ಅಂದಳು ಸುಮಿ.

‘ಹೌದು ಮೇಡಂ, ಈ ಸೀಟಿಗೆ ಗಂಡಸರು ಟಿಕೆಟ್ ಕೊಂಡಿದ್ದಾರೆ’ ಎಂದರು ಕಂಡಕ್ಟರ್.

‘ಸೀಟು ಬಿಡಲ್ಲ, ನನಗೂ ಟಿಕೆಟ್ ಕೊಡಿ...’ ಪರ್ಸಿನಿಂದ ದುಡ್ಡು ತೆಗೆದಳು.

‘ಕಂಡಕ್ಟರೇ, ಮಹಿಳೆಯರಿಗೆ ಟಿಕೆಟ್ ಕೊಡುವುದು ನಿಯಮಬಾಹಿರ...’ ಸುಮಿ ಎಚ್ಚರಿಸಿದಳು. ‘ಮುಂದಿನ ಸ್ಟಾಪಿನಲ್ಲಿ ಈ ಅಜ್ಜಿ ಇಳಿಯುತ್ತಾರೆ, ಸೀಟು ಖಾಲಿಯಾಗುತ್ತೆ’ ಎಂದರು ಕಂಡಕ್ಟರ್.

‘ಈ ಸೀಟು ನನ್ನದು, ಕೈಲಾಗದ ಅಜ್ಜಿ ಅಂತ ಬಿಟ್ಟುಕೊಟ್ಟಿದ್ದೇನೆ’ ಪಕ್ಕದವನು ಅಡ್ಡ ಬಂದ.

‘ನನ್ನ ಹೆಂಡ್ತೀನ ಕೂರಿಸಬೇಕು, ಸೀಟು ಬಿಟ್ಟುಕೊಡಿ, ಟಿಕೇಟಿನ ಎರಡರಷ್ಟು ದುಡ್ಡು ಕೊಡ್ತೀನಿ’ ಶಂಕ್ರಿ ಆಮಿಷವೊಡ್ಡಿದ.

‘ನಾನು ಬ್ಲ್ಯಾಕ್ ಟಿಕೆಟ್ ಮಾರುವವನೇನ್ರೀ?...’ ಎಂದು ಕೂಗಾಡಿದ. ಶಂಕ್ರಿ ತೆಪ್ಪಗಾದ.

‘ಹೆಂಡ್ತಿಗೊಂದು ಸೀಟಿನ ವ್ಯವಸ್ಥೆ ಮಾಡಲಾಗಲಿಲ್ಲ, ಥೇ, ನೀವೆಂಥಾ ಗಂಡ...’ ಶಂಕ್ರಿಗೆ ಸುಮಿ ತಿವಿದು ಹೇಳಿದಳು.

ದಿನದ ಟ್ವೀಟ್

ತಗಾದೆ ಮಾತೇಕೆ?



ಉಚಿತ ಶಕ್ತಿ ಯಾನ ಬೇಡವೇ ಬೇಡ ಎಂದು ವಿರೋಧಿಸುತ್ತಿರುವವರು ತಮ್ಮ ಆಧಾರ್ ಮತ್ತಿತರ ಗುರುತಿನ ಚೀಟಿಗಳನ್ನು ಒಳಗೇ ಇಟ್ಟುಕೊಂಡು, ನಿರ್ವಾಹಕರು ಕೇಳಿದರೆ ಕೊಡದೇ ಇದ್ದರಾಯಿತು. ಆಗ ನಿರ್ವಾಹಕರು ಟಿಕೆಟ್ ದುಡ್ಡು ಕೇಳುತ್ತಾರೆ, ಅದನ್ನು ಕೊಟ್ಟರಾಯಿತು. ಬೇರೆ ತಗಾದೆ ಮಾತು ಯಾಕೆ? ಸರ್ಕಾರ ಈ ಬಗ್ಗೆ ಸೂಚನೆ ಹೊರಡಿಸಲಿ.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ



2021ರಲ್ಲಿ ಭಾರತದಲ್ಲಿ ನಡೆದ ರೈತರ ಹೋರಾಟದ ಸಂದರ್ಭದಲ್ಲಿ ಕೆಲವು ಖಾತೆಗಳನ್ನು ಟ್ವಿಟರ್ ಅನ್‌ಬ್ಲಾಕ್ ಮಾಡಿದ್ದು, ಇಲ್ಲಿನ ಐ.ಟಿ. ಸಚಿವಾಲಯಕ್ಕೆ ಕಿರಿಕಿರಿ ಉಂಟುಮಾಡಿತ್ತು. ಟ್ವಿಟರ್‌ನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದರಿಂದ ಹಲವು ಖಾತೆಗಳನ್ನು ನಾವು ಬ್ಲಾಕ್ ಮಾಡಿರಲಿಲ್ಲ. ಹೀಗಾಗಿ, ಸರ್ಕಾರದೊಂದಿಗೆ ನಮ್ಮ ಸಂಬಂಧ ಸರಿಹೋಗಲಿಲ್ಲ.

ಜಾಕ್ ಡೋರ್ಸಿ, ಟ್ವಿಟರ್‌ನ ಸಹ ಸಂಸ್ಥಾಪಕ, ಮಾಜಿ ಸಿಇಒ

25 ವರ್ಷಗಳ ಹಿಂದೆ

ಭಾನುವಾರ, 14-6-1998

• ಅಕಾಡೆಮಿಗಳ ಅಧ್ಯಕ್ಷರಾಗಿ ಗಿರಡ್ಡಿ, ಸಿಜಿಕೆ, ಕಾಳೇಗೌಡ

ಬೆಂಗಳೂರು, ಜೂನ್ 13– ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಸಾಹಿತಿ ಡಾ. ಗಿರಡ್ಡಿ ಗೋವಿಂದರಾಜ, ನಾಟಕ ಅಕಾಡೆಮಿಗೆ ಸಿ.ಜಿ.ಕೃಷ್ಣಸ್ವಾಮಿ (ಸಿಜಿಕೆ), ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಡಾ. ಕಾಳೇಗೌಡ ನಾಗವಾರ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ, ಏಳು ವಿವಿಧ ಅಕಾಡೆಮಿಗಳನ್ನು ಪುನರ್‌ರಚಿಸಿ ರಾಜ್ಯ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಪುನರ್ ರಚನೆಗೊಂಡ ಅಕಾಡೆಮಿಗಳ ಜತೆಗೆ ಕರ್ನಾಟಕ ಸಂಗೀತ ನೃತ್ಯ, ಲಲಿತಕಲೆ, ಕೊಡವ ಸಾಹಿತ್ಯ, ಉರ್ದು ಅಕಾಡೆಮಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರವೂ ಸೇರಿವೆ. ಅಕಾಡೆಮಿಗಳಿಗೆ ನೂತನ ಅಧ್ಯಕ್ಷರು ಮತ್ತು ಸದಸ್ಯರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ರಾಜ್ಯ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

• ಪಟೇಲ್ ಸಂಪುಟ ವಿಸ್ತರಣೆ ಇಂದು ಆರು ಮಂದಿ ಹೊಸಬರ ಸೇರ್ಪಡೆ

ಬೆಂಗಳೂರು, ಜೂನ್ 13– ಹಲವಾರು ದಿನಗಳಿಂದ ಕುತೂಹಲ ಕೆರಳಿಸಿದ್ದ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ಸಂಪುಟ ಹೊಸದಾಗಿ ಆರು ಮಂದಿಯ ಸೇರ್ಪಡೆಯೊಂದಿಗೆ ನಾಳೆ ಬೆಳಿಗ್ಗೆ ವಿಸ್ತರಣೆಯಾಗಲಿದೆ.

ನೂತನವಾಗಿ ಸಂಪುಟ ಸೇರುವ ಆರು ಮಂದಿಯ ಪೈಕಿ ಬೆಳಗಾವಿಯ ಮಾಜಿ ಸಚಿವ ಎ.ಬಿ.ಪಾಟೀಲ್, ಬೀದರ್‌ನ ಬಸವರಾಜ ಪಾಟೀಲ್ ಅಟ್ಟೂರ್ ಇಬ್ಬರನ್ನೂ ಸಂಪುಟ ದರ್ಜೆಗೆ, ವಿಜಾಪುರದ ಎಂ.ಸಿ.ಮನಗೂಳಿ, ದಾವಣಗೆರೆಯ ಎಚ್.ಶಿವಪ್ಪ, ಉತ್ತರ ಕನ್ನಡ ಜಿಲ್ಲೆಯ ಜಯವಂತ್, ಕೊಪ್ಪಳದ ನಾಗಪ್ಪ ಸಾಲೋನಿ ಅವರು ರಾಜ್ಯ ಸಚಿವರಾಗಿ ಮಂತ್ರಿ ಮಂಡಲ ಸೇರಲಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 14-6-1973

• ಕೇಂದ್ರದಿಂದ 40 ಸಹಸ್ರ ಟನ್ ಗೋಧಿ-ಜೋಳ

ಬೆಂಗಳೂರು, ಜೂನ್ 13– ಕೇಂದ್ರದಿಂದ ರಾಜ್ಯಕ್ಕೆ ನಲವತ್ತು ಸಾವಿರ ಟನ್ ಗೋಧಿ ಮತ್ತು ಕೆಂಪುಜೋಳ ಸರಬರಾಜಾಗಿರುವುದರಿಂದ ಆಹಾರ ಪರಿಸ್ಥಿತಿ ಬಗೆಗೆ ಕಳವಳ ಅನಗತ್ಯವೆಂದು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿದರು.

ಹೊಸ ದಾಸ್ತಾನು ಬಂದಿರುವುದರಿಂದ ಆಹಾರ ಅಭಾವ ಪರಿಸ್ಥಿತಿಯನ್ನು ಎದುರಿಸುವ ವಿಶ್ವಾಸ ಸರ್ಕಾರಕ್ಕಿದೆಯೆಂದು ಅವರು ತಿಳಿಸಿದರು.

‘ಕೇಂದ್ರದಿಂದ ಗೋಧಿ-ಜೋಳ ಬಂದಿರುವುದು ಸಂತೋಷದ ವಿಚಾರ. ಇದರೊಡನೆ ಕೇಂದ್ರದಿಂದ ಬರಬೇಕಾಗಿದ್ದ ಕೊನೆಯ ಕಾಳು ನಮಗೆ ಬಂದಂತಾಗಿದೆ’ ಎಂದರು.

• ಇಂದು ಕೃತಕ ಮಳೆ ಪ್ರಯೋಗ

ಪುಣೆ, ಜೂನ್ 13– ಮೋಡಗಳ ಮೇಲೆ ಉಪ್ಪು ಚೆಲ್ಲಿ ಕೃತಕವಾಗಿ ಮಳೆ ತರಿಸುವುದು ಸಾಧ್ಯ. ವಿದೇಶಗಳಲ್ಲಿ ಅದು ಯಶಸ್ವಿ ಆಗಿದೆ. ಭಾರತದಲ್ಲಿ ಈಗ ಯತ್ನ ನಡೆದಿದೆ. ಗುರುವಾರ ಕೃತಕ ಮಳೆ ಕುರಿತ ಪ್ರಯೋಗಗಳ ಸರಣಿ ಆರಂಭ, ನಲವತ್ತೈದು ದಿನ ತಜ್ಞರಿಂದ ಪ್ರಯೋಗ ಪ್ರಯತ್ನ.

ಪ್ರಯೋಗ ನಡೆಯುವುದು ಪುಣೆ ಮತ್ತು ಅಹಮದ್ ನಗರ ಜಿಲ್ಲೆಗಳ ಅಭಾವ ಪ್ರದೇಶದಲ್ಲಿ. 1,600 ಚದರ ಕಿಲೊಮೀಟರ್‌ಗಳ ಎರಡು ಪ್ರತ್ಯೇಕ ನಿವೇಶನಗಳಲ್ಲಿ ಬೀಳುವ ಮಳೆ ಅಳೆಯುವ 22 ಕೇಂದ್ರಗಳು ಅಲ್ಲಿ ಸಿದ್ಧವಾಗಿವೆ.

ಸಂಗತ

ಅರ್ಧಕ್ಕೇ ಶಾಲೆ ಬಿಡುವುದೇಕೆ?

ಇಲ್ಲದ ಮೂಲಸೌಲಭ್ಯ, ದೂರಪ್ರಯಾಣ, ಗುಣಮಟ್ಟದ ಶಿಕ್ಷಣದ ಕೊರತೆಯು ಮಕ್ಕಳು ಹಾಗೂ ಪೋಷಕರಲ್ಲಿ ಶಾಲೆಯ ಬಗೆಗಿನ ಆಸಕ್ತಿಯನ್ನು ಕುಗ್ಗಿಸುತ್ತವೆ

• ಡಾ. ಕೆ.ಎಸ್.ಚೈತ್ರಾ

ರಾಜ್ಯದಲ್ಲಿ ಪ್ರೌಢಶಾಲಾ ಹಂತದಲ್ಲಿ ಶಾಲೆಯನ್ನು ಅರ್ಧಕ್ಕೆಬಿಟ್ಟವರ ಪ್ರಮಾಣ 2021–22ರ ಅವಧಿಯಲ್ಲಿ ಶೇಕಡ 14.6ರಷ್ಟು. ಇದು ರಾಷ್ಟ್ರೀಯ ಸರಾಸರಿಗಿಂತ ಅಧಿಕ ಎಂದು ಯೋಜನಾ ಅನುಮೋದನೆ ಮಂಡಳಿ ಸಭೆಯ ಟಿಪ್ಪಣಿಯಲ್ಲಿ ಹೇಳಲಾಗಿದೆ. ಶಾಲೆಗಳಲ್ಲಿ ಶೇಕಡ ನೂರರಷ್ಟು ದಾಖಲಾತಿ ಪ್ರಮಾಣ ಇರಬೇಕು ಎನ್ನುವ ರಾಷ್ಟ್ರೀಯ ಶಿಕ್ಷಣ ನೀತಿಯ ಗುರಿಗೆ ಇದು ಅಡ್ಡಿ ಎಂದು ಕೇಂದ್ರ ಸರ್ಕಾರ ಅಭಿಪ್ರಾಯಪಟ್ಟಿದೆ.

ಶಿಕ್ಷಣ ಎನ್ನುವುದು ಪ್ರತಿಯೊಬ್ಬ ಮಗುವಿನ ಮೂಲಭೂತ ಹಕ್ಕು. ಅದನ್ನು ಒದಗಿಸುವುದು ಪೋಷಕರು ಮತ್ತು ಸರ್ಕಾರದ ಕರ್ತವ್ಯ. ಸರ್ಕಾರದ ಬಹಳಷ್ಟು ಪ್ರಯತ್ನಗಳು ಪ್ರಾಥಮಿಕ ಶಿಕ್ಷಣದ ಮಟ್ಟ ಹೆಚ್ಚಿಸುವಲ್ಲಿ ಯಶಸ್ಸನ್ನು ಕಂಡಿವೆ. ಆದರೆ ಪ್ರೌಢಶಾಲೆಗೆ ಬರುತ್ತಿದ್ದಂತೆಯೇ ಈ ಮಟ್ಟ ಏಕೆ ಕಡಿಮೆ ಆಗುತ್ತಿದೆ ಎನ್ನುವುದಕ್ಕೆ ಬಹಳಷ್ಟು ಕಾರಣಗಳಿವೆ. ಪೋಷಕರ ಆರ್ಥಿಕ ಅನನುಕೂಲ ಪ್ರಮುಖ ಕಾರಣ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಉಚಿತವಾಗಿ ಸಿಗುತ್ತದೆ ಎನ್ನುವುದೇನೋ ನಿಜ. ಆದರೆ ಹದಿಹರೆಯದ ಮಕ್ಕಳು ಕೃಷಿ ಕೆಲಸದಲ್ಲಿ ಅಥವಾ ಇನ್ನಿತರ ಸಣ್ಣಪುಟ್ಟ ಉದ್ಯೋಗಗಳಲ್ಲಿ ತೊಡಗಿಸಿಕೊಂಡಾಗ ಅವರಿಂದ ಮನೆಗೆ ನಿರ್ದಿಷ್ಟ ಆದಾಯ ಖಚಿತ. ಹೀಗಾಗಿ ಈ ಹಂತದಲ್ಲಿ ಶಾಲೆ ಬಿಡಿಸುವವರ ಸಂಖ್ಯೆ ಹೆಚ್ಚು. ಓದಿ ಪಿಯುಸಿ ಅಥವಾ ಡಿಗ್ರಿ ಮುಗಿಸಿದರೂ ಉದ್ಯೋಗದ ಖಾತರಿ ಇಲ್ಲದಿರುವಾಗ ಕಲಿಸುವುದೇಕೆ ಎನ್ನುವ ನಿರಾಶೆಯೂ ಹಲವರದ್ದು.

ಇದರೊಂದಿಗೆ ಪ್ರಾಥಮಿಕ ಶಿಕ್ಷಣಕ್ಕೆ ಶಾಲೆಗಳು ಹಳ್ಳಿ ಹಳ್ಳಿಯಲ್ಲೂ ಸುಲಭವಾಗಿ ಲಭ್ಯವಿವೆ. ಪ್ರೌಢಶಾಲೆಗಾಗಿ ಬಹಳಷ್ಟು ದೂರ ಪ್ರಯಾಣಿಸಬೇಕಾಗುತ್ತದೆ. ಹೀಗಾಗಿ ಮಕ್ಕಳನ್ನು ದೂರ ಕಳುಹಿಸುವಾಗ ಅವರ ಸುರಕ್ಷತೆಯ ಕುರಿತು ಪೋಷಕರಿಗೆ ಆತಂಕ. ಎಷ್ಟೋ ಬಾರಿ ಈ ಕಾರಣಕ್ಕಾಗಿಯೇ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಲಾಗುತ್ತದೆ. ಇದರೊಂದಿಗೆ ಶಾಲೆಯಲ್ಲಿ ಇರದ ಮೂಲಸೌಲಭ್ಯಗಳು, ಶಿಕ್ಷಕ ಮತ್ತು ಗುಣಮಟ್ಟದ ಶಿಕ್ಷಣದ ಕೊರತೆ ಇವೆಲ್ಲವೂ ಮಕ್ಕಳು ಹಾಗೂ ಪೋಷಕರಿಗೆ ಶಾಲೆಯ ಬಗೆಗಿನ ಆಸಕ್ತಿಯನ್ನು ಕುಗ್ಗಿಸುತ್ತವೆ.

ಇಡೀ ಜಗತ್ತನ್ನೇ ತಲ್ಲಣಗೊಳಿಸಿದ ಕೋವಿಡ್, ಶೈಕ್ಷಣಿಕ ಕ್ಷೇತ್ರದಲ್ಲಿಯೂ ಬೀರಿದ ಪ್ರಭಾವ ಅಪಾರ. ಆರೋಗ್ಯ ಮತ್ತು ಸುರಕ್ಷತೆಯ ದೃಷ್ಟಿಯಿಂದ ದೀರ್ಘಕಾಲ ಶಾಲೆಗಳನ್ನು ಮುಚ್ಚಲಾಗಿತ್ತು. ಆನ್‌ಲೈನ್ ಶಾಲೆಗಳನ್ನು ನಡೆಸಿದರೂ ಎಲ್ಲ ಮಕ್ಕಳಿಗೂ ಈ ತಂತ್ರಜ್ಞಾನದ ಸಹಾಯ ಲಭ್ಯವಾಗಲಿಲ್ಲ. ತದನಂತರ ಶಾಲೆಗಳು ಪೂರ್ಣ ಪ್ರಮಾಣದಲ್ಲಿ ಆರಂಭವಾದರೂ ಮಕ್ಕಳು ಮತ್ತೆ ನಿರೀಕ್ಷಿತ ಮಟ್ಟದಲ್ಲಿ ಶಾಲೆಗೆ ಸೇರಲಿಲ್ಲ. ಕೋವಿಡ್ ಸಂದರ್ಭದಲ್ಲಿ ನಗರ ಪ್ರದೇಶಗಳಿಂದ ತಮ್ಮ ಹಳ್ಳಿಗೆ ಮರಳಿದಂತಹ ಕಾರ್ಮಿಕರ ಸಂಖ್ಯೆ ಹೆಚ್ಚಿನದ್ದು. ಇಲ್ಲಿಂದ ಶಾಲೆ ಬಿಡುವಾಗ ಟಿ.ಸಿ ಪಡೆಯಲು ಸಾಧ್ಯವಾಗಿರಲಿಲ್ಲ. ಅದನ್ನು ಪಡೆದು ಮತ್ತೆ ಶಾಲೆಗೆ ಸೇರ್ಪಡೆಯಾಗುವುದು ಕಷ್ಟ ಮತ್ತು ಬೇಡ ಎನ್ನುವಂತಹ ಮನೋಭಾವವು ಹಲವರಲ್ಲಿದೆ.

ಹಾಗೆಯೇ ಯೂನಿಸೆಫ್ ಸಮೀಕ್ಷೆಯಲ್ಲಿ ಬೆಳಕಿಗೆ ಬಂದ ಮತ್ತೊಂದು ಅಂಶ, ದೇಶದಲ್ಲಿ ಶೇಕಡ 33ರಷ್ಟು ಹೆಣ್ಣುಮಕ್ಕಳು ಶಾಲೆಯನ್ನು ಅರ್ಧಕ್ಕೇ ಬಿಡಲು ಕಾರಣ ಮನೆಗೆಲಸ. ಹೆಣ್ಣುಮಕ್ಕಳು ಶಾಲಾ ಶಿಕ್ಷಣ ವಂಚಿತರಾಗಲು ಇನ್ನಷ್ಟು ಕಾರಣಗಳಿವೆ. ಹೆಣ್ಣುಮಕ್ಕಳು ಕಲಿತು ಯಾರನ್ನೂ ಉದ್ಧಾರ ಮಾಡಬೇಕಿಲ್ಲ, ಹೇಗಿದ್ದರೂ ತೊಳೆಯುವ, ಬಳಿಯುವ ಕೆಲಸ ಇದ್ದದ್ದೇ! ಹಾಗಾಗಿ ಓದಲು ಬರೆಯಲು ಸಹಿ ಹಾಕಲು ಬಂದರೆ ಸಾಕು ಎನ್ನುವ ಧೋರಣೆ ಇಂದಿಗೂ ಇದೆ.

ಸಾಮಾನ್ಯವಾಗಿ ಹೆಣ್ಣುಮಕ್ಕಳು ಹೈಸ್ಕೂಲಿಗೆ ಬರುವ ಸಮಯದಲ್ಲಿ ಋತುಮತಿಯರಾಗುತ್ತಾರೆ. ಪ್ರೌಢಶಾಲೆಗೆ ದೂರ ಕಳಿಸಬೇಕಾದ ಸಂದರ್ಭವಿರುವಾಗ ಅವರ ಸುರಕ್ಷತೆಯ ಬಗ್ಗೆ ಹೆದರಿಕೆ ಸಹಜವೇ. ಅದರೊಂದಿಗೆ ಶಾಲೆಗಳಲ್ಲಿ ಇರದ ಮೂಲಸೌಕರ್ಯಗಳು, ಅಂದರೆ ಶೌಚಾಲಯ ವ್ಯವಸ್ಥೆ ಶಾಲೆಯನ್ನು ಬಿಡಲು ಒಳ್ಳೆಯ ನೆಪವಾಗುತ್ತದೆ. ಕೋವಿಡ್ ಸಮಯದಲ್ಲಿ 2020ರಲ್ಲಿ ಬಾಲ್ಯವಿವಾಹ ಪ್ರಕರಣಗಳು ದೇಶದಲ್ಲಿಯೇ ಅತ್ಯಂತ ಹೆಚ್ಚು ನಡೆದದ್ದು ಕರ್ನಾಟಕದಲ್ಲಿ!



ದೇಶದಲ್ಲಿ ಶೇಕಡ 50ರಷ್ಟು ಹುಡುಗಿಯರಿಗೆ ಪ್ರಾಪ್ತ ವಯಸ್ಸಿಗೆ ಬರುವ ಮುನ್ನವೇ ಮದುವೆಯನ್ನು ಮಾಡಲಾಗುತ್ತದೆ. ಆ ಮೂಲಕ ಆಕೆಯನ್ನು ಶಿಕ್ಷಣ ಮಾತ್ರವಲ್ಲ ಆತ್ಮವಿಶ್ವಾಸದಿಂದ ಬದುಕು ಕಟ್ಟಿಕೊಳ್ಳುವ, ಸ್ವಾವಲಂಬಿಯಾಗುವ ಅವಕಾಶದಿಂದಲೇ ವಂಚಿತಳನ್ನಾಗಿಸುವುದು ಸಮಾಜದಲ್ಲಿ ಬೇರೂರಿರುವ ಲಿಂಗತಾರತಮ್ಯಕ್ಕೆ ನಿದರ್ಶನ!

ಸಮಸ್ಯೆ ಇದೆ. ಪರಿಹಾರ? ಸರ್ಕಾರದಿಂದ ಉಚಿತ ಸೈಕಲ್, ಸಮವಸ್ತ್ರ, ಪುಸ್ತಕ, ಬಿಸಿಯೂಟ ಇವೆಲ್ಲದರ ಜೊತೆಗೆ ಇದೀಗ ಶಕ್ತಿ ಯೋಜನೆಯನ್ನು ಕೂಡ ಪ್ರಕಟಿಸಲಾಗಿದೆ. ಒಂದೇ ಕಡೆ ಒಂದರಿಂದ ಹತ್ತನೇ ತರಗತಿಯವರೆಗೆ ಶಿಕ್ಷಣ ವ್ಯವಸ್ಥೆ, ಮೂಲ ಸೌಕರ್ಯಗಳ ಜತೆ ಸುರಕ್ಷತೆಯ ಬಗ್ಗೆ ಗಮನಹರಿಸಬೇಕು. ಪ್ರತ್ಯೇಕವಾದಂತಹ ಶೌಚಾಲಯ ವ್ಯವಸ್ಥೆ ಕಡ್ಡಾಯವಾಗಬೇಕು. ಉದ್ಯೋಗಕ್ಕೆ ಅವಕಾಶ ಇರುವ ವೃತ್ತಿ ತರಬೇತಿಗಳಿಗೆ ಪ್ರಾಮುಖ್ಯತೆ ಸಿಗಬೇಕು. ತಂತ್ರಜ್ಞಾನ ಬಳಸಿ ಮನೆ ಮನೆ ಸಮೀಕ್ಷೆಯ ಜತೆ ಪೋಷಕರ ಮನವೊಲಿಕೆಯೂ ನಡೆಯಬೇಕು. ಬಾಲಕಾರ್ಮಿಕ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಟ್ಟುನಿಟ್ಟಾಗಿ ಜಾರಿಯಾಗಬೇಕು. ಇದರಿಂದ ಪರಿಸ್ಥಿತಿ ಸುಧಾರಿಸೀತು.

ಶಿಕ್ಷಣವು ಮೂಲಭೂತ ಹಕ್ಕು ಎಂಬುದು ನಿಜ. ಅದರೊಂದಿಗೇ ಆರ್ಥಿಕ ಸ್ವಾವಲಂಬನೆ, ಸಮಾನತೆ ಸಾಧಿಸಲು, ಸ್ವಸ್ಥ ಸಮಾಜ ನಿರ್ಮಿಸಲು ಅದು ಪ್ರಮುಖ ಸಾಧನ ಎನ್ನುವ ತಿಳಿವಳಿಕೆ ಮೂಡಬೇಕು.

ವಾಚಕರ ವಾಣಿ

ಮೌಢ್ಯದ ಬೆನ್ನೇರಿ ಹೊರಟವರು...

ಸಚಿವರು, ಅಧಿಕಾರಿಗಳಿಗೆ ಒದಗಿಸುವ ಕಾರಿಗೆ ಸಂಖ್ಯಾಶಾಸ್ತ್ರದ ಪ್ರಕಾರ ಸರ್ಕಾರವು ಅದೃಷ್ಟ ಸಂಖ್ಯೆ 9ರ ಬೆನ್ನೇರಿರುವ ಸುದ್ದಿಯನ್ನು ಓದಿ (ಪ್ರ.ವಾ., ಜೂನ್ 13) ವಿಷಾದದ ನಗೆ ಬಂತು. ಹಿಂದೆ ಮೌಢ್ಯ ನಿಷೇಧ ಕಾಯ್ದೆ ಜಾರಿಗೆ ತಂದ ಕಾಂಗ್ರೆಸ್ ನೇತೃತ್ವದ ಸರ್ಕಾರದ ಇದೇ ಸಚಿವರು, ಮುಖ್ಯಮಂತ್ರಿಯವರು ಈಗ ಅದೃಷ್ಟ ಸಂಖ್ಯೆಯ ಬೆನ್ನೇರಿ ಹೊರಟಿರುವುದು ದೊಡ್ಡ ಮೌಢ್ಯ. ಗಣಿತದಲ್ಲಿ ಪ್ರತಿಯೊಂದು ಸಂಖ್ಯೆಯೂ ಸಮಾನ. ಯಾವುದೇ ಲೆಕ್ಕಾಚಾರದಲ್ಲಿ ಒಂದೇ ಒಂದು ಸಂಖ್ಯೆ ತಪ್ಪಾದರೂ ಅದರ ಲೆಕ್ಕವೇ ಬುಡಮೇಲಾದೀತು. ವಿಶೇಷ ಎಂದರೆ, ಎಲ್ಲಾ ಸಂಖ್ಯೆಗಳಿಗಿಂತ ಸೊನ್ನೆಗೆ ಹೆಚ್ಚು ಮಹತ್ವ. ಸೊನ್ನೆ ಎಂದರೆ ಶೂನ್ಯ, ಶೂನ್ಯ ಎಂದರೆ ಖಾಲಿ. ಅದೇ ಸೊನ್ನೆ ಇಲ್ಲದಿದ್ದರೆ ಇಡೀ ಗಣಿತವೇ ಇಲ್ಲವಾಗುತ್ತದೆ.

ಸಚಿವರು, ಅಧಿಕಾರಿಗಳು, ಉದ್ಯಮಿಗಳು, ಹಣವಂತರು ಇಂತಹ ಮೌಢ್ಯವನ್ನು ಧಿಕ್ಕರಿಸಬೇಕೆ ವಿನಾ ವೈಭವೀಕರಣ ಮಾಡಬಾರದು. ಪತ್ರಿಕೆಯ ಮೊದಲ ಪುಟದಲ್ಲಿ ಪ್ರಕಟವಾದ ಅಪೂರ್ಣ ಸುದ್ದಿಯ ಉಳಿದ ಭಾಗ 9ನೇ ಪುಟದಲ್ಲಿ ಮುಂದುವರಿದಿದ್ದು ಕಾಕತಾಳೀಯ ಇರಬಹುದು ಅನಿಸಿ ನಗು ಬಂತು!

ವಿ.ತಿಪ್ಪೇಸ್ವಾಮಿ, ಹಿರಿಯೂರು

ಪಠ್ಯದಲ್ಲಿ ಪಕ್ಷ ಸಿದ್ಧಾಂತ: ಚರ್ಚೆ ಅಗತ್ಯ

ಶಾಲೆಗಳಲ್ಲಿ ಈಗಾಗಲೇ ವಿವಾದಿತ ಪಠ್ಯಗಳ ಬೋಧನೆಯಾಗಿದ್ದು, ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ಈ ಕುರಿತು ಆಕ್ಷೇಪ ಬಂದಿದೆಯೇ ಎಂಬ ಮಾಹಿತಿಯನ್ನು ಶಿಕ್ಷಕರಿಂದ ಪಡೆದ ನಂತರವಷ್ಟೇ ಇಂದಿನ ಸರ್ಕಾರ ವಿವಾದಿತ ಪಠ್ಯಗಳನ್ನು ಕೈಬಿಡುವ ತೀರ್ಮಾನ ತೆಗೆದುಕೊಳ್ಳಬೇಕಿತ್ತು ಎಂಬ ಸಾಮಗ ದತ್ತಾತ್ರಿ ಅವರ ಅಭಿಪ್ರಾಯ (ವಾ.ವಾ., ಜೂನ್ 9) ಒಪ್ಪುವಂಥದ್ದು. ಆದರೆ ಅಂದಿನ ಬಿಜೆಪಿ ನೇತೃತ್ವದ ಸರ್ಕಾರವೂ ಪಠ್ಯ ಪರಿಷ್ಕರಣೆ ಮಾಡಿ ಪುಸ್ತಕಗಳು ವಿದ್ಯಾರ್ಥಿಗಳ ಕೈ ಸೇರುವ ಮುಂಚಿತವಾಗಿ, ಪಠ್ಯಗಳ ಬಗ್ಗೆ ಶಿಕ್ಷಕರಿಂದ ಮಾಹಿತಿ ಪಡೆಯಬಹುದಾಗಿತ್ತು ಅಲ್ಲವೇ? ಪಠ್ಯಪುಸ್ತಕಗಳು ಪಕ್ಷ ಪುಸ್ತಕಗಳಾಗಬಾರದು ಎಂಬ ಸಲಹೆ ನೀಡಿದ್ದ ಶಿಕ್ಷಣ ತಜ್ಞರೊಂದಿಗೆ ಕೂಡ ಚರ್ಚೆ ನಡೆಸಬಹುದಿತ್ತು ಅಲ್ಲವೇ?

ರಾಜಕೀಯ ತತ್ವ, ಸಿದ್ಧಾಂತಗಳು ಶಿಕ್ಷಣ ಕ್ಷೇತ್ರದಲ್ಲಿ ತೂರಬಾರದು ಎಂಬ ಸಲಹೆ ಸರಿ. ಆದರೆ ಸರ್ಕಾರ ಇನ್ನೂ ಪಠ್ಯ ಪರಿಷ್ಕರಣೆ ಕಾರ್ಯ ಆರಂಭಿಸದೇ ಇರುವಾಗ, ಪಕ್ಷದ ಸಿದ್ಧಾಂತಗಳನ್ನು ಪಠ್ಯದಲ್ಲಿ ಸೇರಿಸಬಹುದು ಎಂಬ ಆತಂಕವೇಕೆ? ಬದಲಾಗಿ, ಸದ್ಯ ಇರುವ ಪಠ್ಯಗಳು ಪಕ್ಷ ಸಿದ್ಧಾಂತವನ್ನು ಹೊಂದಿವೆಯೇ ಎಂದು ಶಿಕ್ಷಣ ತಜ್ಞರು, ಆಸಕ್ತರು ಹಾಗೂ ಪೋಷಕರೊಂದಿಗೆ ಚರ್ಚಿಸುವುದು ಉತ್ತಮ ಬೆಳವಣಿಗೆಯಾದೀತು.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಗೌರವಧನ ಶೀಘ್ರ ಬಿಡುಗಡೆಯಾಗಲಿ

ಕಲಬುರಗಿಯಲ್ಲಿ ಫೆಬ್ರುವರಿಯಲ್ಲಿ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ಉತ್ಸವವು ಮೂರು ದಿನಗಳ ಕಾಲ ಅದ್ಧೂರಿಯಾಗಿ ನಡೆದದ್ದು, ಉತ್ಸವದಲ್ಲಿ ಸಾಹಿತ್ಯಕ್ಕೆ ಪ್ರತ್ಯೇಕವಾಗಿ ಕಾರ್ಯಕ್ರಮವನ್ನು ಆಯೋಜಿಸಿದ್ದು ಶ್ಲಾಘನೀಯ ವಿಚಾರ. ಅದರಂತೆ ಸಾಹಿತ್ಯಿಕ ಕಾರ್ಯಕ್ರಮದಲ್ಲಿ ಹಿರಿಯರ ಕವಿಗೋಷ್ಠಿ, ಯುವ ಕವಿಗೋಷ್ಠಿ ಹಾಗೂ ಗಝಲ್ ಗೋಷ್ಠಿ ಏರ್ಪಡಿಸಲಾಗಿತ್ತು. ಇವುಗಳಲ್ಲಿ ಭಾಗವಹಿಸಿದ್ದ ಬಹುತೇಕ ಕವಿಗಳಿಗೆ ಗೌರವಧನ ತಲುಪಿದೆಯಾದರೂ ಕೆಲವರಿಗೆ ಈವರೆಗೂ ತಲುಪಿಲ್ಲ.

ಕೇಳಿದರೆ, ‘ಎಸ್‌ಬಿಐ ಬ್ಯಾಂಕ್ ಖಾತೆಗಳಿಗೆ ಹಣ ಸಂದಾಯ ಮಾಡಿದ್ದೇವೆ, ಆದರೆ ಬೇರೆ ಬ್ಯಾಂಕಿನ ಖಾತೆಗಳಿಗೆ ತಲುಪಿಸಲಾಗಿಲ್ಲ. ಅವರಿಗೆ ಪೋಸ್ಟ್ ಮುಖಾಂತರ ಕಳಿಸುತ್ತೇವೆ’ ಎಂಬ ಉತ್ತರ ನೀಡಲಾಗುತ್ತಿತ್ತು. ಈಗ, ‘ಅರ್ಧದಷ್ಟು ಹಣ ಮಾತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಂಜೂರಾಗಿತ್ತು. ಇನ್ನೂ ಅರ್ಧದಷ್ಟು ಮಂಜೂರಾಗಿಲ್ಲ’ ಎಂಬ ಹಾರಿಕೆಯ ಉತ್ತರ ದೊರೆಯುತ್ತಿದೆ. ನಿಜವಾಗಿಯೂ ಇಲಾಖೆ ಇನ್ನೂ ಹಣ ಬಿಡುಗಡೆ ಮಾಡಿಲ್ಲವೇ ಎಂಬುದು ತಿಳಿಯುತ್ತಿಲ್ಲ. ಆಹ್ವಾನದ ಮೇರೆಗೆ ಈ ಗೋಷ್ಠಿಗಳಲ್ಲಿ ಕವಿಗಳು ಭಾಗವಹಿಸಿದ್ದರು. ಗೌರವಧನವನ್ನು ಗೌರವ ಬಿಟ್ಟು ಬೇಡುವ ಪರಿಸ್ಥಿತಿ ಬಾರದಂತೆ ಸರ್ಕಾರ ಶೀಘ್ರ ಹಣ ಬಿಡುಗಡೆ ಮಾಡಲಿ.

ವಿಶಾಲ್ ಮ್ಯಾಸರ್, ಹೊಸಪೇಟೆ

ನಮ್ಮಲ್ಲೂ ಆತ್ಮಗೌರವ ಇರಬೇಡವೇ?

ಚುನಾವಣೆಯಲ್ಲಿ ಜಯ ಗಳಿಸಲು ಕಾಂಗ್ರೆಸ್ ಪಕ್ಷವು ಐದು ಗ್ಯಾರಂಟಿಗಳ ವಚನ ಕೊಟ್ಟಿತು. ಗೆದ್ದುಬಂದ ಒಂದು ತಿಂಗಳಲ್ಲಿ ಕಾರ್ಯಗತಗೊಳಿಸಿರುವುದಾಗಿ ತನ್ನ ಬೆನ್ನನ್ನು ಚಪ್ಪರಿಸಿಕೊಂಡು ಬೀಗಿದೆ. ಕನ್ನಡಿಗರಾದ ನಾವೆಲ್ಲರೂ ಮೌನವಾಗಿದ್ದು, ಈ ಗ್ಯಾರಂಟಿಗಳನ್ನು ಪಡೆದುಕೊಳ್ಳಲು ದೈನ್ಯಭಾವದಿಂದ ನಿಲ್ಲಬೇಕೆ? ನಮ್ಮಲ್ಲೂ ಆತ್ಮಗೌರವ ಇದೆಯಲ್ಲ! ವಿಳಂಬವಾದರೂ ಇವಕ್ಕೆ ಪರ್ಯಾಯ ಚಿಂತನೆಗಳನ್ನು ಮಾಡಬೇಕಾದ ಅಗತ್ಯವಿದೆ.

ಚಾರ್ಜ್ ಇಲ್ಲದೇ ಮಹಿಳೆಯರು ಪಯಣಿಸುವ ಬದಲು ಅರ್ಧ ಚಾರ್ಜನ್ನು ಕೊಟ್ಟು ಪಯಣಿಸೋಣ. ನಿರುದ್ಯೋಗಿ ಯುವಕರಿಗೆ ಕೊಡುವ ಧನಸಹಾಯದ ಬದಲಾಗಿ ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳು, ಶಾಲೆಗಳು, ನಗರಪಾಲಿಕೆಗಳು, ಗ್ರಾಮ ಪಂಚಾಯಿತಿಗಳಲ್ಲಿ ನೌಕರಿ ಖಾತರಿ ಪಡೆಯೋಣ. ವೃದ್ಧಾಶ್ರಮದಲ್ಲಿಯ ನಿರ್ಗತಿಕ ತಾಯಂದಿರಿಗೆ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ, ಗ್ರಾಮೀಣ ಪ್ರದೇಶದಲ್ಲಿಯ ಅನಾಥ ತಾಯಂದಿರಿಗೆ ಗೃಹಲಕ್ಷ್ಮಿ ಯೋಜನೆಯ ₹ 2,000 ಸಹಾಯಧನ ಇರಲಿ. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರಿಗೆ, ಅನಾಥಾಶ್ರಮಗಳಿಗೆ 200 ಯುನಿಟ್‌ವರೆಗೆ ಉಚಿತ ವಿದ್ಯುತ್‌ನ ರಿಯಾಯಿತಿ ಇರಲಿ. ಬಿಪಿಎಲ್ ಕಾರ್ಡ್‌ದಾರರಿಗೆ 5 ಕೆ.ಜಿ. ಬದಲಾಗಿ 10 ಕೆ.ಜಿ. ಬೇಡ. ಬದಲಾಗಿ 5 ಕೆ.ಜಿ. ಅಕ್ಕಿಯನ್ನು ಅನಾಥಾಶ್ರಮಗಳಿಗೆ, ಅಂಗವಿಕಲರಿಗೆ, ನಿರ್ಗತಿಕರಿಗೆ ಕೊಡೋಣ.

ಬಡವರಾದರೇನು ನಮ್ಮಲ್ಲೂ ಆತ್ಮಾಭಿಮಾನವಿದೆ. ಜನಸಾಮಾನ್ಯರಿಗೆ ಸಹಾಯ ನೀಡಲೆಂದೇ ಸರ್ಕಾರ ಇರುವುದು. ಆದರೆ ಸ್ವಾರ್ಥಕ್ಕಾಗಿ ಜನರಲ್ಲಿ ದೈನ್ಯತೆಯನ್ನುಂಟು ಮಾಡುವ ಇಂಥ ತಂತ್ರಗಳನ್ನು ಆತ್ಮಗೌರವದ ಕನ್ನಡಿಗರಾರೂ ಒಪ್ಪಿಕೊಳ್ಳಲಾರರು. ಈ ಐದು ಗ್ಯಾರಂಟಿಗಳ ಬಗ್ಗೆ ಪುನರ್‌ಚಿಂತನೆ ಆಗಲೇಬೇಕು. ಗೌರವ ಕೊಟ್ಟು ಗೌರವ ಪಡೆಯುವುದು ನಮ್ಮ ನಡೆ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೋವಿನ್ ಮಾಹಿತಿ ಸೋರಿಕೆ: ಏನು, ಎತ್ತ...

ಸರ್ಕಾರದ ವಿವಿಧ ಇಲಾಖೆಗಳು ಮತ್ತು ಪೋರ್ಟಲ್‌ಗಳಲ್ಲಿ ಸಂಗ್ರಹಿಸಲಾಗಿರುವ ಸಾರ್ವಜನಿಕರ ದತ್ತಾಂಶಗಳು ಭದ್ರತೆಯ ಅಪಾಯವನ್ನು ಎದುರಿಸುತ್ತಲೇ ಇವೆ. ಸರ್ಕಾರದ ಬಳಿ ಇರುವ ಇಂತಹ ದತ್ತಾಂಶಗಳಿಗೆ ಹಲವು ಬಾರಿ ಕನ್ನ ಹಾಕಲಾಗಿದೆ. ಈಗ ಕೋವಿಡ್ ಪೋರ್ಟಲ್‌ನ ಸರದಿ. ಸಾರ್ವಜನಿಕರ ದತ್ತಾಂಶ ಕಳ್ಳತನವಾಗುವುದು ಅಥವಾ ಸೋರಿಕೆಯಾಗವುದು ಅವರ ಖಾಸಗಿತನದ ಉಲ್ಲಂಘನೆಯೇ ಸರಿ. ಮೊಬೈಲ್ ನಂಬರ್, ಆಧಾರ್ ಸಂಖ್ಯೆ, ಪ್ಯಾನ್ ಸಂಖ್ಯೆ ಸೋರಿಕೆಯಾದರೆ ಏನಾಗುತ್ತದೆ ಎಂಬ ಪ್ರಶ್ನೆಯೂ ಸಾಮಾನ್ಯವಾಗಿ ಕೇಳಿಬರುತ್ತದೆ. ಆದರೆ, ಸಾರ್ವಜನಿಕರ ದತ್ತಾಂಶಗಳು ಆರ್ಥಿಕ ಅಪರಾಧಗಳು, ಸಾರ್ವಜನಿಕ ಸ್ವಾಸ್ಥ್ಯಕ್ಕೆ ಧಕ್ಕೆ ತರಲು, ದೇಶದ ವಿರುದ್ಧ ಸಂಚು ರೂಪಿಸಲು ಬಳಕೆಯಾಗಬಹುದು. ದತ್ತಾಂಶ ಸೋರಿಕೆಯಾದವರು, ತಾವು ಮಾಡದೇ ಇರುವ ಸಾಲವನ್ನು ತೀರಿಸಬೇಕಾಗಬಹುದು ಅಥವಾ ತಾವು ಮಾಡದೇ ಇರುವ ಕೃತ್ಯಕ್ಕೆ ಶಿಕ್ಷೆ ಎದುರಿಸುವ ಸ್ಥಿತಿಯೂ ಬರಬಹುದು

ಪ್ರಜಾವಾಣಿ ವಾರ್ತೆ

ಕೋವಿಡ್ ಲಸಿಕೆ ನೀಡಲು ಕೇಂದ್ರ ಸರ್ಕಾರವು ರೂಪಿಸಿದ್ದ ಕೋವಿನ್ ಪೋರ್ಟಲ್‌ನಲ್ಲಿ ಇರುವ ಕೋಟ್ಯಂತರ ಭಾರತೀಯರ ಖಾಸಗಿ ಮಾಹಿತಿಗಳು ಸೋರಿಕೆಯಾಗಿವೆ. ಕೋವಿಡ್ ಲಸಿಕೆ ಪಡೆದ ಬಳಿಕ ಸರ್ಕಾರ ನೀಡುವ ಪ್ರಮಾಣಪತ್ರಗಳು ಸೇರಿದಂತೆ ಕೋವಿಡ್ ಲಸಿಕೆಗೆ ಸಂಬಂಧಿಸಿದ ಹಲವು ಮಾಹಿತಿಗಳು ಈ ಪೋರ್ಟಲ್‌ನಲ್ಲಿ ಲಭ್ಯವಿವೆ.

ಲಸಿಕೆಗಾಗಿ ನೋಂದಾಯಿಸಿಕೊಳ್ಳಲು ನಾಗರಿಕರಿಂದ ಕಡ್ಡಾಯವಾಗಿ ಆಧಾರ್ ಕಾರ್ಡ್ ಸಂಖ್ಯೆ/ಪ್ಯಾನ್ ಕಾರ್ಡ್ ಸಂಖ್ಯೆ/ಪಾಸ್‌ಪೋರ್ಟ್ ಸಂಖ್ಯೆ, ಹುಟ್ಟಿದ ದಿನಾಂಕ, ವಿಳಾಸ, ಮೊಬೈಲ್ ಸಂಖ್ಯೆ ಹೀಗೆ ಎಲ್ಲದರ ಮಾಹಿತಿಯನ್ನೂ ಸರ್ಕಾರ ಪಡೆದುಕೊಂಡಿದೆ. ಈ ಕೆಲವು ವಿವರಗಳು ಲಸಿಕೆ ಪಡೆದುಕೊಂಡವರ ಪ್ರಮಾಣಪತ್ರದಲ್ಲೂ ನಮೂದಾಗಿವೆ. ಈ ಮಾಹಿತಿಗಳು ಈಗ ಸೋರಿಕೆಯಾಗಿವೆ.

ಐಟಿ ಕಂಪನಿ ಉದ್ಯೋಗಿ ರಾಕೇಶ್ ಕೃಷ್ಣನ್ ಎಂಬವರು ಜೂನ್ 5ರಂದು ಮೊದಲು ಈ ರೀತಿಯ ಸೋರಿಕೆ ಕುರಿತು ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಂಡರು. ನಂತರ ಜೂನ್ 12ರಂದು ಮಲಯಾಳದ ಸುದ್ದಿ ಸಂಸ್ಥೆಯೊಂದು ಈ ಕುರಿತು ವರದಿ ಮಾಡಿತು. ನಂತರ ರಾಷ್ಟ್ರ ಮಟ್ಟದ ಹಲವು ಸುದ್ದಿವಾಹಿನಿಗಳು ಈ ಕುರಿತು ವರದಿ ಮಾಡಿದವು.



ಸೋರಿಕೆಯಾದದ್ದು ಹೇಗೆ?: ಟೆಲಿಗ್ರಾಂನ ಗ್ರೂಪ್ ಒಂದರಲ್ಲಿ ಕೋವಿನ್‌ನ ಮಾಹಿತಿಗಳು ಸೋರಿಕೆಯಾಗಿವೆ. ಈ ಗ್ರೂಪ್‌ನ ಸದಸ್ಯರಾದವರಿಗೆ ಮಾತ್ರ ಆ ಮಾಹಿತಿ ಲಭ್ಯವಾಗಿದೆ. ಕೋವಿನ್‌ಗೆ ಸಂಬಂಧಿಸಿದ ಮಾಹಿತಿ ನೀಡುವಂತೆ ಈ ಗ್ರೂಪ್‌ನ ಬಾಟ್‌ಗೆ ಸೂಚಿಸಿದರೆ, ಅದು 'ಮೊಬೈಲ್ ಸಂಖ್ಯೆ' ನೀಡುವಂತೆ ಸೂಚಿಸುತ್ತಿತ್ತು. ಮೊಬೈಲ್ ಸಂಖ್ಯೆ ನಮೂದಿಸಿದಾಗ, ಆ ಮೊಬೈಲ್ ಸಂಖ್ಯೆಗೆ ಸಂಬಂಧಿಸಿದ ಕೋವಿನ್ ದತ್ತಾಂಶಗಳನ್ನು ನೀಡುತ್ತಿತ್ತು. ಯಾರದೇ ಮೊಬೈಲ್ ಸಂಖ್ಯೆ ನಮೂದಿಸಿದರು ಆ ಮೊಬೈಲ್ ಸಂಖ್ಯೆಯಲ್ಲಿ ಲಸಿಕೆ ಪಡೆಯಲು ನೋಂದಣಿ ಮಾಡಿಕೊಂಡಿದ್ದವರ ವಿವರ, ಆಧಾರ್ ಅಥವಾ ಪ್ಯಾನ್ ಸಂಖ್ಯೆ, ಪಾಸ್‌ಪೋರ್ಟ್ ಸಂಖ್ಯೆಯನ್ನೂ ಅದು ನೀಡುತ್ತಿತ್ತು. ಕೋವಿನ್ ದತ್ತಾಂಶ ಸೋರಿಕೆಯಾದ ಸುದ್ದಿ ಜೋರಾದ ನಂತರ ಈಗ ಆ ಗ್ರೂಪ್ ಅನ್ನು ನಿಷ್ಕ್ರಿಯಗೊಳಿಸಲಾಗಿದೆ.

ತೆಲಂಗಾಣದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಸಚಿವ ಕೆ.ಟಿ. ರಾಮರಾವ್, ಡಿಎಂಕೆ ಸಂಸದೆ ಕನಿಮೊಳಿ, ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ, ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ, ಬಿಜೆಪಿ ನಾಯಕ, ಕೇಂದ್ರದ ಮಾಜಿ ಆರೋಗ್ಯ ಸಚಿವ ಹರ್ಷವರ್ಧನ್ ಅವರ ಮಾಹಿತಿಗಳು ಸೇರಿ ಹಲವು ನಾಯಕ ಮಾಹಿತಿಗಳನ್ನು ಈ ಬಾಟ್ ಮೂಲಕ ಪಡೆದುಕೊಳ್ಳಲಾಗಿದೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಅವರ ಮಾಹಿತಿಯೂ ದೊರೆತಿದೆ.

ಒಂದೇ ಮೊಬೈಲ್ ಸಂಖ್ಯೆಯಲ್ಲಿ ಪೋರ್ಟಲ್‌ನಲ್ಲಿ ನೋಂದಣಿಯಾಗಿದ್ದ ಹಲವರ ಮಾಹಿತಿಗಳೂ ಈ ಬಾಟ್‌ನಲ್ಲಿ ಲಭ್ಯವಿದ್ದವು. ಕನಿಮೊಳಿ ಅವರ ಮಾಹಿತಿಯ ಜೊತೆಗೆ ಅವರ ಮಗನ ಪಾಸ್‌ಪೋರ್ಟ್ ಸಂಖ್ಯೆಯೂ ಈ ಬಾಟ್ ಮೂಲಕ ದೊರೆತಿದೆ.

ಕ್ರಮ ಕೈಗೊಳ್ಳದ ಸರ್ಕಾರ: ಕೋವಿನ್ ಪೋರ್ಟಲ್‌ನಲ್ಲಿ ಮಾಹಿತಿ ಸೋರಿಕೆಯಾಗುತ್ತಿದೆ ಎಂದು ಮೊದಲು ಬಹಿರಂಗ ಪಡಿಸಿದ ರಾಕೇಶ್ ಕೃಷ್ಣನ್ ಅವರು ಈ ಪೋರ್ಟಲ್‌ನ ದತ್ತಾಂಶಗಳನ್ನು ಮಾರಾಟಕ್ಕೆ ಇಟ್ಟ ಹ್ಯಾಕರ್‌ನೊಂದಿಗೆ ಮಾತನಾಡಿದ್ದಾರೆ. 'ನನಗೆ ಕಳೆದ ವರ್ಷವೇ ಈ ಮಾಹಿತಿಗಳು ದೊರೆತಿವೆ. ಈ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೂ ಮಾಹಿತಿ ನೀಡಿದ್ದೆ. ಆದರೆ, ಸರ್ಕಾರವು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈಗ ನಾನು ಈ ಮಾಹಿತಿಯನ್ನು ಮತ್ತೊಮ್ಮೆ ಮಾರಾಟಕ್ಕೆ ಇಟ್ಟಿದ್ದೇನೆ. ಕ್ರಿಪ್ಟೊಕರೆನ್ಸಿ ಮೂಲಕವೇ ನಾನು ಹಣ ಪಡೆಯುತ್ತೇನೆ' ಎಂದು ಹ್ಯಾಕರ್ ಹೇಳಿರುವುದಾಗಿ ರಾಕೇಶ್ ಹೇಳಿದ್ದಾರೆ. ಈ ಬಗ್ಗೆ ಫೋಬ್ಸ್ ನಿಯತಕಾಲಿಕ ವರದಿ ಮಾಡಿದೆ.

ಖಾಸಗಿತನಕ್ಕೆ ಧಕ್ಕೆ

ಯಾವುದೇ ವ್ಯಕ್ತಿಯ ವೈಯಕ್ತಿಕ ವಿವರಗಳು, ಸಂಪರ್ಕ ಮಾಹಿತಿ, ಆಸಕ್ತಿಗಳು, ಹಣಕಾಸು ಸ್ಥಿತಿಗತಿಗೆ ಸಂಬಂಧಿಸಿದ ವಿವರಗಳನ್ನು ಆತನ ಒಪ್ಪಿಗೆ ಇಲ್ಲದೇ ಬಳಸುವಂತಿಲ್ಲ. ಯಾವುದೇ ಸಂಸ್ಥೆ ಅಥವಾ ಸರ್ಕಾರದ ಇಲಾಖೆಗೆ ಇಂತಹ ವಿವರಗಳನ್ನು ಆ ವ್ಯಕ್ತಿ ಸಲ್ಲಿಸಿದ್ದರೆ, ಅದರ ಗೌಪ್ಯತೆಯನ್ನು ಕಾಪಾಡುವ ಹೊಣೆ ಆ ಸಂಸ್ಥೆಯದ್ದಾಗಿರುತ್ತದೆ. ಅಲ್ಲಿಂದ ಮಾಹಿತಿ ಮೂರನೇ ಸಂಸ್ಥೆಗೆ ಅಥವಾ ವ್ಯಕ್ತಿಗೆ ಲಭ್ಯವಾದರೆ ಅದು ದತ್ತಾಂಶ ಸೋರಿಕೆಯಾಗುತ್ತದೆ. ಇದು ಆ ವ್ಯಕ್ತಿಯ ಖಾಸಗಿತನದ ಹಕ್ಕಿನ ಉಲ್ಲಂಘನೆಯಾಗುತ್ತದೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಪ್ರಕಾರ ಈ ರೀತಿಯ ದತ್ತಾಂಶಗಳನ್ನು ಭದ್ರವಾಗಿ ಇಡುವುದು, ಅದನ್ನು ಸಂಗ್ರಹಿಸಿರುವ ಸಂಸ್ಥೆಯ ಹೊಣೆಯೇ ಆಗಿದೆ. ಅದನ್ನು ಉಲ್ಲಂಘಿಸಿದರೆ, ಕಾನೂನು ಕ್ರಮಗಳನ್ನು ಎದುರಿಸಬೇಕಾಗುತ್ತದೆ. ಇನ್ನು ದೇಶದಲ್ಲಿ ದತ್ತಾಂಶ ರಕ್ಷಣಾ ಕಾನೂನುಗಳನ್ನು ಕಠಿಣಗೊಳಿಸಲು ಸರ್ಕಾರ ಮುಂದಾಗಿದೆ. ಈ ಸಂಬಂಧ ಈಗಾಗಲೇ ಮಸೂದೆ ಸಿದ್ಧವಾಗಿದೆಯಾದರೂ, ಅದಕ್ಕೆ ಇನ್ನೂ ಅನುಮೋದನೆ ದೊರೆತಿಲ್ಲ.



ಕೋವಿನ್‌ನಿಂದ ನೇರವಾಗಿ ಸೋರಿಕೆಯಾಗಿಲ್ಲ: ಕೇಂದ್ರ ಸಮರ್ಥನೆ

ಈಗ ಸೋರಿಕೆಯಾಗಿದೆ ಎಂದು ಹೇಳಲಾಗುತ್ತಿರುವ ಮಾಹಿತಿಯು, ಕೋವಿನ್ ಪೋರ್ಟಲ್‌ನಿಂದ ನೇರವಾಗಿ ಸೋರಿಕೆಯಾಗಿಲ್ಲ. ಕೋವಿನ್ ದತ್ತಾಂಶ ಸುರಕ್ಷತಾ ವ್ಯವಸ್ಥೆ ಚೆನ್ನಾಗಿದೆ ಎಂದು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದೆ. ಕೋವಿನ್ ಪೋರ್ಟಲ್‌ನಿಂದ ನೇರವಾಗಿ ದತ್ತಾಂಶ ಸೋರಿಕೆಯಾಗಿಲ್ಲ ಎಂದು ಸರ್ಕಾರ ಹೇಳಿದ್ದರೂ, ಆ ಬಗ್ಗೆ ತನಿಖೆ ನಡೆಸಲು ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್‌ಗೆ (ಸಿಇಆರ್‌ಟಿ) ಸೂಚಿಸಿದೆ. ಸರ್ಕಾರದ ಈ ನಡೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಪ್ರಶ್ನಿಸಿದ್ದಾರೆ.

'ಟೆಲಿಗ್ರಾಂನ ಬಾಟ್‌ನಲ್ಲಿ ದೊರೆತಿರುವ ಮಾಹಿತಿಯು ಕೋವಿನ್ ಪೋರ್ಟಲ್‌ನಿಂದ ಕದ್ದ ಮಾಹಿತಿಯಲ್ಲ. ಈ ಹಿಂದೆಯೇ ಕದ್ದಿದ್ದ ಮಾಹಿತಿಯನ್ನು ಈಗ ನೀಡಲಾಗುತ್ತಿದೆ. ಆದ್ದರಿಂದ ಈಗ ಬಹಿರಂಗವಾಗಿರುವ ಮಾಹಿತಿಯು ಕೋವಿನ್ ಪೋರ್ಟಲ್‌ನಿಂದ ನೇರವಾಗಿ ಕದ್ದದ್ದಲ್ಲ' ಎಂದು ಮಾಹಿತಿ ತಂತ್ರಜ್ಞಾನ ರಾಜ್ಯ ಖಾತೆ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ. ಆದರೆ, ಟೆಲಿಗ್ರಾಂನ ಒಂದು ಗ್ರೂಪ್‌ಗೆ ಈ ಮಾಹಿತಿಗಳು ಲಭ್ಯವಾಗಿದ್ದು ಹೇಗೆ ಎಂಬುದನ್ನು ಸರ್ಕಾರ ವಿವರಿಸಿಲ್ಲ.

ನಾಗರಿಕರ ಖಾಸಗಿ ಮಾಹಿತಿಗಳು ಸೋರಿಕೆಯಾಗಿವೆ ಎನ್ನುವುದು ಸಂಪೂರ್ಣವಾಗಿ ಆಧಾರರಹಿತ ಸುದ್ದಿ ಎಂದಿರುವ ಕೇಂದ್ರ ಸರ್ಕಾರ, ಈ ಎಲ್ಲಾ ವರದಿಗಳನ್ನು ನಿರಾಕರಿಸಿದೆ. ಕೋವಿನ್ ಪೋರ್ಟಲ್‌ನಲ್ಲಿ ಇರುವ ನಾಗರಿಕರ ಎಲ್ಲ ಮಾಹಿತಿಗಳು ಸಂಪೂರ್ಣ ಸುರಕ್ಷಿತ ಎಂದೂ ಸರ್ಕಾರ ಹೇಳಿದೆ.

ಯಾರದೇ ಮಾಹಿತಿಯನ್ನು ಕೋವಿನ್ ಪೋರ್ಟಲ್ ಮೂಲಕ ಪಡೆಯಬೇಕು ಎಂದಾದರೆ ಒಟಿಪಿ ಅಗತ್ಯ ಇರುತ್ತದೆ. ನಮೂದಿತ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ. ಒಟಿಪಿ ನೀಡಿದರೆ ಮಾತ್ರವೇ ಮಾಹಿತಿಗಳು ಸಿಗುತ್ತದೆ. ಆದ್ದರಿಂದ ಪೋರ್ಟಲ್‌ನಲ್ಲಿ ಇರುವ ಎಲ್ಲಾ ಮಾಹಿತಿಗಳು ಸುರಕ್ಷಿತ ಎಂದಿದೆ ಸರ್ಕಾರ.

ಒಟಿಪಿ ಇಲ್ಲದೆ ಯಾವ ಮಾಹಿತಿಯನ್ನು ಪಡೆದುಕೊಳ್ಳಲು ಬರುವುದಿಲ್ಲ ಎಂದು ಕೋವಿನ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿರುವ ತಂಡವು ಸ್ಪಷ್ಟಪಡಿಸಿದೆ ಎಂದು ಕೇಂದ್ರ ಹೇಳಿದೆ. ಜೊತೆಗೆ, ಪೋರ್ಟಲ್‌ನಲ್ಲಿರುವ ಮಾಹಿತಿಗಳನ್ನು ಹಂಚಿಕೊಳ್ಳಲು ಕೆಲವು ಎಪಿಐಗಳನ್ನು (ಅಪ್ಲಿಕೇಷನ್ ಪ್ರೋಗ್ರಾಮಿಂಗ್ ಇಂಟರ್‌ಫೇಸ್) ಐಸಿಎಂಆರ್‌ಗೆ ನೀಡಲಾಗಿದೆ. ಅಂಥ ಎಪಿಐಗಳಲ್ಲಿ ಒಂದರಲ್ಲಿ, ಮೊಬೈಲ್ ಸಂಖ್ಯೆ ಅಥವಾ ಆಧಾರ್ ಸಂಖ್ಯೆಯನ್ನಷ್ಟೇ ನೀಡಿ ಮಾಹಿತಿ ಪಡೆದುಕೊಳ್ಳುವ ಅವಕಾಶವಿದೆ ಎಂಬುದು ಗೊತ್ತಾಗಿದೆ ಎಂದೂ ಕೇಂದ್ರ ಹೇಳಿದೆ.

'ಸರ್ಕಾರದ 50 ಜಾಲತಾಣಗಳು ಹ್ಯಾಕ್'

ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ಸೇರಿದ 50 ಜಾಲತಾಣಗಳನ್ನು 2022ರಲ್ಲಿ ಹ್ಯಾಕ್ ಮಾಡಲಾಗಿತ್ತು. ಜತೆಗೆ ಸರ್ಕಾರದ ದತ್ತಾಂಶಗಳನ್ನು ಕದ್ದ ಎಂಟು ಪ್ರಕರಣಗಳು ವರದಿಯಾಗಿದ್ದವು ಎಂದು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಗೆ ಮಾಹಿತಿ ನೀಡಿದ್ದರು.

59 — 2020ರಲ್ಲಿ ಹ್ಯಾಕ್‌ಗೆ ಗುರಿಯಾಗಿದ್ದ ಸರ್ಕಾರದ ಜಾಲತಾಣಗಳ ಸಂಖ್ಯೆ

42 — 2021ರಲ್ಲಿ ಹ್ಯಾಕ್‌ಗೆ ಗುರಿಯಾಗಿದ್ದ ಸರ್ಕಾರದ ಜಾಲತಾಣಗಳ ಸಂಖ್ಯೆ

ದುರ್ಬಳಕೆಗೆ ನಾನಾ ರೂಪಗಳು

ಸರ್ಕಾರದ ಸರ್ವರ್‌ಗಳಿಂದಾಗಲೀ ಅಥವಾ ಖಾಸಗಿ ಕಂಪನಿಗಳ ಸರ್ವರ್‌ಗಳಿಂದಾಗಲೀ ಅಥವಾ ಬಳಕೆದಾರರ ಮೊಬೈಲ್/ಲ್ಯಾಪ್‌ಟಾಪ್/ಕಂಪ್ಯೂಟರ್‌ಗಳಿಂದಾಗಲೀ ಕದಿಯಲಾದ ದತ್ತಾಂಶಗಳನ್ನು ಹಲವು ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳಬಹುದು. ಸೋರಿಕೆಯಾದ ಅಥವಾ ಕದಿಯಲಾದ ದತ್ತಾಂಶಗಳನ್ನು ಹೇಗೆಲ್ಲಾ ದುರ್ಬಳಕೆ ಮಾಡಿಕೊಳ್ಳಲಾಗುತ್ತದೆ ಎಂಬುದಕ್ಕೆ ಹಲವು ನಿದರ್ಶನಗಳಿವೆ

ಹಣಕ್ಕಾಗಿ ದತ್ತಾಂಶ ಒತ್ತೆ

ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಏಮ್ಸ್) ಸರ್ವರ್ ಅನ್ನು ಹ್ಯಾಕರ್‌ಗಳು 2022ರಲ್ಲಿ ಹ್ಯಾಕ್ ಮಾಡಿದ್ದರು. ಇಡೀ ಸರ್ವರ್‌ನಲ್ಲಿದ್ದ ದತ್ತಾಂಶಗಳನ್ನು ಏಮ್ಸ್‌ನ ಯಾವ ಬಳಕೆದಾರರಿಗೂ ಸಿಗದಂತೆ ಅಳಿಸಿ ಹಾಕಿದ್ದರು. ಈ ದತ್ತಾಂಶಗಳನ್ನು ವಾಪಸ್ ನೀಡಬೇಕೆಂದರೆ, ಹಣಕ್ಕಾಗಿ ಬೇಡಿಕೆ ಇಡಲಾಗಿತ್ತು. 15 ದಿನಗಳವರೆಗೆ ಈ ಸಮಸ್ಯೆ ಮುಂದುವರಿದಿತ್ತು.

ಏಮ್ಸ್ ಸರ್ವರ್‌ನಲ್ಲಿ ಲಕ್ಷಾಂತರ ರೋಗಿಗಳ ವೈಯಕ್ತಿಕ ಮಾಹಿತಿ, ಆರೋಗ್ಯಕ್ಕೆ ಸಂಬಂಧಿಸಿದ ರಹಸ್ಯ ಮಾಹಿತಿ, ವಿಮಾ ವಿವರಗಳು, ಆರ್ಥಿಕ ವಿವರಗಳು, ಸಂಪರ್ಕ ವಿವರಗಳನ್ನು ಸಂಗ್ರಹಿಸಿ ಇಡಲಾಗಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ರೋಗಿಗಳ ಆರೋಗ್ಯ ಸ್ಥಿತಿಗತಿಯ ವರದಿಗಳೂ ಈ ಸರ್ವರ್‌ನಲ್ಲಿ ಇದ್ದವು. ಒಟ್ಟಾರೆ ಈ ಎಲ್ಲಾ ದತ್ತಾಂಶಗಳು ಲಭ್ಯವಿಲ್ಲದಿದ್ದ ಸಮಯದಲ್ಲಿ ಚಿಕಿತ್ಸೆ ಮುಂದುವರಿಸುವುದು ಕಷ್ಟವಾಗಿತ್ತು. ರೋಗಿಗಳ ಬಳಿಯಲ್ಲಿದ್ದ ಭೌತಿಕ ಪ್ರತಿಗಳನ್ನು ಬಳಸಿಕೊಂಡು ಚಿಕಿತ್ಸೆ ನೀಡಲಾಗಿತ್ತು. ಈ 15 ದಿನಗಳ ಅವಧಿಯಲ್ಲಿ ಅಳಿಸಿಹಾಕಲಾಗಿದ್ದ ಎಲ್ಲಾ ದತ್ತಾಂಶಗಳನ್ನು ಮರಳಿ ಸ್ಥಾಪಿಸುವಲ್ಲಿ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (ಸಿಇಆರ್‌ಟಿ) ಯಶಸ್ವಿಯಾಗಿತ್ತು. ಒಂದೊಮ್ಮೆ ಈ ದತ್ತಾಂಶಗಳು ಸಿಗದೇ ಇದ್ದಿದ್ದರೆ, ಏಮ್ಸ್‌ನ ಈವರೆಗಿನ ಎಲ್ಲಾ ದಾಖಲೆಗಳು, ಸಂಶೋಧನಾ ವರದಿಗಳು, ರೋಗಿಗಳ ನೋಂದಣಿ ಮತ್ತು ಚಿಕಿತ್ಸಾ ವಿವರಗಳು ಶಾಶ್ವತವಾಗಿ ಅಳಿಸಿಹೋಗುತ್ತಿದ್ದವು. ಏಮ್ಸ್ ಕಾರ್ಯನಿರ್ವಹಣೆಯೇ ಕಷ್ಟಸಾಧ್ಯವಾಗುತ್ತಿತ್ತು.

ದತ್ತಾಂಶ ಮಾರಾಟ

ವಿವಿಧ ಇಲಾಖೆಗಳು ಮತ್ತು ಖಾಸಗಿ ಕಂಪನಿಗಳಿಂದ ಕದಿಯಲಾದ ದತ್ತಾಂಶಗಳನ್ನು ಮಾರಾಟ ಮಾಡಲಾಗುತ್ತದೆ. ಡಾರ್ಕ್ ವೆಬ್‌ಗಳಲ್ಲಿ ಇಂತಹ ದತ್ತಾಂಶ ಮಾರಾಟವಾಗುತ್ತದೆ. 2022ರಲ್ಲಿ ದೇಶದಲ್ಲಿನ ಡಾಮಿನೋಸ್ ಗ್ರಾಹಕರ ದತ್ತಾಂಶವನ್ನು ಡಾರ್ಕ್ ವೆಬ್‌ನಲ್ಲಿ ಮಾರಾಟಕ್ಕೆ ಇಡಲಾಗಿತ್ತು. 18 ಕೋಟಿಗೂ ಹೆಚ್ಚು ಗ್ರಾಹಕರ ಹೆಸರು, ವಿಳಾಸ, ಸಂಪರ್ಕ ವಿವರ, ಅವರ ಮೆಚ್ಚಿನ ಪಿಜ್ಜಾ ವಿವರಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಜತೆಗೆ 10 ಲಕ್ಷಕ್ಕೂ ಹೆಚ್ಚು ಕ್ರೆಡಿಟ್ ಕಾರ್ಡ್ ವಿವರಗಳನ್ನೂ ಮಾರಾಟಕ್ಕೆ ಇಡಲಾಗಿತ್ತು. ಹಲವು ದಿನಗಳವರೆಗೆ ಈ ದತ್ತಾಂಶ ಮಾರಾಟಕ್ಕೆ ಲಭ್ಯವಿತ್ತು. ಸುಮಾರು 13 ಟೆರಾಬೈಟ್‌ನಷ್ಟಿದ್ದ ಈ ಮಾಹಿತಿಗಳನ್ನು ₹4 ಕೋಟಿಗೆ ನೀಡುತ್ತೇನೆ ಎಂದು ಮಾರಾಟಗಾರ ಘೋಷಿಸಿಕೊಂಡಿದ್ದ. ತಮ್ಮ ಕಂಪನಿಯ ಗ್ರಾಹಕರ ದತ್ತಾಂಶ ಭದ್ರತೆಯಲ್ಲಿ ಸ್ವಲ್ಪ ಸಮಸ್ಯೆಯಾಗಿದೆ ಎಂಬುದನ್ನು ಕಂಪನಿ ಹೇಳಿಕೊಂಡಿತ್ತು.

ಹೀಗೆ ಮಾರಾಟವಾದ ದತ್ತಾಂಶಗಳನ್ನು ಯಾವುದೋ ಒಂದು ಕಂಪನಿ ತನ್ನ ಉತ್ಪನ್ನ ಅಥವಾ ಸೇವೆಯ ಬಗ್ಗೆ ಗ್ರಾಹಕರ ಮೊಬೈಲ್‌ಗೆ ನೇರವಾಗಿ ಜಾಹೀರಾತು ನೀಡಲು ಅಥವಾ ಪ್ರಚಾರ ನಡೆಸಲು ಬಳಸಿಕೊಳ್ಳಬಹುದು. ಗ್ರಾಹಕರ ಖರ್ಚಿನ ಸಾಮರ್ಥ್ಯ ಮತ್ತು ಅವರ ಆಸಕ್ತಿಗಳನ್ನು ಆಧರಿಸಿ ಅಂಥದ್ದೇ ಸೇವೆ ಅಥವಾ ಸರಕನ್ನು ಕೊಳ್ಳುವಂತೆ ಪ್ರಚೋದಿಸಲು ಈ ದತ್ತಾಂಶಗಳನ್ನು ಬಳಸಿಕೊಳ್ಳಬಹುದು. ಇದರಿಂದ ಗ್ರಾಹಕರು ಇನ್ನಷ್ಟು ಸರಕು ಅಥವಾ ಸೇವೆಯನ್ನು ಖರೀದಿಸಬಹುದು, ಅದರಿಂದ ಅವರ ವೆಚ್ಚದ ಪ್ರಮಾಣ ಹೆಚ್ಚಾಗಬಹುದು.

ಅಭಿಪ್ರಾಯ ರೂಪಿಸುವಿಕೆ

ಹೀಗೆ ದತ್ತಾಂಶಗಳನ್ನು ಕದ್ದವರು, ರಾಜಕೀಯ ಪಕ್ಷಗಳಿಗೆ ಅಥವಾ ರಾಜಕೀಯ ನಾಯಕರಿಗೆ ಅವನ್ನು ಮಾರಾಟ ಮಾಡಬಹುದು. ಹೀಗೆ ಬಿಕರಿಯಾದ ದತ್ತಾಂಶವನ್ನು ಬಳಸಿಕೊಂಡು ರಾಜಕೀಯ ಅಭಿಪ್ರಾಯ ಸೃಷ್ಟಿಸಲು ಅವಕಾಶವಿದೆ. 2016ರ ಅಮೆರಿಕದ ಅಧ್ಯಕ್ಷೀಯ ಚುನಾವಣೆ ಇದಕ್ಕೆ ಉತ್ತಮ ನಿದರ್ಶನ.

ಈ ಚುನಾವಣೆಗೂ ಮುನ್ನ ಅಮೆರಿಕದ 5 ಕೋಟಿಗೂ ಹೆಚ್ಚು ಮತದಾರರ ಸಾಮಾಜಿಕ ಜಾಲತಾಣ ಖಾತೆಗಳ ವಿವರವನ್ನು ಕದಿಯಲಾಗಿತ್ತು. ಆ ವಿವರಗಳನ್ನು ಬಳಸಿಕೊಂಡು, ಆ ಬಳಕೆದಾರರ ರಾಜಕೀಯ ನಿಲುವು ಏನು ಎಂಬುದನ್ನು ಅಧ್ಯಯನ ಮಾಡಲಾಗಿತ್ತು. ಅಧ್ಯಯನದ ವಿವರಗಳನ್ನು ಬಳಸಿಕೊಂಡೇ ಡೊನಾಲ್ಡ್ ಟ್ರಂಪ್ ಅವರ ಚುನಾವಣಾ ಪ್ರಚಾರ, ಪ್ರಚಾರದ ಸರಕುಗಳು, ಭಾಷಣಗಳು, ಘೋಷಣೆಗಳನ್ನು ರೂಪಿಸಲಾಗಿತ್ತು. ಈ ಮೂಲಕ ಟ್ರಂಪ್ ಅವರು ಒಂದು ರಾಜಕೀಯ ಅಭಿಪ್ರಾಯವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಅದು ಚುನಾವಣೆಯಲ್ಲೂ ಅವರ ಅನುಕೂಲಕ್ಕೆ ಬಳಕೆಯಾಯಿತು ಎಂಬುದು ಆರೋಪ. ಫೇಸ್‌ಬುಕ್‌ನ ಮಾಜಿ ನೌಕರರೊಬ್ಬರು ಈ ಬಗ್ಗೆ ಮಾಹಿತಿಯನ್ನು ಬಹಿರಂಗಪಡಿಸಿದ್ದರು. ಇದು ಜಾಗತಿಕ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿತ್ತು.

ಭಾರತದಲ್ಲೂ ಸಾರ್ವಜನಿಕರ ಮೊಬೈಲ್ ವಿವರ ಮತ್ತು ಸಾಮಾಜಿಕ ಜಾಲತಾಣ ಖಾತೆಗಳನ್ನು ಕೆಲವು ರಾಜಕೀಯ ಪಕ್ಷಗಳು ಇದೇ ರೀತಿ ಬಳಸಿಕೊಳ್ಳುತ್ತಿವೆ ಎಂಬ ಆರೋಪವಿದೆ.

ಆರ್ಥಿಕ ಅಪರಾಧಗಳು

ಸಾರ್ವಜನಿಕರ ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ವಿವರ, ಕ್ರೆಡಿಟ್ ಕಾರ್ಡ್ ವಿವರ, ಪ್ಯಾನ್ ಮತ್ತು ಆಧಾರ್ ವಿವರಗಳನ್ನು ಬಳಸಿಕೊಂಡು ಆರ್ಥಿಕ ಅಪರಾಧಗಳನ್ನು ಎಸಗಲು ಅವಕಾಶವಿದೆ. ಈ ವಿವರಗಳನ್ನು ಕದ್ದವರು, ಅವನ್ನು ಬಳಸಿಕೊಂಡು ಬ್ಯಾಂಕ್ ಖಾತೆಯಿಂದ ಹಣ ರವಾನಿಸಿಕೊಳ್ಳಬಹುದು. ಕ್ರೆಡಿಟ್ ಕಾರ್ಡ್‌ನ ಬ್ಯಾಲೆನ್ಸ್ ಅನ್ನು ವೆಚ್ಚ ಮಾಡಬಹುದು. ಸಾಲವನ್ನೂ ಪಡೆದುಕೊಳ್ಳಬಹುದು. ಸಾಲ ಮಾಡದೇ ಇದ್ದರೂ, ಸಾಲ ತೀರಿಸಬೇಕಾದ ಅಥವಾ ಅದಕ್ಕಾಗಿ ಕಾನೂನು ಹೋರಾಟ ನಡೆಸಬೇಕಾದ ಸ್ಥಿತಿ ಎದುರಾಗಬಹುದು. ಖಾತೆಯಲ್ಲಿರುವ ನಮ್ಮ ಹಣವನ್ನೂ ಕಳೆದುಕೊಳ್ಳಬಹುದು. ಆರೋಗ್ಯ ವಿಮೆಯನ್ನೂ ಕ್ಲೇಮು ಮಾಡಿಕೊಳ್ಳಬಹುದು.

ಹೀಗೆ ಆರ್ಥಿಕ ಅಪರಾಧ ಎಸಗುವವರಿಗೆ ಜನರ ಆರ್ಥಿಕ ವಿವರಗಳು ಹೇಗೆ ಲಭ್ಯವಾಗುತ್ತವೆ ಎಂಬ ಪ್ರಶ್ನೆಯೂ ಇದೆ. ಸರ್ಕಾರಿ ಇಲಾಖೆಗಳ ಸರ್ವರ್‌ಗಳಲ್ಲಿ, ಬ್ಯಾಂಕ್ ಸರ್ವರ್‌ಗಳಲ್ಲಿ ಸಂಗ್ರಹಿಸಲಾಗಿರುವ ಇಂತಹ ಮಾಹಿತಿಗಳು ಸೋರಿಕೆಯಾದರೆ ಮಾತ್ರ, ಅವು ಇಂತಹ ವಂಚಕರಿಗೆ ಲಭ್ಯವಾಗುತ್ತವೆ.

ಅಪರಾಧ ಕೃತ್ಯಗಳಿಗೆ ಬಳಕೆ

ಆಧಾರ್, ಮತದಾರರ ಗುರುತಿನ ಚೀಟಿ, ವಾಹನಗಳ ನೋಂದಣಿ ಸಂಖ್ಯೆ ಮೊದಲಾದ ವಿವರಗಳನ್ನು ವಂಚಕರು ಅಪರಾಧ ಕೃತ್ಯಗಳಿಗೆ ಬಳಕೆ ಮಾಡಿಕೊಳ್ಳಬಹುದು. ಆಧಾರ್ ಮತ್ತು ಮತದಾರರ ಗುರುತಿನ ಚೀಟಿ ಬಳಸಿಕೊಂಡು ಬ್ಯಾಂಕ್ ಖಾತೆ ತೆರೆಯಲು ಮತ್ತು ಅದನ್ನು ಹಣ ಅಕ್ರಮ ವರ್ಗಾವಣೆಗೆ ಬಳಸಿಕೊಳ್ಳುವ ಅಪಾಯಗಳು ಇವೆ. ಅಂಥದ್ದೇ ಖಾತೆಗಳ ಮೂಲಕ ಭಯೋತ್ಪಾದನಾ ಚಟುವಟಿಕೆಗಳಿಗೆ ಹಣ ಸಂಗ್ರಹ, ಬಳಕೆ ಮಾಡುವ ಅಪಾಯವಿದೆ. ಆಧಾರ್ ಬಳಸಿಕೊಂಡು ಸಿಮ್ ಖರೀದಿಸಿ, ಅದನ್ನು ಅಪರಾಧ ಕೃತ್ಯಗಳಿಗೆ ಬಳಸಿಕೊಳ್ಳುವ ಅಪಾಯವಿದೆ. ಯಾವುದೇ ವ್ಯಕ್ತಿಗೆ ಸೇರಿದ ವಾಹನದ ನೋಂದಣಿ ವಿವರಗಳನ್ನು, ಬೇರೊಂದು ವಾಹನದಲ್ಲಿ ಬಳಸಬಹುದಾಗಿದೆ. ಆ ಮೂಲಕ ಅದನ್ನು ಅಪರಾಧ ಕೃತ್ಯಗಳಿಗೆ ಬಳಸಿಕೊಳ್ಳಬಹುದಾಗಿದೆ. ಹೀಗೆ ಅಪರಾಧ ಕೃತ್ಯಗಳು ನಡೆದಾಗ ಆಧಾರ್, ಮತದಾರರ ಗುರುತಿನ ಚೀಟಿಯಲ್ಲಿರುವ ಮತ್ತು ವಾಹನದ ನಿಜವಾದ ಮಾಲೀಕ ಕಾನೂನು ಕ್ರಮವನ್ನು ಎದುರಿಸಬೇಕಾದ ಅಪಾಯ ಉಂಟಾಗುತ್ತದೆ.

ಆಧಾರ: ಪಿಟಿಐ, ಕೋವಿನ್ ಪೋರ್ಟಲ್, ಪಿಐಬಿ ಪತ್ರಿಕಾ ಪ್ರಕಟಣೆ, ಐಬಿಎಂ/ಮೈಕ್ರೊಟ್ರೆಂಡ್ ದತ್ತಾಂಶ ಸುರಕ್ಷಾ ಪ್ರಶ್ನೋತ್ತರಗಳು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದುಬೈನಲ್ಲಿ ಇತ್ತೀಚೆಗಷ್ಟೇ 'ಸಂತೋಷ್ ಟ್ರೋಫಿ'ಯನ್ನು ಗೆದ್ದುಬಂದ ಕರ್ನಾಟಕದ ಫುಟ್‌ಬಾಲ್ ತಂಡವನ್ನು ಸಿದ್ದರಾಮಯ್ಯ ಅವರು ತಮ್ಮ ಮನೆಯ ಮುಂದಿನ ಪಾದಚಾರಿ ಮಾರ್ಗದಲ್ಲಿ ಗಂಟೆಗಟ್ಟಲೆ ಕಾಯುವಂತೆ ಮಾಡಿದ್ದಾರೆ ಎಂದು ಆರೋಪಿಸಿ ಹಲವರು ವಿಡಿಯೊವೊಂದನ್ನು ಟ್ವೀಟ್ ಮಾಡಿದ್ದಾರೆ. ವಕೀಲ, ಬಿಜೆಪಿ ಕಾರ್ಯಕರ್ತ ಎಂದು ಬರೆದುಕೊಂಡಿರುವ @somashekar2054 ಎಂಬವರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ. 'ಮೂರು ಗಂಟೆಗಳ ಬಳಿಕ ಮುಖ್ಯಮಂತ್ರಿ ಅವರು ತಂಡವನ್ನು ಭೇಟಿ ಮಾಡಿದರು' ಎಂದು ವಿಡಿಯೊದಲ್ಲಿ ವ್ಯಕ್ತಿಯೊಬ್ಬರು ಹೇಳಿದ್ದಾರೆ. ಆದರೆ, ಇದು ತಿರುಚಲಾದ ಸುದ್ದಿ.



ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದವರಿಗೆ ಸಂತೋಷ್ ಟ್ರೋಫಿಯನ್ನು ನೀಡಲಾಗುತ್ತದೆ. 2023ರಲ್ಲಿ ಮೇಘಾಲಯ ತಂಡವನ್ನು 3-2ರಿಂದ ಮಣಿಸಿ ಕರ್ನಾಟಕವು ಟ್ರೋಫಿಯನ್ನು ಗೆದ್ದುಕೊಂಡಿದೆ. ವಾಸ್ತವದಲ್ಲಿ ಈ ಪಂದ್ಯ ನಡೆದಿರುವುದು ಮಾರ್ಚ್ 4ರಂದು. ಆದರೆ, ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆ ನಡೆದು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದು ಮೇ 20ರಂದು. ಆದ್ದರಿಂದ ಈ ವಿಡಿಯೊವನ್ನು ಮೇ 20ಕ್ಕೂ ಮುಂಚೆಯೇ ಚಿತ್ರೀಕರಣ ಮಾಡಲಾಗಿದೆ. ಆಗ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದರು. ಆದರೆ, ಸಿದ್ದರಾಮಯ್ಯ ಅವರನ್ನು ಟೀಕಿಸುವ ಸಲುವಾಗಿ ತಪ್ಪಾಗಿ ಈ ವಿಡಿಯೊವನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಸ್ಥಿರ ಮನಸ್ಸು

ಶ್ವಾನ ತಿಪ್ಪೆಯ ಮೇಲೆ ಮಲಗಿರಲು ಪೂರ್ವಿಕ - |
ಜ್ಞಾನ ಪಶ್ಚಾತ್ತಾಪ ಶುಭ ಚಿಂತೆಯಂತೆ ||
ಏನೊ ವಾಸನೆ ಬೀಸಲದು ಹಾರಿ ಧುಮುಕುವುದು |
ಮಾನವನ ಮನಸಂತು – ಮಂಕುತಿಮ್ಮ || **905** ||

ಪದ-ಅರ್ಥ: ಶ್ವಾನ = ನಾಯಿ, ಪೂರ್ವಿಕಜ್ಞಾನ = - ಹಿಂದಿನ ನೆನಪು, ಬೀಸಲದು = ಬೀಸಲು + ಅದು, ಮನಸಂತು = ಮನಸು + ಅಂತು.

ವಾಚ್ಯಾರ್ಥ: ನಾಯಿ ತಿಪ್ಪೆಯ ಮೇಲೆ ಮಲಗಿದಾಗ ಅದಕ್ಕೆ ಏನೋ ಹಿಂದಿನ ಜ್ಞಾನ ಮರುಕಳಿಸಿ ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುತ್ತದೆ. ಇನ್ನು ಮುಂದೆ ಒಳ್ಳೆಯದನ್ನೇ ಮಾಡಬೇಕೆಂಬ ಶುಭ ಚಿಂತೆ ಮೂಡುತ್ತದೆ. ಆದರೆ ಯಾವುದಾದರೂ ಒಳ್ಳೆಯ ವಾಸನೆ ಬಂದೊಡನೆ, ಎಲ್ಲ ಮರೆತು ಆ ಕಡೆಗೆ ಹಾರಿ ಧುಮುಕುತ್ತದೆ. ಮನುಷ್ಯನ ಮನಸ್ಸು ಹಾಗೆಯೇ.

ವಿವರಣೆ: ಇಲ್ಲೊಂದು ಸುಂದರವಾದ ದೃಷ್ಟಾಂತವಿದೆ. ನಾಯಿಯೊಂದು ತಿಪ್ಪೆಯ ಮೇಲೆ ಮಲಗಿದೆ. ಅದೇ ಅದರವಾಸಸ್ಥಾನ. ಕಣ್ಣು ಮುಚ್ಚಿ ಮಲಗಿದ ನಾಯಿಗೆ ತಾನು ಹಿಂದೆ ಮಾಡಿದ ಕಾರ್ಯಗಳೆಲ್ಲ ನೆನಪಿಗೆ ಬರುತ್ತವೆ. ಛೇ, ನಾನು ಎಂತೆಂತಹ ತಪ್ಪು ಕಾರ್ಯಗಳನ್ನು ಮಾಡಿದ್ದೇನೆ ಎಂಬ ಜ್ಞಾನ ನುಗ್ಗಿ ಬರುತ್ತದೆ. ಅದರ ಹಿಂದೆಯೇ ಹಾಗೆ ಮಾಡಬಾರದಿತ್ತು ಎಂಬ ಪಶ್ಚಾತ್ತಾಪವೂ ಆಗುತ್ತದೆ. ಒಂದು ಕ್ಷಣ ಅದರ ಮನಸ್ಸು ಪರಿವರ್ತನೆಗೊಳ್ಳುತ್ತದೆ. ಇನ್ನು ಮುಂದೆ ಅಂತಹ ಕೆಟ್ಟಕೆಲಸಗಳನ್ನು ಮಾಡುವುದಿಲ್ಲ, ಹೊಲಸಿನಲ್ಲಿ ಕೂಡ್ರುವುದಿಲ್ಲ, ಎಂಜಲು ಪದಾರ್ಥಗಳನ್ನು ತಿನ್ನುವುದಿಲ್ಲ ಎಂಬೆಲ್ಲ ತೀರ್ಮಾನಗಳನ್ನು ಮಾಡುತ್ತದೆ. ಅದು ಶುಭ ಚಿಂತೆ. ಆಗ ಯಾರೋ ಎಂಜಲೆಲೆಗಳ ರಾಶಿಯನ್ನು ತಂದು ತಿಪ್ಪೆಗೆ ಎಸೆದರು. ಎಲೆಯಲ್ಲಿ ಉಳಿದಿದ್ದ ಪದಾರ್ಥಗಳ ವಾಸನೆ ಬೀಸಿ ಬಂದು ನಾಯಿಗೆ ಮೂಗಿಗೆ ತಲುಪಿತು. ಮರುಕ್ಷಣವೇ ನಾಯಿ, ತಾನು ಮಾಡಿಕೊಂಡಿದ್ದ ತೀರ್ಮಾನಗಳು, ಶುಭಚಿಂತನೆಗಳು ಎಲ್ಲವನ್ನು ಮರೆತು, ನಾಲಿಗೆಯನ್ನು ಹೊರಚಾಚಿ ಎಲೆಗಳ ಮೇಲೆ ಹಾರುತ್ತದೆ. ಕಗ್ಗ ಹೇಳುತ್ತದೆ, ಮನುಷ್ಯನ ಮನಸ್ಸು ಹಾಗೆಯೇ ವರ್ತಿಸುತ್ತದೆ. ಮನುಷ್ಯನಿಗಾದರೂ, ಕ್ಷಣಕಾಲವಾದರೂ, ತಾನು ಇದುವರೆಗೂ ಮಾಡಿದ ಕಾರ್ಯಗಳಲ್ಲಿ ಒಳ್ಳೆಯದಾವುದು ಕೆಟ್ಟದ್ದಾವುದು ಎಂಬುದರ ಚಿಂತನೆ ಹೊಳೆದೇ ಹೊಳೆಯುತ್ತದೆ. ಆಗ ಇಂಥ ಕೆಲಸವನ್ನು ಮಾಡಬಾರದಿತ್ತು ಎನ್ನುವ ವಿಚಾರ, ಮುಂದೆ ಅಂಥದ್ದನ್ನು ಮಾಡಲೇಬಾರದೆಂಬ ತೀರ್ಮಾನ ಮೂಡುತ್ತದೆ. ಆದರೆ ಮನದಲ್ಲಿ ಅಡಗಿ ಕುಳಿತಿದ್ದ ಕಾಮ, ಮೋಹ, ಲೋಭಗಳು, ಪುಟಿದೆದ್ದು, ಮತ್ತೊಂದು ಆಸೆಯನ್ನು ಚಿಗುರಿಸಿ, ಅವನನ್ನು ಆ ಕಡೆಗೆ ಜಾರಿಸಿಬಿಡುತ್ತವೆ. ಸಿಗರೇಟು ಸೇದುವುದು, ಮದ್ಯ ಸೇವಿಸುವುದು ಆರೋಗ್ಯಕ್ಕೆ ಒಳ್ಳೆಯದಲ್ಲ, ಲಂಚ ತೆಗೆದುಕೊಳ್ಳುವುದು ಅನೀತಿ ಎಂದು ಯಾರಿಗೆ ಗೊತ್ತಿಲ್ಲ? ಆಗಾಗ ಅವುಗಳನ್ನು ಬಿಟ್ಟೇಬಿಡಬೇಕು ಎಂಬ ಕ್ಷಣಿಕ ತೀರ್ಮಾನಗಳನ್ನು ತೆಗೆದುಕೊಳ್ಳುವುದಾಗುತ್ತದೆ. ಆದರೆ ಅವು ಮುಂದೆ ಬಂದನಿಂತಾಗ ತೀರ್ಮಾನಗಳೆಲ್ಲ ಕರಗಿ ಹೋಗಿ, ಆಸೆಯ ತೃಪ್ತಿ ಗೆಲ್ಲುತ್ತದೆ. ಹೀಗೆ ಅಸ್ತವ್ಯಸ್ತವಾದ, ಅಸ್ಥಿರವಾದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರಕುವುದು ಹೇಗೆ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 14, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಏಕಾದಶಿ ಗಂ. 08-49, ನಕ್ಷತ್ರ: ಅಶ್ವಿನಿ ಗಂ. 13-40 ಯೋಗ: ಅತಿಗಂಡ 27-00 ಕರಣ: ಬಾಲವ ಗಂ. 08-49, ವೃಷಭ ಮಾಸದ 30 ನೇ ದಿನ, ಮಳೆನಕ್ಷತ್ರ: ಮೃಗಶಿರ 2. ರಾಹುಕಾಲ : ಮಧ್ಯಾಹ್ನ 12-00 – 01-30 ಸೂರ್ಯೋದಯ : 06-07 ಸೂರ್ಯಾಸ್ತ : 06-54, ಮುಸ್ಲಿಂ ದಿನಾಂಕ : 25 ಜುಲ್ಹಾಯದ್, ದಿನ ವಿಶೇಷ : ಯೋಗಿನಿ ಏಕಾದಶಿ
ಅದೃಷ್ಟ ಸಂಖ್ಯೆ : 4, 2

ಮೇಷ: ಸದಾಕಾಲ ಪಕ್ಕದಲ್ಲಿಯೇ ಇರುವ ಪರಿಚಿತರಿಂದ ವಂಚನಾ ಪ್ರಸಂಗ ಇರಲಿದೆ. ಆದಾಯ ವೆಚ್ಚಗಳನ್ನು ಸರಿದೂಗಿಸಿಕೊಳ್ಳುವಿರಿ. ದೂರದ ಪ್ರಯಾಣದ ಸಾಧ್ಯತೆ ಇದೆ. ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ ಸಿಗಲಿದೆ.

ವೃಷಭ: ಟೆಕ್ಸ್‌ಟೈಲ್ಸ್ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಬಹಳಷ್ಟು ಹಣ ಹಾಗೂ ವ್ಯಾಪಾರಗಳ ಲಾಭ ಹೊಂದುವರು. ಕಾರ್ಯ ನಿಮಿತ್ತವಾಗಿ ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ ಇರಲಿ.

ಮಿಥುನ: ದೈವಾನುಗ್ರಹ ನಿಮ್ಮ ಪಾಲಿಗೆ ಸಂಪೂರ್ಣವಿದ್ದು ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಉತ್ತಮ ರೀತಿಯಲ್ಲಿ ಮುಂದುವರಿಯಲು ಪೂರಕವಾಗುತ್ತದೆ. ರಿಯಲ್ ಎಸ್ಟೇಟ್ ಏಜೆಂಟರಿಗೆ ಅಧಿಕ ಲಾಭ ಬರುವುದು.

ಕರ್ಕಾಟಕ: ಭ್ರಾತೃ ವರ್ಗದವರಲ್ಲಿ ಸೌಮನಸ್ಯದಿಂದ ವರ್ತಿಸುವುದು ಒಳ್ಳೆಯದು. ನಿಸ್ವಾರ್ಥ ಸೇವೆಯಿಂದ ಸಮಾಜದಲ್ಲಿ ಗೌರವಾನ್ವಿತ ಸ್ಥಾನಮಾನಗಳು ಲಭಿಸುತ್ತದೆ. ತೆಂಗಿನಕಾಯಿ ವ್ಯಾಪಾರಿಗಳಿಗೆ ಹೆಚ್ಚು ಲಾಭ ಸಿಗಲಿದೆ.

ಸಿಂಹ: ನಿರೀಕ್ಷಿಸಿದ ಉದ್ಯಮದಲ್ಲಿ ಅಲ್ಲದೆ ಬೇರೆ ಕಡೆಯೂ ಅವಕಾಶ ದೊರೆಯಲಿದೆ. ನಿಮ್ಮ ಕೋಪದ ಮೇಲೆ ನಿಯಂತ್ರಣವನ್ನು ಸಾಧಿಸದಿದ್ದರೆ ಸಹೋದರರು ಮತ್ತು ಸ್ನೇಹಿತರು ಎದುರಾಳಿಗಳಾಗುವರು.

ಕನ್ಯಾ: ರಾಜಕೀಯ ವಿದ್ಯಮಾನಗಳಿಂದ ಓಡಾಟ ಅಧಿಕಗೊಳ್ಳುವುದು. ಗೃಹದಲ್ಲಿ ಸಂಭ್ರಮದ ಸಮಾರಂಭದಿಂದ ಅಥವಾ ವೃಥಾ ತಿರುಗಾಟದಿಂದಾಗಿ ಖರ್ಚು ಹೆಚ್ಚಾಗಲಿದೆ. ವೃತ್ತಿ ಜೀವನದಲ್ಲಿ ಯಶಸ್ಸು ಕಾಣುವಿರಿ.

ತುಲಾ: ಯಾವುದೇ ವಿಷಯವನ್ನು ಸೋಮಾರಿತನದಿಂದಾಗಲೀ, ಆರ್ಥಿಕ ಸಮಸ್ಯೆಯಿಂದಾಗಲೀ ಮುಂದೂಡುವುದು ಸರಿಯಲ್ಲ. ಕುಟುಂಬದ ಹಾಗೂ ಸ್ನೇಹಿತರ ನಡುವಿನ ಸಂಬಂಧಗಳು ಈ ದಿನ ಉತ್ತಮಗೊಳ್ಳುವುದು.

ವೃಶ್ಚಿಕ: ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ. ಗಿಡಮೂಲಿಕೆಗಳ ಬಳಕೆಯಿಂದ ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡು ಬರಲಿದೆ.

ಧನು: ಬೆಳ್ಳಗೆ ಇರುವುದೆಲ್ಲವೂ ಹಾಲು ಎಂದು ನಂಬುವ ನಿಮ್ಮ ಮನೋಧರ್ಮದಿಂದ ಈ ದಿನ ಮೋಸ ಹೋಗುವಿರಿ. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅಥವಾ ಉದ್ಯೋಗ ಅನ್ವೇಷಣೆಯಲ್ಲಿ ಅನುಕೂಲ ತೋರಿಬರುವುದು.

ಮಕರ: ಸಕಾರಾತ್ಮಕವಾದ ಒಳ್ಳೆಯ ಕನಸುಗಳಿಗೆ ಪುನಃ ಜೀವ ಬಂದಂತೆ ಆಗಲಿದೆ. ಅಧಿಕ ಜವಾಬ್ದಾರಿ ಅಥವಾ ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ. ಶುಭ ಕಾರ್ಯಗಳಿಗೆ ರಾಹುಕಾಲದ ನಂತರ ಪ್ರಯಾಣ ಬೆಳೆಸಿ.


ಕುಂಭ: ಮಾತುಗಾರಿಕೆಯ ನಿಮ್ಮ ಅಭ್ಯಾಸದಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಬಹಳ ದಿನಗಳ ನಂತರದ ಸಹೋದರಿಯ ಗೃಹಾಗಮನ ತಂದೆ-ತಾಯಿಯ ಸಂತೋಷಕ್ಕೆ ಕಾರಣವಾಗುತ್ತದೆ.

ಮೀನ: ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಬೆಟ್ಟದಂತೆ ಇರುವುದು. ನೆರೆಯವರ ಸಹಾಯ ಸಹಕಾರ ಕೇಳುವ ಸಂದರ್ಭ ಬರಲಿದೆ. ಪೊಲೀಸ್ ಅಧಿಕಾರಿಗಳಿಗೆ ತುರ್ತು ಕೆಲಸ ಒದಗಿ ಬರುವುದು.

ಪದಬಂಧ 5349 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ರಣಧೀರ ಕಾಳಗ ನಡೆಸಿದ ಜಾಗ (4)
5.ಯಜಮಾನನ ಸ್ವಭಾವ (4)
6.ದಾರಿಯಲ್ಲಿ ನಡೆದು ಹೋಗುತ್ತಿರುವವನು (4)
8.ಕಳ್ಳನ ಬಗ್ಗೆ ಈ ಆಸಕ್ತಿಯೇ? (4)
11.ಜೇನುನೊಣ ಹೀರುತ್ತಿರುವ ಹೂವಿನ ಸಿಹಿರಸ (4)
13.ಸವಿಯಾದ ವಿವರಗಳನ್ನೊಳಗೊಂಡಿದ್ದು (4)
15.ಪ್ರಯಾಣದ ನಡುವೆ ಕರವಿಟ್ಟ ಘಟನೆ (4)
16.ನಡುವೆ ಗರ ತಿರುಗಿಸಿದರೆ ಆಧೀನ (4)

ಮೇಲಿಂದ ಕೆಳಕ್ಕೆ
1.ಇದು ನಡುಮನೆ (3)
2.ನಡುವಿರುವ ಮಾಣಿ ಬಲು ನಂಬಿಕಸ್ತ (4)
3.ದಾಳಿ ನಡೆಸಿ ತಿಂದಿದ್ದು ಶ್ರೇಷ್ಠ ಕಬ್ಬು (4)
4.ಗಣಕ್ಕೆಲ್ಲಾ ಗಣಿತ ಕಲಿಸಿದ ಕರಣಿಕ (3)
7.ಹೇಳಿಕೆಯಿಂದಲೇ ಮಾಡಿದ ಸಾಮ್ಯ! (3)
9.ಕಳ್ಳನಿಗೆ ಅಂಟಿಕೊಂಡಿರುವ ದೋಷ (3)
10. ಕೊಡದಂತಹ ದೊಡ್ಡ ಪಾತ್ರೆ (3)
11.ಮರದ ಕೆಳಗೆ ಸಿಕ್ಕಿರುವ ಪಚ್ಚೆ (4)
12.ಕಸರತ್ತು ಮಾಡಿ ಹಾಕಿದ ಸಹಿ (4)
13.ಸರಿಗೆ ತಂದವ ಸರಿಸಮನಾದವನು (3)
14.ಪರಿಣಯಕ್ಕೆ ತಿರುಗಿದ ಪ್ರೀತಿ (3)



5348ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲಾಯನ 3.ವರ್ಣಮಾಲೆ
5.ಕಕವ 7.ಸಮಗಾರ
9.ಶೋಕ 10.ಕ್ತಭ
11.ರವಿಚಂದ್ರ 13.ಭವನ
17.ದಿಗಂಬರ
18.ಹಸುಗೂಸು

ಮೇಲಿಂದ ಕೆಳಕ್ಕೆ:
1.ಪದಕ 2.ನನ್ನಿ
3.ವನಸುಮ 4.ಲೆಕ್ಕ
6.ಕನಿಕರ 7.ಸಮುದ್ರ
8.ರಕ್ತಸ್ರಾವ 12.ಚಂದಾದಾರ
14.ನನಸು 15.ಹಾದಿ
16.ದೇಹ

ಸುಡೊಕು 5735

4		3		2		6		1
	6	2					9	
				3			4	8
	4		3		1		7	
1	3	7				4		5
			4		7		1	
	2		5				3	
6		9				5		4
	5				2		8	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5734 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಷೇರುಪೇಟೆ ವಹಿವಾಟು ▲418



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18601
ಇಂದಿನ ಅಂತ್ಯ	18716
▲	114
ದಿನದ ಗರಿಷ್ಠ	18,728

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹322;480
ದ್ವಿತಳಿ (ಬಿ.ವಿ) ₹306;629

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹565
12 ಮೊಟ್ಟೆಗೆ ₹73
ಮೈಸೂರು
100 ಮೊಟ್ಟೆಗೆ ₹572

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹ 1640(1615)
ಸೋಯಾ (ರಿಫೈನ್ಡ್)	₹910(905)
ಸೂರ್ಯಕಾಂತಿ (ರಿಫೈನ್ಡ್)	₹ 910(900)
ಪಾಮೋಲಿನ್	₹840(835)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1,000-1,600
ಮಧ್ಯಮ	₹800-1000
ಸಣ್ಣ	₹400-800

ಕೊಬ್ಬರಿ ಧಾರಣೆ

ಕೆ.ಆರ್‌.ಪೇಟೆ (ಇತರ)	₹7950-7950
ಪುತ್ತೂರು (ಇತರ)	₹4500-7300
ತುರುವೇಕೆರೆ	₹ 8900-8900

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹152
ಆರ್‌ಎಸ್‌ಎಸ್-5 ₹147
ಗುಡ್ ಲಾಟ್ ₹128

ಒಕ್ಕಲಿಗ ಹಾಗೂ ಲಿಂಗಾಯತ ಸಮುದಾಯಗಳ ಆಕ್ಷೇಪ

ಜಾತಿಗಣತಿ ವರದಿ ಮಂಡನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿ(ಜಾತಿಗಣತಿ) ಮಂಡನೆ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ಧಾರದ ಬಗ್ಗೆ ವೀರಶೈವ- ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳು ವಿರೋಧ ವ್ಯಕ್ತಪಡಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚೆಗೆ ದಲಿತ ಮತ್ತು ಹಿಂದುಳಿದ ವರ್ಗಗಳ ಸ್ವಾಮೀಜಿಗಳ ಸಭೆಯಲ್ಲಿ ಈ ವರದಿಯನ್ನು ಮಂಡಿಸುವುದಾಗಿ ಹೇಳಿದ್ದರು.

ಇದರ ಬೆನ್ನಲ್ಲೇ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಗಳು ಅಸಮಾಧಾನ ವ್ಯಕ್ತಪಡಿಸಿವೆ. 'ಈ ವರದಿ ಅತ್ಯಂತ ಅವೈಜ್ಞಾನಿಕವಾಗಿದ್ದು, ಯಾವುದೇ ಕಾರಣಕ್ಕೂ ಮಂಡಿಸಬಾರದು' ಎಂದು ಸರ್ಕಾರದ ಮೇಲೆ ಒತ್ತಡ ಹೇರಲು ತೀರ್ಮಾನಿಸಿವೆ. ಈ ಸಂಬಂಧ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಕೆಲವು ಪದಾಧಿಕಾರಿಗಳು ಈಗಾಗಲೇ ಪ್ರಾಥಮಿಕ ಹಂತದ ಸಭೆ ನಡೆಸಿದ್ದಾರೆ. ಇನ್ನೊಂದು ಸಭೆಯನ್ನು ಒಕ್ಕಲಿಗರ ಸಮುದಾಯದ ನಾಯಕರ ಜತೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

> **ಸಾಮಾಜಿಕ- ಶೈಕ್ಷಣಿಕ ಸಮೀಕ್ಷೆ ವೈಜ್ಞಾನಿಕವಾಗಿ ನಡೆದಿಲ್ಲ. ಹೊಸದಾಗಿ ಗಣತಿ ನಡೆಸಿದರೆ ಅಭ್ಯಂತರವಿಲ್ಲ. ಈ ವರದಿ ಸೋರಿಕೆ ಆಗಿದ್ದನ್ನು ಒಪ್ಪಲು ಸಾಧ್ಯವಿಲ್ಲ**
> **ರೇಣುಕ ಪ್ರಸನ್ನ,** ಕಾರ್ಯದರ್ಶಿ, ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾ

ಅಲ್ಲದೇ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ಆದಿಚುಂಚನಗಿರಿ ಮಠಾಧೀಶರಾದ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಅವರು ಕೂಡ 'ಯಾವುದೇ ಕಾರಣಕ್ಕೂ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿ ಮಂಡನೆಗೆ ಒಪ್ಪಬಾರದು ಎಂದು ಸೂಚಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

'ಒಕ್ಕಲಿಗ ಸಮುದಾಯದ ಮುಖಂಡರ ಜತೆ ಈ ಸಂಬಂಧ ಸದ್ಯವೇ ಮಾತುಕತೆ ನಡೆಸಿ ಮುಂದಿನ ನಡೆಯನ್ನು ತೀರ್ಮಾನಿಸಲಾಗುವುದು. ಈ ಬಾರಿ ಕಾಂಗ್ರೆಸ್ ಸರ್ಕಾರದಲ್ಲಿ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯಕ್ಕೆ ಸೇರಿದ ಶಾಸಕರು ಅತಿ ಹೆಚ್ಚಿನ ಸಂಖ್ಯೆಯಲ್ಲಿ (ಲಿಂಗಾಯತ 39, ಒಕ್ಕಲಿಗ 21 ಶಾಸಕರು) ಗೆದ್ದಿದ್ದಾರೆ. ಈ ಸಮುದಾಯದವರ ವಾದವನ್ನು ಕಡೆಗಣಿಸುವಂತಿಲ್ಲ' ಎಂದು ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾದ ಪದಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಒಕ್ಕಲಿಗ- ಲಿಂಗಾಯತರ ಆಕ್ಷೇಪವೇನು: ಸಾಮಾಜಿಕ ಆರ್ಥಿಕ ಸಮೀಕ್ಷೆಯ ಹೆಸರಿನಲ್ಲಿ ಜಾತಿ ಗಣತಿ ನಡೆಸಿದ್ದು, ಇದು ವೈಜ್ಞಾನಿಕವಾಗಿ ನಡೆದಿಲ್ಲ. ಈ ಸಮೀಕ್ಷೆಯಲ್ಲಿ ವೀರಶೈವ-ಲಿಂಗಾಯತ ಮತ್ತು ಒಕ್ಕಲಿಗರ ಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ಅಲ್ಲದೇ, ವರದಿ ಮಂಡಿಸುವುದಕ್ಕೂ ಮೊದಲೇ ಸೋರಿಕೆ ಮಾಡಲಾಗಿದೆ.

'ಸೋರಿಕೆ ಆಗಿರುವ ಮಾಹಿತಿಯ ಪ್ರಕಾರ ರಾಜ್ಯದಲ್ಲಿ ವೀರಶೈವ- ಲಿಂಗಾಯತರ ಸಂಖ್ಯೆ 59 ಲಕ್ಷ ಮತ್ತು ಒಕ್ಕಲಿಗರ ಸಂಖ್ಯೆ 43 ಲಕ್ಷ ತೋರಿಸಲಾಗಿದೆ. ಇದು ದೋಷಪೂರಿತ ವರದಿ. ಅಹಿಂದ ವರ್ಗಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇತರ ಸಮುದಾಯಗಳಿಗೆ ಅನ್ಯಾಯ ಮಾಡಬಾರದು. ಅಹಿಂದ ವರ್ಗಕ್ಕೆ ಅನುಕೂಲ ಮಾಡಿಕೊಡುವ ಬಗ್ಗೆ ನಮ್ಮ ಆಕ್ಷೇಪವಿಲ್ಲ' ಎಂಬುದು ಎರಡು ಸಮುದಾಯದ ಪ್ರಮುಖರ ಪ್ರತಿಪಾದನೆ.

ಭಾರತ–ಅಮೆರಿಕ ಪಾಲುದಾರಿಕೆ: ಪ್ರಶಂಸೆ

ವಾಷಿಂಗ್ಟನ್ (ಪಿಟಿಐ): ಭಾರತ- ಅಮೆರಿಕ ಪಾಲುದಾರಿಕೆಯು 'ಸ್ಥಿರವಾಗಿದ್ದು, ವಾಗ್ದಾನಗಳಿಂದ ತುಂಬಿದೆ'. ಭಾರತ ಪ್ರಧಾನಿ ನರೇಂದ್ರ ಮೋದಿ ಅವರ ಅಮೆರಿಕ ಭೇಟಿಯಿಂದ ಉಭಯ ದೇಶಗಳ ಬಂಧ ಮತ್ತಷ್ಟು ಗಟ್ಟಿಯಾಗಲಿದೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಬೈಡನ್ ಮತ್ತು ಪ್ರಥಮ ಮಹಿಳೆ ಜಿಲ್ ಬೈಡನ್ ಅವರು ಜೂನ್ 22ರಂದು ಮೋದಿ ಅವರನ್ನು ಅಧಿಕೃತ ಭೇಟಿಗಾಗಿ ಆಹ್ವಾನಿಸಿದ್ದಾರೆ.


'ಭಾರತ ಮತ್ತು ಅಮೆರಿಕ ದೊಡ್ಡ, ಸಂಕ್ಷೀರ್ಣ ರಾಷ್ಟ್ರಗಳು ಎಂದು ನಮಗೆ ತಿಳಿದಿದೆ. ಅತ್ಯಾಧುನಿಕ ಪಾರದರ್ಶಕತೆ, ಮಾರುಕಟ್ಟೆ ಪ್ರವೇಶ ಮತ್ತು ನಮ್ಮ ಪ್ರಜಾಪ್ರಭುತ್ವ ಬಲಪಡಿಸಲು ಕೆಲಸ ಮಾಡಬೇಕಿದೆ' ಎಂದು ಅಮೆರಿಕ- ಭಾರತ ವಾಣಿಜ್ಯ ಮಂಡಳಿ ಸಭೆಯಲ್ಲಿ ಹೇಳಿದರು.

ಮೋದಿಗೆ ಬೈಡನ್ ಕುಟುಂಬದ ಆತಿಥ್ಯ: ಭಾರತ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜೂನ್ 21ರಂದು ರಾತ್ರಿ ಆತಿಥ್ಯ ನೀಡಲು ಅಮೆರಿಕ ಅಧ್ಯಕ್ಷ ಜೋ ಬೈಡನ್ ಕುಟುಂಬ ನಿರ್ಧರಿಸಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಧಾನಿ ಮೋದಿ ಅವರ ಈ ಐತಿಹಾಸಿಕ ಭೇಟಿಯ ಜೊತೆಗೆ ಜೂನ್ 22ರಂದು ಸೌತ್ ಲಾನ್ಸ್‌ನಲ್ಲಿ ಅಭೂತಪೂರ್ವ ಸ್ವಾಗತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅದರ ಹಿಂದಿನ ರಾತ್ರಿ ಅದ್ಭುತ ಮನರಂಜನೆಯೊಂದಿಗೆ ಭೋಜನ ವ್ಯವಸ್ಥೆ ಮಾಡಲಾಗಿದೆ ಎಂದು ಸಂಬಂಧಿಸಿದ ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕ ಉತ್ಸುಕ- ಕ್ಯಾಂಪ್‌ಬೆಲ್: ಉಭಯ ದೇಶಗಳ ಕಾರ್ಯತಂತ್ರದ ಬಾಂಧವ್ಯದ ಹಲವು ಮಜಲುಗಳನ್ನು ತೆರೆದಿಡುವ ಭಾರತದ ಪ್ರಧಾನಿಯ ಐತಿಹಾಸಿಕ ಭೇಟಿಗೆ ಅಮೆರಿಕ ಉತ್ಸುಕವಾಗಿದೆ ಎಂದು ಅಧ್ಯಕ್ಷರ ಉಪ ಸಹಾಯಕ ಕರ್ಟ್ ಕ್ಯಾಂಪ್‌ಬೆಲ್ ಹೇಳಿದ್ದಾರೆ.

ಉಭಯ ದೇಶಗಳ ಒಡಂಬಡಿಕೆಯ ಮಹತ್ವವನ್ನು ಅರಿತು ಸಂಭ್ರಮಾಚರಣೆಗೆ ಅಗಾಧ ಸಂಖ್ಯೆಯ ಷೇರುದಾರರು ವಾಷಿಂಗ್ಟನ್‌ಗೆ ಭೇಟಿ ನೀಡಲಿದ್ದಾರೆ ಎಂದು ಅವರು ತಿಳಿಸಿದರು.



ನೀರುನಾಯಿ ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ ನವಲಿ ಸಮೀಪ ತುಂಗಭದ್ರಾ ನದಿಯಲ್ಲಿ ಮಂಗಳವಾರ ನೀರುನಾಯಿಯೊಂದು ಮೀನಿನ ಬೇಟೆಯಲ್ಲಿ ತೊಡಗಿದ್ದ ಕ್ಷಣ

ಕ್ರಿವಿ ರಿಹ್: ಕ್ಷಿಪಣಿ ದಾಳಿಗೆ 11 ಸಾವು

ಕೀವ್ (ಎಪಿ): ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಹುಟ್ಟೂರಾದ ಕ್ರಿವಿ ರಿಹ್ ನಗರದ ಜನವಸತಿ ಕಟ್ಟಡದ ಮೇಲೆ ರಷ್ಯಾ ಪಡೆಗಳು ಮಂಗಳವಾರ ನಡೆಸಿದ ಕ್ಷಿಪಣಿ ದಾಳಿಗೆ 11 ಮಂದಿ ಮೃತಪಟ್ಟಿದ್ದು, 28 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವರು ಕಟ್ಟಡದೊಳಗೆ ಸಿಲುಕಿಕೊಂಡಿರುವ ಶಂಕೆ ಇದೆ. ಕ್ರೂಸ್ ಕ್ಷಿಪಣಿ ದಾಳಿಯಿಂದಾಗಿ ಐದು ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಹೊತ್ತಿಕೊಂಡಿದ್ದು, ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ ಎಂದು ಡ್ನಿಪ್ರೊಪೆಟ್ರೋವ್ಸ್ಕ ಪ್ರದೇಶದ ಗವರ್ನರ್ ಸೆರ್ಹಿ ಲೈಸಕ್ ವಿವರಿಸಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ಚಿತ್ರಗಳನ್ನು ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ತಮ್ಮ ಟೆಲಿಗ್ರಾಂ ಚಾನೆಲ್‌ನಲ್ಲಿ ಹಂಚಿಕೊಂಡಿದ್ದಾರೆ.

'ರಷ್ಯಾದ ಹಂತಕರು ನಾಗರಿಕರು ವಾಸವಿರುವ ಕಟ್ಟಡಗಳು ಮತ್ತು ಜನರ ಮೇಲಿನ ದಾಳಿಯನ್ನು ಮುಂದುವರಿಸಿದ್ದಾರೆ'.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು -	480

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಪುತ್ತೂರು	
ಕೋಕ	11000-25000
ಹೊಸತು	33500-40500
ಸಾಗರ	
ಬಿಳಿಗೋಟು	31399-33209
ಚಾಲಿ	36509-38059
ಕೋಕ	25399-34699
ಕೆಂಪುಗೋಟು	27699-37399
ರಾಶಿ	45009-51389
ಸಿಪ್ಪೆಗೋಟು	18569-21599
ಶಿವಮೊಗ್ಗ	
ಬೆಟ್ಟೆ	46000-54599
ಗೊರಬಲು	16200-38069
ರಾಶಿ	30029-52069
ಸರಕು	46159-83436
ಸಿದ್ದಾಪುರ	
ಬಿಳಿಗೋಟು	30119-33299
ಚಾಲಿ	36699-38459
ಕೋಕ	29891-32899
ಹಳೆಚಾಲಿ	38069-38399
ಕೆಂಪುಗೋಟು	30291-34469
ರಾಶಿ	44399-49599
ತಟ್ಟಿಬೆಟ್ಟೆ	38609-47099
ಶಿರಸಿ	
ಬೆಟ್ಟೆ	36699-46389
ಬಿಳಿಗೋಟು	24099-32999
ಚಾಲಿ	35019-38598
ಕೆಂಪುಗೋಟು	27499-36321
ರಾಶಿ	45099-49208
ತುಮಕೂರು	
ರಾಶಿ	49800-50850
ಯಲ್ಲಾಪುರ	
ಆಪಿ	55965-66995
ಬಿಳಿಗೋಟು	28612-35299
ಚಾಲಿ	35479-38601
ಕೋಕ	18899-32899
ಕೆಂಪುಗೋಟು	27999-36199
ರಾಶಿ	41909-53209
ತಟ್ಟಿಬೆಟ್ಟೆ	38809-45399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15400	15350	185.55 ಸೆಂಟ್ಸ್
ಎಸಿ	8120	8000	7700	
ಆರ್‌ಪಿ	10800	10850	10750	ಲಂಡನ್
ಆರ್‌ಸಿ	6230	248	6100	2706 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 13-6-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650(1625)
ಒಂದು ವಾರದ ಡೆಲಿವರಿ	1645(1620)
ಸೋಯಾ ಕಚ್ಚಾ	870(865)
ಪಾಮ್ ವಾರದ ಡೆಲಿವರಿ	838(933)
ಸೂರ್ಯಕಾಂತಿ ಎಣ್ಣೆ ಕಚ್ಚಾ	815(815)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,500(59,550)
ಬೆಳ್ಳಿ ಕೆ.ಜಿ 73,100(73,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಆಪಾದನೆ ಬಳಿಕವೂ ಟ್ರಂಪ್‌ಗೆ ಬೆಂಬಲ ಆಘಾತಕಾರಿ'

ನ್ಯೂಯಾರ್ಕ್ (ಎಪಿ): ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ನ್ಯಾಯಾಲಯವು ದೋಷಾರೋಪ ಹೊರಿಸಿದ ಮೇಲೂ ರಿಪಬ್ಲಿಕನ್ ಪಕ್ಷದ ಸಾಕಷ್ಟು ಜನರು ಟ್ರಂಪ್‌ಗೆ ಮತ ಚಲಾಯಿಸಲು ಯೋಚಿಸುತ್ತಿರುವುದು ಆಘಾತಕಾರಿ ಎಂದು ಜಿಲ್ ಬೈಡನ್ ಹೇಳಿದ್ದಾರೆ.

ಮುಂದಿನ ವರ್ಷ ನಡೆಯಲಿರುವ ಅಧ್ಯಕ್ಷೀಯ ಚುನಾವಣೆ ಹಿನ್ನೆಲೆಯಲ್ಲಿ, ಪತಿ ಹಾಗೂ ಅಮೆರಿಕ ಅಧ್ಯಕ್ಷ ಜೊ ಬೈಡನ್ ಪರ ಮೊದಲ ಬಾರಿಗೆ ಪ್ರಚಾರ ಸಭೆಯೊಂದರಲ್ಲಿ ಅವರು ಮಾತನಾಡಿದರು.

'ಮುಂದಿನ ವರ್ಷದ ಚುನಾವಣೆ ಜೊ ಬೈಡನ್ ಅವರ ಪ್ರಬಲ ನಾಯಕತ್ವ ಹಾಗೂ ಅವ್ಯವಸ್ಥೆ, ಭ್ರಷ್ಟಾಚಾರ, ದ್ವೇಷದ ಆಧಾರದ ಮೇಲೆ ಮತ ಕೇಳುವ ರಿಪಬ್ಲಿಕನ್ನರ ನಡುವೆ ನಡೆಯಲಿದೆ' ಎಂದು ಮ್ಯಾನ್‌ಹಾಟನ್‌ನಲ್ಲಿನ ಅಪಾರ್ಟ್‌ಮೆಂಟ್‌ನಲ್ಲಿ ನಡೆದ ಸಭೆಯಲ್ಲಿ ಹೇಳಿದರು.

'ರಿಪಬ್ಲಿಕನ್ನರು ಟ್ರಂಪ್ ವಿರುದ್ಧದ ಆಪಾದನೆಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಇದು ನಿಜಕ್ಕೂ ಆಘಾತಕಾರಿ' ಎಂದರು.

ಉದ್ದೇಶಪೂರ್ವಕ ಸುಸ್ತಿ: ಮಾತುಕತೆ ಮೂಲಕ ಇತ್ಯರ್ಥ

ಮುಂಬೈ (ಪಿಟಿಐ): ವಸೂಲಾಗದೆ ಇರುವ ಸಾಲಗಳನ್ನು ಗರಿಷ್ಠ ಪ್ರಮಾಣದಲ್ಲಿ ವಸೂಲು ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ, ಉದ್ದೇಶಪೂರ್ವಕ ಸುಸ್ತಿದಾರರು ಬಾಕಿ ಇರಿಸಿಕೊಂಡಿರುವ ಮೊತ್ತವನ್ನು ಬ್ಯಾಂಕ್‌ಗಳು ಮಾತುಕತೆ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅವಕಾಶ ಕಲ್ಪಿಸಿದೆ. 'ವಂಚನೆ' ಎಂದು ವರ್ಗೀಕರಣ ಆಗಿರುವ ಖಾತೆಗಳಿಗೂ ಇದು ಅನ್ವಯವಾಗುತ್ತೆ.

ಆರ್‌ಬಿಐ ನಿಯಂತ್ರಣದಲ್ಲಿ ಇರುವ ಎಲ್ಲ ಸಂಸ್ಥೆಗಳು ಮಾತುಕತೆ, ಹೊಂದಾಣಿಕೆ ಮೂಲಕ ಸಾಲದ ವ್ಯಾಜ್ಯವನ್ನು ಇತ್ಯರ್ಥ ಮಾಡಿಕೊಳ್ಳಲು ತಮ್ಮ ಆಡಳಿತ ಮಂಡಳಿಯು ಒಪ್ಪಿಗೆ ನೀಡಿರುವ ನೀತಿಯೊಂದನ್ನು ಹೊಂದಿರಬೇಕು ಎಂದು ಆರ್‌ಬಿಐ ಅಧಿಸೂಚನೆ ಹೇಳಿದೆ.

ನೇಪಾಳಕ್ಕೆ ಈರುಳ್ಳಿ, ಆಲೂಗೆಡ್ಡೆ ರಫ್ತು ಸ್ಥಗಿತ

ಕಠ್ಮಂಡು(ಪಿಟಿಐ): ನೇಪಾಳ ಸರ್ಕಾರವು ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಹೆಚ್ಚಿಸಿರುವುದರಿಂದ ದಿಕ್ಕೆಟ್ಟಿರುವ ನೇಪಾಳದ ವ್ಯಾಪಾರಿಗಳು ಭಾರತದಿಂದ ಈರುಳ್ಳಿ, ಆಲೂಗೆಡ್ಡೆ ಸೇರಿದಂತೆ ಇತರತರಕಾರಿಗಳನ್ನು ಆಮದು ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಿದ್ದಾರೆ.

ಭಾರತದಿಂದ ನೇಪಾಳಕ್ಕೆ ರಫ್ತಾಗುವ ತರಕಾರಿಗಳ ಮೇಲೆ ಅಲ್ಲಿನ ಸರ್ಕಾರ ಕಳೆದ ತಿಂಗಳಿನಿಂದ ಶೇ 13ರಷ್ಟು ವ್ಯಾಟ್ ವಿಧಿಸುತ್ತಿದೆ ಎಂದು ಮಂಗಳವಾರ ವ್ಯಾಪಾರಿಗಳು ತಿಳಿಸಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಬೆಂಗಳೂರು

• **ಪ್ರಶ್ನೆ: ನಾನು 77 ವರ್ಷ ವಯಸ್ಸಿನ ನಿವೃತ್ತ ಉದ್ಯೋಗಿ. 2002ರಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಬೆಂಗಳೂರಿನ ಯಲಹಂಕದಲ್ಲಿ ಮೂರು ಬೆಡ್ ರೂಂ ಮನೆ ಖರೀದಿಸಿದ್ದೆ. ನೋಂದಣಿ ಶುಲ್ಕ, ಕಾರು ಪಾರ್ಕಿಂಗ್ ಮೊತ್ತ ಇತ್ಯಾದಿ ಎಲ್ಲವೂ ಸೇರಿ ಅದರ ಅಂದಿನ ಬೆಲೆ ₹8.70 ಲಕ್ಷ. 2006ರಲ್ಲಿ ಇದಕ್ಕೆ ಬಣ್ಣ ಬಳಿದು, ಅಗತ್ಯವಿರುವ ಗ್ರಿಲ್, ಕಾರ್ ಪಾರ್ಕಿಂಗ್ ಸ್ಥಳದಲ್ಲಿ ಅರ್ಧ ಗೋಡೆ ಕಟ್ಟಿ ಅದಕ್ಕೂ ಗ್ರಿಲ್ ಹಾಕಿಸಿದೆ. ಈ ಫ್ಲ್ಯಾಟ್‌ಅನ್ನು 2022ರ ಏಪ್ರಿಲ್‌ನಲ್ಲಿ ₹40 ಲಕ್ಷಕ್ಕೆ ಮಾರಾಟ ಮಾಡಿದೆ. ಇದಕ್ಕೆ ಬರುವ ಬಂಡವಾಳ ವೃದ್ಧಿ ತೆರಿಗೆ ಎಷ್ಟು? ಮಾರಾಟದಿಂದ ಬಂದ ಹಣವನ್ನು ಬೇರೆ ಆಸ್ತಿ ಖರೀದಿಯಲ್ಲಿ ತೊಡಗಿಸಿದರೆ ತೆರಿಗೆ ಕಟ್ಟಬೇಕಾಗಿಲ್ಲವೇ? ಬಂಡವಾಳ ವೃದ್ಧಿ ತೆರಿಗೆಯಿಂದ ಹೇಗೆ ವಿನಾಯಿತಿ ಪಡೆಯಬಹುದು?**

ಉತ್ತರ: ನೀವು ಮನೆ ನವೀಕರಿಸಿದ ಮಾಹಿತಿ ನೀಡಿದ್ದೀರಿ. ಯಾವುದೇ ಕಟ್ಟಡ ಅಥವಾ ಮನೆಯನ್ನು ಅದರ ಉಪಯೋಗ, ಸೌಕರ್ಯ, ಭದ್ರತೆ ಇತ್ಯಾದಿಗಳನ್ನು ಹೆಚ್ಚಿಸುವ ಸಲುವಾಗಿ ನವೀಕರಿಸಿದಾಗ ಅದು ಕಟ್ಟಡದ ಭಾಗವಾಗುತ್ತದೆ ಮತ್ತು ಮೂಲದಲ್ಲಿ ಪಾವತಿಸಿದ ಮೌಲ್ಯ ಸಹಜವಾಗಿ ಹೆಚ್ಚುವಂತೆ ಮಾಡುತ್ತದೆ. ಅಂತಹ ಬಂಡವಾಳ ವೆಚ್ಚವನ್ನು ಪ್ರತ್ಯೇಕವಾಗಿ, ಹಣದುಬ್ಬರ ಸೂಚ್ಯಂಕದ ಆಧಾರದಂತೆ ಆಯಾ ವರ್ಷದಿಂದ ಮಾರಾಟದ ವರ್ಷದವರೆಗೆ ಕಟ್ಟಡದ ಖರೀದಿ/ನಿರ್ಮಾಣ ಮೊತ್ತಕ್ಕೆ ಸೇರಿಸಲು ಅವಕಾಶವಿದೆ. ಆದರೆ ಕಟ್ಟಡದ ಮೌಲ್ಯವೃದ್ಧಿಗೆ ನೇರವಾಗಿ ನೆರವಾಗದ ಯಾವುದೇ ದುರಸ್ತಿ, ಕಾಮಗಾರಿ ಖರ್ಚನ್ನು ಇದರ ಭಾಗವಾಗಿ ಪರಿಗಣಿಸುವುದಕ್ಕೆ ಅವಕಾಶವಿಲ್ಲ. ನಿಮ್ಮ ವಿಚಾರದಲ್ಲಿ ಇಂತಹ ದುರಸ್ತಿ ವೆಚ್ಚ ಬಿಟ್ಟು ಉಳಿದ ಮೊತ್ತವನ್ನು ಪರಿಗಣಿಸಬಹುದು.

ನಿಮ್ಮ ಮನೆ ಮಾರಾಟವಾದ ವರ್ಷದ ಹಣದುಬ್ಬರ ಸೂಚ್ಯಂಕ (331) ಹಾಗೂ 2006ನೇ ಸಾಲಿನ ಸೂಚ್ಯಂಕ (122) ಬಳಸಿ ಕಟ್ಟಡದ ಪ್ರಸ್ತುತ ಮೌಲ್ಯ ನಿರ್ಧರಿಸಬೇಕು. ಇದರಂತೆ, ಕಟ್ಟಡದ ಪ್ರಸಕ್ತ ಬೆಲೆ ಸುಮಾರು ₹23.60 ಲಕ್ಷ. ನಿಮ್ಮ ಮಾರಾಟ ಮೌಲ್ಯ ಇದಕ್ಕಿಂತ ಎಷ್ಟು ಅಧಿಕ ಇದೆಯೋ ಅದು ನಿಮ್ಮ ಲಾಭಾಂಶ. ಬಂದ ಲಾಭಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 112ಎ ಅಡಿ ಶೇಕಡ 20.8ರಷ್ಟು ಸೆಸ್ ಸಹಿತ ತೆರಿಗೆ ಇರುತ್ತದೆ. ತೆರಿಗೆ ಪಾವತಿಗೆ ಪರ್ಯಾಯವಾಗಿ, ಕೆಲವು ಕಾಲ ಮಿತಿಯೊಳಗೆ ಮಾಡಿದ ಹೂಡಿಕೆಗಳಿಗಷ್ಟೇ ತೆರಿಗೆ ವಿನಾಯಿತಿಗೆ ಅವಕಾಶವಿದೆ.

ತೆರಿಗೆ ಉಳಿತಾಯ ಮಾಡಲು, ಮಾರಾಟ ಆದಾಗಿನಿಂದ ಎರಡು ವರ್ಷದೊಳಗೆ ಹೊಸ ಮನೆಯ ಖರೀದಿ, ಅಥವಾ ಮೂರು ವರ್ಷದೊಳಗೆ ಮನೆಯ ನಿರ್ಮಾಣಕ್ಕೆ ಅವಕಾಶವಿದೆ. ಇದನ್ನು ನಿಮ್ಮ ತೆರಿಗೆ ವಿವರ ಸಲ್ಲಿಸುವ ಮೊದಲು ಹೂಡಿಕೆ ಮಾಡಿ. ಖರೀದಿ ಇನ್ನೂ ನಿರ್ಧಾರವಾಗದಿದ್ದರೆ, ಈ ಅವಧಿಯಲ್ಲಿ ಬಂದ ಮೊತ್ತವನ್ನು 'ಕ್ಯಾಪಿಟಲ್ ಗೇನ್ಸ್ ಅಕೌಂಟ್ ಸ್ಕೀಂ' (ಬಂಡವಾಳ ವೃದ್ಧಿ ಖಾತೆ ಯೋಜನೆ) ಖಾತೆಯನ್ನು ಬ್ಯಾಂಕಿನಲ್ಲಿ ತೆರೆದು ಮೇಲಿನ ಸಮಯದೊಳಗೆ ಮನೆ ಖರೀದಿ/ನಿರ್ಮಾಣಕ್ಕೆ ಉಪಯೋಗಿಸಲು ಅವಕಾಶವಿದೆ. ನಿಮ್ಮ ವಿಚಾರದಲ್ಲಿ ಇದನ್ನು ಕೂಡಲೇ ಮಾಡಿ. ಇದಲ್ಲದೆ, ನಿರ್ದಿಷ್ಟ ಬಾಂಡ್‌ಗಳಲ್ಲಿ 5 ವರ್ಷದ ಅವಧಿಗೆ ಗರಿಷ್ಠ ₹50 ಲಕ್ಷದ ತನಕ ಹೂಡಿಕೆ ಮಾಡುವ ಮೂಲಕವೂ ತೆರಿಗೆ ವಿನಾಯಿತಿ ಪಡೆಯಬಹುದು. ಆದರೆ, ಇದಕ್ಕೆ ಕಾಲಮಿತಿ ಮಾರಾಟವಾದ ನಂತರದ 6 ತಿಂಗಳು. ಹೆಚ್ಚಿನ ವಿವರಗಳೊಂದಿಗೆ ಸಮೀಪದ ತೆರಿಗೆ ಸಲಹೆಗಾರರನ್ನು ಖುದ್ದಾಗಿ ಸಂಪರ್ಕಿಸಿ.

ಪ್ರೊಫೆಸರ್ ಬಿ. ಜಯದೇವಪ್ಪ, ಶಿವಮೊಗ್ಗ

• **ಪ್ರಶ್ನೆ:** ನಾನು ನಿವೃತ್ತ ನೌಕರ, ತಿಂಗಳ ಪಿಂಚಣಿ ₹1 ಲಕ್ಷದ ಮೇಲಿದೆ. ಆದಾಯ ತೆರಿಗೆ ಕಟ್ಟುತ್ತಿದ್ದೇನೆ. ನನ್ನ ಮಗ ಆಸ್ಟ್ರೇಲಿಯಾದಲ್ಲಿ ನೌಕರಿ ಮಾಡುತ್ತಿದ್ದಾನೆ. ಆತ ನನಗೆ ಪ್ರತಿ ತಿಂಗಳೂ ಹಣ ಕಳಿಸುತ್ತಿದ್ದಾನೆ. ಅದು ಆಸ್ಟ್ರೇಲಿಯಾದ ಕರೆನ್ಸಿಯಿಂದ ರೂಪಾಯಿಗೆ ಪರಿವರ್ತನೆಯಾಗಿ ಬರುತ್ತಿದೆ. ಬ್ಯಾಂಕ್ ಖಾತೆಗೆ ಬರುವ ಹಣದ ವರ್ಗಾವಣೆ ಸಂದೇಶದಲ್ಲಿ 'ಗಿಫ್ಟ್' ಎಂಬ ಮಾಹಿತಿ ಇದೆ. ನನ್ನ ಪ್ರಶ್ನೆಗಳೆಂದರೆ: ನಾನು ಡಾಲರ್ ತರುತ್ತಿರುವ ಕಾರಣ ಆದಾಯ ತೆರಿಗೆಯಲ್ಲಿ ನನಗೆ ವಿನಾಯಿತಿ ದೊರಕಬಹುದೇ? ಆಸ್ಟ್ರೇಲಿಯಾದಲ್ಲಿ ಈಗಾಗಲೇ ತೆರಿಗೆ ಕಟ್ಟಿದ ಹಣದಿಂದ ನನಗೆ ಈ ಮೊತ್ತ ಬರುತ್ತಿದೆ. ಈ ಹಣಕ್ಕೆ ನಾನು ಆದಾಯ ತೆರಿಗೆ ಕಟ್ಟಬೇಕೇ?

ಉತ್ತರ: ಯಾವುದೇ ರಫ್ತು ವ್ಯವಹಾರ ಕೈಗೊಳ್ಳುವ ಸಂಸ್ಥೆಗಳು ವಿದೇಶಿ ವಿನಿಮಯ ಮೊತ್ತವನ್ನು ಭಾರತಕ್ಕೆ ತರುವುದನ್ನು ಪ್ರೋತ್ಸಾಹಿಸುವ ಸಲುವಾಗಿ ಕೆಲವೊಂದು ತೆರಿಗೆ ವಿನಾಯಿತಿ ನೀಡಲಾಗುತ್ತದೆ. ಆದರೆ, ನಿಮ್ಮ ವಿಚಾರದಲ್ಲಿ ವಿದೇಶದಿಂದ ಬರುತ್ತಿರುವ ಹಣವು, ಮಗ ನಿಮಗೆ ಮಾಡುವ ಆರ್ಥಿಕ ನೆರವು, ಉಡುಗೊರೆ ಅಥವಾ ಖರ್ಚು ವೆಚ್ಚಕ್ಕಾಗಿ ಕಳಿಸುವ ಮೊತ್ತ. ಹೀಗಾಗಿ ನಿಮಗೆ ಯಾವುದೇ ವಿಶೇಷ ತೆರಿಗೆ ವಿನಾಯಿತಿಗಳಿಲ್ಲ.

ನಿಮ್ಮ ಮಗ ಆಸ್ಟ್ರೇಲಿಯಾದಿಂದ ಕಳುಹಿಸುತ್ತಿರುವ ಮೊತ್ತವನ್ನು ಭಾರತದಲ್ಲಿ ಸ್ವೀಕರಿಸುವುದಕ್ಕೆ ಇರುವ ತೆರಿಗೆಯ ಬಗ್ಗೆ ನೋಡೋಣ. ಮಕ್ಕಳು ಸೇರಿದಂತೆ ನಿರ್ದಿಷ್ಟ ಸಂಬಂಧಿಕರಿಂದ ಉಡುಗೊರೆಯಾಗಿ ಬರುವ ಮೊತ್ತ ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 56(2)ರ ನಿಬಂಧನೆಗಳ ವ್ಯಾಪ್ತಿಯಿಂದ ಹೊರಗಿದೆ. ಹೀಗಾಗಿ ಈ ಮೊತ್ತಕ್ಕೆ ತೆರಿಗೆ ಇಲ್ಲ. ಆದರೆ, ನಿಮಗೆ ಅಂತಹ ಮೊತ್ತ ಜಮಾ ಆಗುವ ಬ್ಯಾಂಕಿನ ಶಾಖೆಗೆ ಭೇಟಿ ನೀಡಿ ನಿಮಗೆ ಬಂದಿರುವ ಹಣದ ಮೂಲದ ಬಗ್ಗೆ ಮಾಹಿತಿ ನೀಡಬೇಕು. ಇದಲ್ಲದೆ, ವಿದೇಶಿ ವಿನಿಮಯ ಒಳಹರಿವಿನ ಪ್ರಮಾಣಪತ್ರ ಅಥವಾ 'ಎಫ್‌ಐಆರ್‌ಸಿ' ದಾಖಲೆ ನೀಡುವ ಬಗ್ಗೆ ಬ್ಯಾಂಕಿನಲ್ಲಿ ವಿಚಾರಿಸಿ. ಇದು ಭಾರತಕ್ಕೆ ಹಣ ಬಂದಿರುವುದರ ಪುರಾವೆಯಾಗಿ ಕಾರ್ಯನಿರ್ವಹಿಸುವ ದಾಖಲೆ.

ನಿಮ್ಮ ಮಗ ವಿದೇಶದಲ್ಲಿ ತಮ್ಮ ಆದಾಯಕ್ಕೆ ತೆರಿಗೆ ಕಟ್ಟಿರುವುದಾಗಿ ಹೇಳಿದ್ದೀರಿ. ಅವರ ಖಾತೆಯೊಂದು ಭಾರತದಲ್ಲಿದ್ದರೆ ಅದಕ್ಕೆ ಹಣ ವರ್ಗಾಯಿಸಿ ಅಗತ್ಯ ದಾಖಲೆಗಳ ಮೂಲಕ ಅಲ್ಲಿಂದ ನಿಮ್ಮ ಖಾತೆಗೆ ಜಮಾ ಮಾಡಿಸಬಹುದು. ಈ ಬಗ್ಗೆ ನಿಮ್ಮ ಬ್ಯಾಂಕಿನಲ್ಲೂ ವಿಚಾರಿಸಿ. ಯಾವುದೇ ಮೊತ್ತವನ್ನು ಭಾರತಕ್ಕೆ ವರ್ಗಾವಣೆ ಮಾಡಿದಾಗ, ಬಂದಿರುವ ಮೊತ್ತ ಮೊದಲ ಹಂತದಲ್ಲಿ ವಿದೇಶದಲ್ಲಿ ಅದಾಗಲೇ ತೆರಿಗೆಗೊಳಪಟ್ಟಿದೆಯೇ ಎಂಬ ಬಗ್ಗೆ ಮೊದಲು ಗಮನಿಸಲಾಗುತ್ತದೆ. ಅಂತಹ ಸಂದರ್ಭದಲ್ಲೂ ತಮ್ಮದೇ ಮೊತ್ತವನ್ನು ಭಾರತದ ತಮ್ಮದೇ ಖಾತೆಗೆ ವರ್ಗಾಯಿಸುವಾಗ ಮತ್ತೆ ತೆರಿಗೆ ಪಾವತಿಸುವ ಅಗತ್ಯವಿಲ್ಲ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

₹1 ಲಕ್ಷದ ಗಡಿ ದಾಟಿದ ಎಂಆರ್‌ಎಫ್ ಷೇರು ಮೌಲ್ಯ

ನವದೆಹಲಿ (ಪಿಟಿಐ): ಟೈರುಗಳನ್ನು ತಯಾರು ಮಾಡುವ ಎಂಆರ್‌ಎಫ್ ಕಂಪನಿಯ ಷೇರು ಮೌಲ್ಯವು ದೇಶದ ಷೇರುಪೇಟೆಗಳಲ್ಲಿ ಮಂಗಳವಾರದ ವಹಿವಾಟಿನಲ್ಲಿ ₹1 ಲಕ್ಷದ ಗಡಿಯನ್ನು ದಾಟಿತು!

ದಿನದ ವಹಿವಾಟಿನ ನಡುವಿನಲ್ಲಿ ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ) ಷೇರಿನ ಮೌಲ್ಯವು ₹1,00,300ಕ್ಕೆ ತಲುಪಿತ್ತು. ವಹಿವಾಟಿನ ಕೊನೆಯಲ್ಲಿ ಮೌಲ್ಯವು ₹99,950ಕ್ಕೆ ಇಳಿಕೆಯಾಯಿತು. ರಾಷ್ಟ್ರೀಯ ಷೇರುಪೇಟೆಯಲ್ಲಿ (ಎನ್‌ಎಸ್‌ಇ) ಇದರ ಮೌಲ್ಯವು ವಹಿವಾಟಿನ ನಡುವಿನಲ್ಲಿ ₹1,00,439ಕ್ಕೆ ತಲುಪಿತ್ತು.

'ದೇಶದ ಷೇರುಪೇಟೆಗಳಲ್ಲಿನ ಪ್ರಮುಖ ಷೇರುಗಳ ಪೈಕಿ ಒಂದಾಗಿರುವ ಎಂಆರ್‌ಎಫ್ ಇತಿಹಾಸ ಸೃಷ್ಟಿಸಿತು. ಆರು ಅಂಕಿಗಳ ಮೌಲ್ಯ (₹1 ಲಕ್ಷ) ಹೊಂದಿದ ಮೊದಲ ಷೇರು ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು' ಎಂದು ಸ್ವಸ್ತಿಕಾ ಇನ್ವೆಸ್ಟ್‌ಮಾರ್ಟ್‌ನ ಸಂಶೋಧನಾ ಮುಖ್ಯಸ್ಥ ಸಂತೋಷ್ ಮೀನಾ ಹೇಳಿದ್ದಾರೆ.

ದೇಶದ ಷೇರುಪೇಟೆಗಳಲ್ಲಿ ಅತಿಹೆಚ್ಚಿನ ಮೌಲ್ಯ ಹೊಂದಿರುವ ಷೇರು ಎಂಆರ್‌ಎಫ್ ಕಂಪನಿಯದ್ದು. ಇದನ್ನು ಹೊರತುಪಡಿಸಿದರೆ ಹನಿವೆಲ್ ಆಟೊಮೇಷನ್ ಕಂಪನಿಯ ಷೇರಿಗೆ ಹೆಚ್ಚಿನ ಮೌಲ್ಯ ಇದೆ. ಇದರ ಬೆಲೆ ಮಂಗಳವಾರ ₹41,200 ಆಗಿತ್ತು.

ಮುಂಬೈ ಷೇರುಪೇಟೆಯಲ್ಲಿ ಇರುವ ಮಾಹಿತಿ ಪ್ರಕಾರ, ಎಂಆರ್‌ಎಫ್ ಕಂಪನಿಯು ಷೇರುದಾರರಿಗೆ ಇದುವರೆಗೆ ಬೋನಸ್ ನೀಡಿಲ್ಲ.

ಸಂಕ್ಷಿಪ್ತ ಸುದ್ದಿ

ದೋಣಿ ಮಗುಚಿ 100 ಮಂದಿ ಸಾವು

ಅಬುಜಾ(ನೈಜೀರಿಯಾ)(ಎಪಿ): ಉತ್ತರ ನೈಜೀರಿಯಾದ ನೈಜರ್ ನದಿಯಲ್ಲಿ ದೋಣಿಯೊಂದು ಮಗುಚಿದ ಪರಿಣಾಮ ಕನಿಷ್ಠ 100 ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಮಂಗಳವಾರ ಹೇಳಿದ್ದಾರೆ.

'ಈ ದುರಂತ ಸೋಮವಾರ ಸಂಭವಿಸಿದೆ. ಬದುಕುಳಿದವರ ಶೋಧ ಕಾರ್ಯ ತೀವ್ರಗೊಳಿಸಲಾಗಿದೆ' ಎಂದು ಪೊಲೀಸ್ ಇಲಾಖೆ ವಕ್ತಾರ ಒಕಾಸಾನ್ಮಿ ಅಜಯಿ ಹೇಳಿದ್ದಾರೆ.

'ಪಾಕ್‌ನೊಂದಿಗೆ ದ್ವಿಪಕ್ಷೀಯ ಸಂಬಂಧ ವಿಸ್ತರಣೆ'

ಇಸ್ಲಾಮಾಬಾದ್ (ಪಿಟಿಐ): ರಿಯಾಯತಿ ದರದಲ್ಲಿ ಪಾಕಿಸ್ತಾನಕ್ಕೆ ಕಳುಹಿಸಿದ್ದ ರಷ್ಯಾದ ತೈಲವು ಕರಾಚಿ ಬಂದರಿಗೆ ಭಾನುವಾರ ತಲುಪಿದೆ. ಈ ಮಧ್ಯೆ ಪಾಕಿಸ್ತಾನದೊಂದಿಗೆ ದ್ವಿಪಕ್ಷೀಯ ಸಂಬಂಧವನ್ನು ವಿಸ್ತರಿಸಲು ಮತ್ತು ಇನ್ನಷ್ಟು ಗಾಢಗೊಳಿಸಲು ರಷ್ಯಾ ಉತ್ಸುಕವಾಗಿದೆ ಎಂದು ಅಲ್ಲಿನ ವಿದೇಶಾಂಗ ಸಚಿವ ಸೆರ್ಗೈ ಲಾವ್ರೋವ್ ಹೇಳಿದ್ದಾರೆ.

ಮಾಸ್ಕೊ ಮತ್ತು ಇಸ್ಲಾಮಾಬಾದ್ ನಡುವಿನ ರಾಜತಾಂತ್ರಿಕ ಸಂಬಂಧ ಸ್ಥಾಪನೆಯ 75ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಲಾವ್ರೋವ್ ಅವರು ವಿಡಿಯೊ ಮೂಲಕ ಈ ಸಂದೇಶ ರವಾನಿಸಿದ್ದಾರೆ.

ಗಡಿ ಅಪರಾಧ ಮತ್ತು ಭಯೋತ್ಪಾದನೆ ಸೇರಿದಂತೆ ಭದ್ರತಾ ಸವಾಲು ಮತ್ತು ಬೆದರಿಕೆಗಳನ್ನು ಎದುರಿಸುವ ಜಂಟಿ ಪ್ರಯತ್ನಗಳಲ್ಲಿ ಪಾಕಿಸ್ತಾನವನ್ನು ಪ್ರಮುಖ ಅಂತರರಾಷ್ಟ್ರೀಯ ಪಾಲುದಾರ ಎಂದು ರಷ್ಯಾ ಪರಿಗಣಿಸುತ್ತದೆ ಎಂದಿದ್ದಾರೆ.

'ಭಾರತೀಯ ವಿದ್ಯಾರ್ಥಿಗಳ ರಕ್ಷಣೆಗೆ ಬದ್ಧ'

ಟೊರೊಂಟೊ(ಪಿಟಿಐ): ನಕಲಿ ಪ್ರವೇಶಾತಿ ಪತ್ರ ಹೊಂದಿದ ಆರೋಪದ ಮೇಲೆ ಗಡಿಪಾರು ಶಿಕ್ಷೆ ಎದುರಿಸುತ್ತಿರುವ ಭಾರತೀಯ ವಿದ್ಯಾರ್ಥಿಗಳನ್ನು ಇಲ್ಲಿಯೇ ಉಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಕೆನಡಾ ಸರ್ಕಾರ ಭರವಸೆ ನೀಡಿದೆ.

ಉನ್ನತ ಶಿಕ್ಷಣ ಪಡೆಯಲು ತೆರಳಿದ್ದ ಪಂಜಾಬ್‌ನ 700 ವಿದ್ಯಾರ್ಥಿಗಳು ಕೆನಡಾದಲ್ಲಿ ನೆಲೆಸಲು ಮಾರ್ಚ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ದಾಖಲೆಗಳ ಪರಿಶೀಲನೆ ವೇಳೆ ಎಲ್ಲರೂ ನಕಲಿ ಪ್ರವೇಶಾತಿ ಪತ್ರ ಹೊಂದಿರುವುದು ಬೆಳಕಿಗೆ ಬಂದಿತ್ತು.

ಕಳೆದ ವಾರ ಅಲ್ಲಿನ ಸಂಸದೀಯ ಸಮಿತಿಯು ವಿದ್ಯಾರ್ಥಿಗಳನ್ನು ಗಡಿಪಾರು ಮಾಡದಂತೆ ಸರ್ವಾನುಮತದ ನಿರ್ಣಯ ಅಂಗೀಕರಿಸಿತ್ತು. ಸೋಮವಾರ ನಡೆದ ಸಂಸತ್ ಸಭೆಯಲ್ಲೂ ಈ ವಿಷಯ ಪ್ರತಿಧ್ವನಿಸಿತು. ವಿದ್ಯಾರ್ಥಿಗಳ ಸಮಸ್ಯೆ ಬಗ್ಗೆ ಅಲ್ಲಿನ ವಿರೋಧ ಪಕ್ಷದ ಸದಸ್ಯ ಜೆನ್ನಿ ಕ್ವಾನ್ ಸಭೆಯ ಗಮನ ಸೆಳೆದರು. ಇದಕ್ಕೆ ಉತ್ತರಿಸಿದ ಪೌರತ್ವ ಮತ್ತು ವಲಸೆ ಖಾತೆ ಸಚಿವ ಸೀನ್ ಫ್ರೇಸರ್, 'ಮುಗ್ಧ ವಿದ್ಯಾರ್ಥಿಗಳು ಮೋಸಕ್ಕೆ ಬಲಿಯಾಗಿದ್ದಾರೆ. ಅವರ ಸಮಸ್ಯೆ ಪರಿಹರಿಸಿ ಇಲ್ಲಿಯೇ ಉಳಿಯಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದೆ' ಎಂದರು.

ಕುಸ್ತಿಪಟುಗಳ ವಿಚಾರದಿಂದ ಬಿಜೆಪಿಗೆ ಹಾನಿ

ವಲ್ಲಾಡೋಲಿಡ್ (ಸ್ಪೇನ್)(ಪಿಟಿಐ): ಕುಸ್ತಿಪಟುಗಳ ಪ್ರತಿಭಟನೆ ವಿಚಾರವಾಗಿ ಕೇಂದ್ರ ಸರ್ಕಾರವನ್ನು ಇಲ್ಲಿ ಟೀಕಿಸಿದ ಕಾಂಗ್ರೆಸ್ ಮುಖಂಡ ಶಶಿ ತರೂರ್, 'ಇದು ಬಿಜೆಪಿಗೆ ದೊಡ್ಡ ಪ್ರಮಾಣದ ಹಾನಿ ಉಂಟುಮಾಡಲಿದೆ' ಎಂದು ಹೇಳಿದ್ದಾರೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಪ್ರತಿಭಟನೆ ವಿಚಾರವಾಗಿ ರಾಷ್ಟ್ರಕ್ಕೆ ಸ್ವೀಕಾರಾರ್ಹವಲ್ಲದ ನಿಲುವು ಪ್ರಕಟಿಸಿದೆ ಎಂದೂ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

‘ಸಿಎಂಪಿ’: ಪವಾರ್ ನೇತೃತ್ವದಲ್ಲಿ ಸಮಿತಿಗೆ ಒಲವು

ಪ್ರಜಾವಾಣಿ ವಾರ್ತೆ



ಶರದ್ ಪವಾರ್

ನವದೆಹಲಿ: ಪಟ್ನಾದಲ್ಲಿ ಜೂನ್ 23ರಂದು ಬಿಜೆಪಿಯೇತರ ವಿರೋಧ ಪಕ್ಷಗಳ ಸಭೆ ನಿಗದಿಯಾಗಿದ್ದರೆ, ಮತ್ತೊಂದೆಡೆ ಎನ್‌ಸಿಪಿ ವರಿಷ್ಠ ಶರದ್ ಪವಾರ್ ನೇತೃತ್ವದಲ್ಲಿ ‘ಸಾಮಾನ್ಯ ಕನಿಷ್ಠ ಕಾರ್ಯಕ್ರಮ’ ಸಿದ್ಧಪಡಿಸಲು ಸಮಿತಿ ರಚಿಸುವ ಕುರಿತು ಚರ್ಚೆಯೂ ಆರಂಭವಾಗಿದೆ.

‘ಸಾಮಾನ್ಯ ಕನಿಷ್ಠ ಕಾರ್ಯಕ್ರಮವು (ಸಿಎಂಪಿ) ವಿರೋಧ ಪಕ್ಷಗಳು ಒಗ್ಗೂಡಬೇಕು ಎಂಬ ಪ್ರಯತ್ನಗಳಿಗೆ ಸೈದ್ಧಾಂತಿಕ ಸ್ಪಷ್ಟತೆ ನೀಡುತ್ತದೆ’ ಎಂಬುದು ವಿಪಕ್ಷಗಳ ಸಭೆಯ ಆತಿಥ್ಯವಹಿಸಿರುವ ಜೆಡಿಯುನ ನಿಲುವಾಗಿದೆ. ಈ ಹಿನ್ನೆಲೆಯಲ್ಲಿ ಸಿಎಂಪಿ ಸಿದ್ಧಪಡಿಸಲು ಸಮಿತಿ ರಚನೆಗೆ ಹೆಚ್ಚು ಒಲವು ವ್ಯಕ್ತವಾಗುತ್ತಿದೆ ಎಂದು ಮೂಲಗಳು ಹೇಳಿವೆ.

ರಾಜಕೀಯ ಪಕ್ಷಗಳ ನಡುವೆ ಮೈತ್ರಿ ಸಾಧಿಸುವಲ್ಲಿ ಶರದ್ ಪವಾರ್ ಅವರಿಗೆ ಅಪಾರ ಅನುಭವ ಇದೆ. 2019ರಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ನಡೆದ ಚುನಾವಣೆ ನಂತರ ಬಿಜೆಪಿ ವಿರುದ್ಧ ಮಹಾ ವಿಕಾಸ್ ಅಘಾಡಿ ಮೈತ್ರಿಕೂಟ ರಚನೆಯಲ್ಲಿ ಪವಾರ್ ಪ್ರಮುಖ ಪಾತ್ರ ವಹಿಸಿದ್ದರು. ಹಾಗಾಗಿ, ಈ ಸಮಿತಿಯ ನೇತೃತ್ವವನ್ನು ಪವಾರ್ ವಹಿಸಬೇಕು ಎಂಬ ಕೂಗು ಬಲವಾಗಿ ಕೇಳಿಬರುತ್ತಿದೆ.

‘ಹಲವು ಲೋಕಸಭಾ ಕ್ಷೇತ್ರಗಳಲ್ಲಿ ಬಹುಕೋನ ಸ್ಪರ್ಧೆ ಏರ್ಪಡುವುದನ್ನು ಸಿಎಂಪಿ ತಪ್ಪಿಸುತ್ತದೆ. ವಿರೋಧ ಪಕ್ಷಗಳ ಮೈತ್ರಿಕೂಟದ ಪರವಾಗಿ ಒಬ್ಬ ಅಭ್ಯರ್ಥಿಯನ್ನು ಮಾತ್ರ ಕಣಕ್ಕೆ ಇಳಿಸುವುದರಿಂದ ಕನಿಷ್ಠ 400 ಕ್ಷೇತ್ರಗಳಲ್ಲಿ ಬಿಜೆಪಿ ವಿರೋಧಿ ಮತಗಳ ವಿಭಜನೆಯನ್ನು ತಡೆಯಲು ಸಾಧ್ಯ’ ಎಂಬುದು ಸಿಎಂಪಿ ಪರ ವಕಾಲತ್ತು ವಹಿಸುತ್ತಿರುವವರ ವಾದವಾಗಿದೆ.

ಬಿಪೊರ್‌ಜಾಯ್ ಚಂಡಮಾರುತ: 4 ಜಿಲ್ಲೆಗಳಲ್ಲಿ ಪರಿಣಾಮ ನಿರೀಕ್ಷೆ • 25 ಸೆಂ.ಮೀ ವರೆಗೂ ಮಳೆ, ಪ್ರವಾಹ ಸಾಧ್ಯತೆ

30 ಸಾವಿರ ಜನರ ಸ್ಥಳಾಂತರ, ರಕ್ಷಣೆಗೆ ಸಜ್ಜು

ನವದೆಹಲಿ/ಅಹಮದಾಬಾದ್ (ಪಿಟಿಐ): ತೀವ್ರ ಪರಿಣಾಮ ಬೀರಲಿದೆ ಎನ್ನಲಾದ ಬಿಪೊರ್‌ಜಾಯ್ ಚಂಡಮಾರುತವು ಗುಜರಾತ್‌ನ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಹೆಚ್ಚು ಬಾಧಿಸುವ ಆತಂಕವಿದ್ದು, ಮುಂಜಾಗ್ರತೆಯಾಗಿ ಒಟ್ಟು 30 ಸಾವಿರ ಜನರನ್ನು ಸ್ಥಳಾಂತರಿಸಲಾಗಿದೆ.

ಕಛ್, ದೇವ್‌ಭೂಮಿ ದ್ವಾರ್ಕಾ, ಪೋರಬಂದರ್, ಜಾಮ್‌ನಗರ ಜಿಲ್ಲೆಗಳಲ್ಲಿ ಚಂಡಮಾರುತ ಹೆಚ್ಚಿನ ಪರಿಣಾಮ ಬೀರಲಿದೆ. ಗಾಳಿಯ ವೇಗ ಗಂಟೆಗೆ 125–150 ಕಿ.ಮೀ. ಇರಲಿದೆ. ಭಾರಿ ಮಳೆ, ಪ್ರವಾಹ ಪರಿಸ್ಥಿತಿಯೂ ಎದುರಾಗಬಹುದು ಎಂದು ಹವಾಮಾನ ಇಲಾಖೆಯು ಎಚ್ಚರಿಸಿದೆ.

ಪ್ರತಿಕೂಲ ಪರಿಣಾಮ ಬೀರಬಹುದು ಎಂಬ ಹಿನ್ನೆಲೆಯಲ್ಲಿ ಕಛ್, ದೇವ್‌ಭೂಮಿ ದ್ವಾರ್ಕಾ, ಜಾಮ್‌ನಗರ ಜಿಲ್ಲೆಗಳಲ್ಲಿ, ಸಮುದ್ರ ತೀರದ ವಿವಿಧ ಗ್ರಾಮಗಳಿಂದ ಜನರನ್ನು ಸ್ಥಳಾಂತರಿಸಲಾಗಿದೆ.

ಈ ನಾಲ್ಕು ಜಿಲ್ಲೆಗಳಲ್ಲಿ ಧಾರಾಕಾರ ಅಂದರೆ 20 ಸೆಂ.ಮೀ.ಗಿಂತಲೂ ಅಧಿಕ ಪ್ರಮಾಣದ ಮಳೆಯಾಗಬಹುದು. ಮಳೆಯ ಪ್ರಮಾಣ 25 ಸೆಂ.ಮೀ. ಮೀರಿದರೂ ಆಶ್ಚರ್ಯವಿಲ್ಲ. ಸಾಮಾನ್ಯವಾಗಿ ಇಷ್ಟು ಪ್ರಮಾಣದ ಮಳೆ ಇಲ್ಲಿ ಆಗುವುದಿಲ್ಲ. ಈ ಬಾರಿ ಪರಿಸ್ಥಿತಿ ಭಿನ್ನವಾಗಿದೆ. ತಗ್ಗು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಬಹುದು. ರಾಜಕೋಟ್, ಮೊರ್ಬಿ, ಜುನಾಗಢ್‌ನಲ್ಲಿಯೂ ಧಾರಾಕಾರ ಮಳೆಯಾಗಬಹುದು ಎಂದು ತಿಳಿಸಿದೆ.

ಈ ಜಿಲ್ಲೆಗಳಲ್ಲಿ ಗಾಳಿಯ ವೇಗವು ಗಂಟೆಗೆ 145 ಕಿ.ಮೀ ಇರಲಿದೆ. ಬೆಳೆ, ಮನೆ, ರಸ್ತೆಗಳಿಗೆ ಹಾನಿ, ವಿದ್ಯುತ್ ಹಾಗೂ ಸಂಪರ್ಕ ವ್ಯವಸ್ಥೆ ವ್ಯತ್ಯಯವಾಗಬಹುದು. ಸಮುದ್ರದಲ್ಲಿ ಆರು ಮೀಟರ್‌ವರೆಗೂ ಅಲೆಗಳು ಏಳಬಹುದು. ಸಂಭವನೀಯ ಬಾಧಿತ ಪ್ರದೇಶಗಳಿಂದ ಸುರಕ್ಷಿತ ಸ್ಥಳಗಳಿಗೆ ಜನರನ್ನು ಸ್ಥಳಾಂತರಿಸಬೇಕು ಎಂದು ಐಎಂಡಿ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಸಲಹೆ ಮಾಡಿದ್ದಾರೆ.

ಚಂಡಮಾರುತವು ಗುಜರಾತ್‌ನ ಸೌರಾಷ್ಟ್ರ ಮತ್ತು ಕಚ್ ಕರಾವಳಿ ಜಿಲ್ಲೆಗಳು ಹಾಗೂ ಪಾಕಿಸ್ತಾನದ ಕರಾಚಿಯ ಕರಾವಳಿ ಭಾಗವನ್ನು ಜೂನ್ 15ರ ಸಂಜೆಯೊಳಗೆ ಹಾದುಹೋಗಬಹುದು ಎಂದೂ ಹವಾಮಾನ ಇಲಾಖೆಯು ಅಂದಾಜು ಮಾಡಿದೆ.

ಅರಬ್ಬಿ ಸಮುದ್ರದಲ್ಲಿನ ಸ್ಥಿತಿ ಊಹೆಗೆ ಮೀರಿದ್ದಾಗಿರಲಿದೆ. ಅಲೆಗಳು 10 ರಿಂದ 14 ಮೀಟರ್ ಎತ್ತರದವರೆಗೂ ಏರಬಹುದು. ಹೀಗಾಗಿ, ತೈಲ ನಿಕ್ಷೇಪ, ಹಡಗುಗಳ ಸಂಚಾರ, ಮೀನುಗಾರಿಕೆ ಚಟುವಟಿಕೆಗಳನ್ನು 15ರವರೆಗೂ ಸ್ಥಗಿತಗೊಳಿಸಬೇಕು ಎಂದೂ ಸಲಹೆ ಮಾಡಿದ್ದಾರೆ.

ಅಲ್ಲದೆ, ಹುಲಿ ಸಂರಕ್ಷಿತ ಪ್ರದೇಶ ಗಿರ್ ರಾಷ್ಟ್ರೀಯ ಉದ್ಯಾನ ಹಾಗೂ ಹೆಸರಾಂತ ಸೋಮನಾಥ ದೇವಸ್ಥಾನದ ಬಳಿ ಕೂಡಾ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿ ಮುನ್ನೆಚ್ಚರಿಕೆ ವಹಿಸಬೇಕು ಎಂದು ಮಹಾಪಾತ್ರ ಅವರು ತಿಳಿಸಿದ್ದಾರೆ.

ಬಿಪೊರ್‌ಜಾಯ್ ಈ ವರ್ಷ ಅರಬ್ಬಿ ಸಮುದ್ರದಲ್ಲಿ ಮೂಡಿರುವ ಮೊದಲ ಚಂಡಮಾರುತ. ಜೂನ್ 6–7ರಂದು ಕಾಣಿಸಿಕೊಂಡಿದ್ದು, ನಿರೀಕ್ಷೆ ಮೀರಿ ನಂತರದ 48 ಗಂಟೆಗಳಲ್ಲೇ ಹೆಚ್ಚಿನ ವ್ಯಾಪ್ತಿಯನ್ನು ಆವರಿಸಿಕೊಂಡಿತು. ಹೆಚ್ಚಿನ ಕಾಲಾವಧಿ ಸಕ್ರಿಯವಾಗಿರುವ ಚಂಡಮಾರುತವು ಇದಾಗಿದೆ.

50 ರೈಲುಗಳ ಸಂಚಾರ ರದ್ದು

ಮುಂಬೈ (ಪಿಟಿಐ): ಚಂಡಮಾರುತದ ಹಿನ್ನೆಲೆಯಲ್ಲಿ ಗುಜರಾತ್‌ನ ಕರಾವಳಿ ಜಿಲ್ಲೆಗಳಿಗೆ ತೆರಳಬೇಕಿದ್ದ 50ಕ್ಕೂ ಹೆಚ್ಚು ರೈಲುಗಳ ಸಂಚಾರವನ್ನು ಪಶ್ಚಿಮ ರೈಲ್ವೆ ರದ್ದುಪಡಿಸಿದ್ದು, ಇನ್ನಷ್ಟು ರೈಲುಗಳ ಸಂಚಾರ ರದ್ದುಪಡಿಸಲು ಚಿಂತನೆ ನಡೆಸಿದೆ.

ಮೂರು ದಿನ ರೈಲು ಸಂಚಾರ ರದ್ದುಪಡಿಸುವ ಚಿಂತನೆ ಇದೆ. ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರ, ಸಹಾಯವಾಣಿ ಸ್ಥಾಪನೆ, ಸಂಚಾರಕ್ಕಾಗಿ ಪರಿಹಾರ ಕಾರ್ಯ ಉದ್ದೇಶದ ರೈಲು ಸಜ್ಜಾಗಿರಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ. ಭಾವ್‌ನಗರ್ ವಿಭಾಗದ ರಾಜ್‌ಕೋಟ್‌ನಲ್ಲಿ ಐದು ಕಡೆ, ಅಹಮದಾಬಾದ್ ವಿಭಾಗದಲ್ಲಿ ಮೂರು ಕಡೆ ಗಂಟೆಗೊಮ್ಮೆ ಗಾಳಿಯ ವೇಗ ಗಮನಿಸುತ್ತಿದ್ದು, ಗಾಳಿಯ ತೀವ್ರತೆ ಆಧರಿಸಿ ರೈಲು ಸಂಚಾರ ನಿಯಂತ್ರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸದ್ಯ ಗಾಂಧಿಧಾಮ, ವೆರವಲ್, ಒಖಾ, ಪೋರಬಂದರ್‌ನತ್ತ ತೆರಳಬೇಕಿದ್ದ 56 ರೈಲುಗಳ ಸಂಚಾರ ರದ್ದುಗೊಂಡಿದೆ. ಜೂನ್ 13–15ರ ಅವಧಿಯಲ್ಲಿ ಇನ್ನೂ 95 ರೈಲುಗಳ ಸಂಚಾರ ರದ್ದುಪಡಿಸಲು ಚಿಂತನೆ ನಡೆದಿದೆ. ‘ಬಾಧಿತ ಜಿಲ್ಲೆಗಳತ್ತ ತೆರಳಬೇಕಿದ್ದ ಪ್ಯಾಸೆಂಜರ್ ರೈಲುಗಳ ಸಂಚಾರ ಕುರಿತು ಪರಿಶೀಲನೆ ನಡೆದಿದ್ದು, ಪರಿಸ್ಥಿತಿ ಅಧರಿಸಿ ನಿರ್ಧರಿಸಲಾಗುವುದು’ ಎಂದು ಪಶ್ಚಿಮ ರೈಲ್ವೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಸುಮಿತ್ ಠಾಕೂರ್ ತಿಳಿಸಿದ್ದಾರೆ.



ಬಾಧಿತ ಜಿಲ್ಲೆಗಳಲ್ಲಿ ರಕ್ಷಣಾ ಕಾರ್ಯಗಳಿಗೆ ಯೋಧರು ಸನ್ನದ್ಧವಾಗಿರುವುದನ್ನು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಭುಜ್ ಸೇನಾ ಕೇಂದ್ರದಲ್ಲಿ ಪರಿಶೀಲಿಸಿದರು —ಪಿಟಿಐ ಚಿತ್ರ

50 ಜನರ ಸ್ಥಳಾಂತರ, 8 ಸಾವು

ಅಹಮದಾಬಾದ್/ಮುಂಬೈ (ಪಿಟಿಐ/ರಾಯಿಟರ್ಸ್): ಕರಾವಳಿ ಕಾವಲು ಪಡೆಯ ಸಿಬ್ಬಂದಿ, ಗುಜರಾತ್‌ನ ದ್ವಾರ್ಕಾ ಜಿಲ್ಲೆಯಲ್ಲಿ ತೈಲ ನಿಕ್ಷೇಪದಲ್ಲಿದ್ದ 50 ಸಿಬ್ಬಂದಿಯನ್ನು ಪ್ರತಿಕೂಲ ಹವಾಮಾನದ ಹಿನ್ನೆಲೆಯಲ್ಲಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದರು.

ಬಿರುಗಾಳಿ, ಪ್ರತಿಕೂಲ ವಾತಾವರಣದ ನಡುವೆಯೂ ಆಧುನಿಕ ಹಗುರ ಹೆಲಿಕಾಪ್ಟರ್ (ಎಎಲ್‌ಎಚ್) ಮತ್ತು ಹಡಗು ಸೇವೆಯನ್ನು ಬಳಸಿ ಈ ರಕ್ಷಣಾ ಕಾರ್ಯಾಚರಣೆ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾವು: ಚಂಡಮಾರುತ ಪರಿಣಾಮ ರಾಜಕೋಟ್‌ನಲ್ಲಿ ಬೀಸಿದ ಬಿರುಗಾಳಿಗೆ ಮರ ಉರುಳಿದ್ದು, ಪತಿಯೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ವರ್ಷಾ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈನ ಜುಹೂ ಕಡಲತೀರದಲ್ಲಿ ಸಮುದ್ರಕ್ಕಿಳಿದಿದ್ದ ನಾಲ್ವರು ಬಾಲಕರು ಮೃತಪಟ್ಟಿದ್ದಾರೆ. ‘12–16 ವರ್ಷದ ಐವರು ಜುಹೂ ಕೋಳಿವಾಡಾ ಪ್ರದೇಶದಲ್ಲಿ ಸಮುದ್ರಕ್ಕಿಳಿದಿದ್ದರು. ಒಬ್ಬನನ್ನು ರಕ್ಷಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. ಗುಜರಾತ್‌ನ ಕರಾವಳಿ ಜಿಲ್ಲೆಗಳಲ್ಲಿ ಮಳೆ, ಗಾಳಿ ಶುರುವಾಗಿದೆ. ಅಲ್ಲಲ್ಲಿ, ಮರಗಳು ಉರುಳಿವೆ. ಕಛ್, ರಾಜಕೋಟ್ ಜಿಲ್ಲೆಯಲ್ಲಿ ಗೋಡೆ ಕುಸಿದು ಮೂವರು ಸತ್ತಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ವೈದ್ಯರ 6 ತಂಡ ರಚನೆ ಸಿದ್ಧವಿರಲು ಸೂಚನೆ

ನವದೆಹಲಿ (ಪಿಟಿಐ): ಚಂಡಮಾರುತ ಹಿನ್ನೆಲೆಯಲ್ಲಿ ಗುಜರಾತ್‌ನಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳಿಂದ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳನ್ನು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಮಂಗಳವಾರ ಪರಿಶೀಲಿಸಿದರು.

ದೆಹಲಿಯ ಏಮ್ಸ್ ಸೇರಿದಂತೆ ಆರು ಪ್ರಮುಖ ಆಸ್ಪತ್ರೆಗಳ ವೈದ್ಯರು ಮತ್ತು ಸಿಬ್ಬಂದಿ ಒಳಗೊಂಡ ತಂಡಗಳನ್ನು ರಚಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ಸ್ಪಂದಿಸಲು ಸಿದ್ಧವಾಗಿರುವಂತೆ ಈ ತಂಡಗಳಿಗೆ ಸಚಿವಾಲಯವು ಸೂಚಿಸಿದೆ. ಅಲ್ಲದೆ, ಬಾಧಿತ ಪ್ರದೇಶಗಳಲ್ಲಿ ಅಗತ್ಯವಿದ್ದರೆ ಜನರಿಗೆ ಮಾನಸಿಕ ಆರೋಗ್ಯ ಚಿಕಿತ್ಸೆ, ಆಪ್ತ ಸಮಾಲೋಚನೆ ನಡೆಸಲು ಸಿದ್ಧವಿರುವಂತೆ ಬೆಂಗಳೂರಿನ ನಿಮ್ಹಾನ್ಸ್‌ನ ವೈದ್ಯಕೀಯ ತಂಡಕ್ಕೂ ಸೂಚಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ.

ಬಿಜೆಪಿ–ಎಐಎಡಿಎಂಕೆ ಮೈತ್ರಿಗೆ ಕುತ್ತು

ಚೆನ್ನೈ (ಪಿಟಿಐ): ತಮಿಳುನಾಡಿನ ಬಿಜೆಪಿ ಘಟಕದ ಅಧ್ಯಕ್ಷ ಅಣ್ಣಾಮಲೈ ಅವರು ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ಕುರಿತು ನೀಡಿರುವ ವಿವಾದಾತ್ಮಕ ಹೇಳಿಕೆಯು ರಾಜ್ಯದಲ್ಲಿ ಬಿಜೆಪಿ ಮತ್ತು ಎಐಎಡಿಎಂಕೆ ಮೈತ್ರಿಗೆ ಕುತ್ತು ತಂದಿದೆ. ಅಣ್ಣಾಮಲೈ ಹೇಳಿಕೆಯಿಂದ ಕೆಂಡಾಮಂಡಲವಾಗಿರುವ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಕೆ.ಪಳನಿಸ್ವಾಮಿ, ಇದು ‘ಬೇಜವಾಬ್ದಾರಿಯುತ ಮತ್ತು ಅಪ್ರಬುದ್ಧ’ ಎಂದು ತಿರುಗೇಟು ನೀಡಿದ್ದಾರೆ.

‘ಅಣ್ಣಾಮಲೈ ಅವರ ಹೇಳಿಕೆಯಲ್ಲಿ ರಾಜಕೀಯ ಅನುಭವದ ಕೊರತೆ ಎದ್ದು ಕಾಣುತ್ತಿದೆ. ನಾವು ಇದನ್ನು ಬಲವಾಗಿ ಖಂಡಿಸುತ್ತೇವೆ. ಕ್ರಾಂತಿಕಾರಿ ನಾಯಕಿ ಜಯಲಲಿತಾ ಅವರ ಘನತೆಗೆ ಕುಂದುಂಟುಮಾಡಿದ ಅಣ್ಣಾಮಲೈ ವಿರುದ್ಧ ಪಕ್ಷದ ಜಿಲ್ಲಾ ಕಾರ್ಯದರ್ಶಿಗಳು ನಿರ್ಣಯವೊಂದನ್ನು ಅಂಗೀಕರಿಸಿದ್ದಾರೆ’ ಎಂದರು.

ಇದೇ ಮೊದಲ ಬಾರಿಗೆ ಎಐಎಡಿಎಂಕೆ ಅಣ್ಣಾಮಲೈ ಹೇಳಿಕೆಯನ್ನು ಕಟುವಾಗಿ ಖಂಡಿಸಿದ್ದು, ಪಳನಿಸ್ವಾಮಿ ಅವರು ಪಕ್ಷದ ಕಚೇರಿಯಲ್ಲಿ ಸಭೆ ನಡೆಸಿದರು.

ಸಭೆಯಲ್ಲಿ, ಕಾರ್ಯಕರ್ತರು ಮತ್ತು ಸಾರ್ವಜನಿಕರು ಅಣ್ಣಾಮಲೈ ಹೇಳಿಕೆ ವಿರುದ್ಧ ಪ್ರತಿಭಟನೆ ನಡೆಸಬೇಕು ಎಂಬ ನಿರ್ಣಯ ಕೈಗೊಳ್ಳಲಾಗಿದೆ.ಈ ಮಧ್ಯೆ, ಅಣ್ಣಾಮಲೈ ಅವರನ್ನು ಹಿಡಿತದಲ್ಲಿ ಇಟ್ಟುಕೊಳ್ಳದಿದ್ದರೆ ಬಿಜೆಪಿಯೊಂದಿಗಿನ ಮೈತ್ರಿ ಕುರಿತು ಮರುಚಿಂತನೆ ಮಾಡಬೇಕಾಗುತ್ತದೆ ಎಂದು ಮಾಜಿ ಸಚಿವ ಡಿ.ಜಯಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಅಣ್ಣಾಮಲೈ ಹೇಳಿದ್ದೇನು: ‘ತಮಿಳುನಾಡಿನ ಆಡಳಿತವು ಭ್ರಷ್ಟವಾಗಿದೆ. ಮಾಜಿ ಮುಖ್ಯಮಂತ್ರಿ ಸಹ ದೋಷಿಯಾಗಿದ್ದರು. ಹಾಗಾಗಿ ತಮಿಳುನಾಡು ಅತ್ಯಂತ ಭ್ರಷ್ಟ ರಾಜ್ಯಗಳಲ್ಲಿ ಒಂದಾಗಿದೆ. ದೇಶದ ಮೊದಲ ಭ್ರಷ್ಟ ರಾಜ್ಯವಿದು’ ಎಂದು ಅಣ್ಣಾಮಲೈ ಹೇಳಿದ್ದರು.

‘ಜನರ ದತ್ತಾಂಶ ರಕ್ಷಿಸಲು ಕೇಂದ್ರ ಅಶಕ್ತ’

ನವದೆಹಲಿ (ಪಿಟಿಐ): ಕೋವಿನ್ ಪೋರ್ಟಲ್‌ನ ದತ್ತಾಂಶ ಸೋರಿಕೆ ಕುರಿತು ಕೇಂದ್ರ ಸರ್ಕಾರದ ವಿರುದ್ಧ ಮಂಗಳವಾರ ತೀವ್ರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ಪಕ್ಷ, ‘ದೇಶದ ಕೋಟ್ಯಂತರ ಜನರ ವೈಯಕ್ತಿಕ ವಿವರಗಳನ್ನು ರಕ್ಷಿಸಲು ಈ ಸರ್ಕಾರ ಅಶಕ್ತವಾಗಿದೆ’ ಎಂದು ಆರೋಪಿಸಿದೆ.

ಇನ್ನೊಂದೆಡೆ, ‘ಕೋವಿನ್ ಪೂರ್ಟಲ್ ಸಂಪೂರ್ಣ ಸುರಕ್ಷಿತವಾಗಿದ್ದು, ದತ್ತಾಂಶಗಳ ಗೋಪ್ಯತೆಗೆ ಧಕ್ಕೆ ಬಂದಿಲ್ಲ’ ಎಂದು ಪ್ರತಿಪಾದಿಸಿರುವ ಕೇಂದ್ರ ಸರ್ಕಾರ, ಕಾಂಗ್ರೆಸ್ ಆರೋಪವನ್ನು ತಳ್ಳಿಹಾಕಿದೆ. ಅಲ್ಲದೆ ಈ ವಿಷಯವನ್ನು ದೇಶದ ಸೈಬರ್ ಭದ್ರತೆ ಕುರಿತ ನೋಡಲ್ ಏಜೆನ್ಸಿ ‘ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್’ (ಸಿಇಆರ್‌ಟಿ -ಇನ್) ಪರಿಶೀಲಿಸಲಿದೆ ಎಂದೂ ತಿಳಿಸಿದೆ.

‘ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ದೇಶದ 140 ಕೋಟಿ ನಾಗರಿಕರ ಖಾಸಗಿತನ ಮತ್ತು ದೇಶದ ಭದ್ರತೆಯ ಬಗ್ಗೆ ಕಾಳಜಿ ಇಲ್ಲ. ಈ ಸರ್ಕಾರಕ್ಕೆ ಇಲ್ಲಿಯವರೆಗೆ ದತ್ತಾಂಶ ಗೋಪ್ಯತೆ ಕಾನೂನನ್ನೂ ಮಾಡಲು ಆಗಿಲ್ಲ ಮತ್ತು ಸೈಬರ್ ದಾಳಿಯ ಬಗ್ಗೆಯೂ ಯಾವುದೇ ರಾಷ್ಟ್ರೀಯ ಭದ್ರತಾ ನೀತಿಯನ್ನೂ ಜಾರಿಗೆ ತಂದಿಲ್ಲ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಟ್ವೀಟ್ ಮೂಲಕ ದೂರಿದ್ದಾರೆ.

‘ಮೋದಿ ಸರ್ಕಾರವು ಕೋವಿನ್ ದತ್ತಾಂಶ ಸೋರಿಕೆಯನ್ನು ಎಷ್ಟೇ ಮುಚ್ಚಿಟ್ಟರೂ, ಮೂರು ವಿಷಯಗಳಂತೂ ಸ್ಪಷ್ಟವಾಗಿವೆ– ಸಾರ್ವಜನಿಕರ ಖಾಸಗಿ ದತ್ತಾಂಶ ಸುರಕ್ಷಿತವಲ್ಲ. ಖಾಸಗಿತನದ ಹಕ್ಕನ್ನು ಮೂಲಭೂತ ಹಕ್ಕು ಎಂದು ಘೋಷಿಸುವ ಸುಪ್ರೀಂಕೋರ್ಟ್ ಆಶಯವನ್ನು ಮೋದಿ ಸರ್ಕಾರ 2017ರಲ್ಲಿ ಹೇಗೆ ಬಲವಾಗಿ ವಿರೋಧಿಸಿತ್ತು ಎಂಬುದು ಎಲ್ಲ ಭಾರತೀಯರಿಗೂ ತಿಳಿದಿದೆ. ದೇಶದಲ್ಲಿ ಸೈಬರ್ ದಾಳಿ ಮತ್ತು ದತ್ತಾಂಶ ಸೋರಿಕೆ ನಿರಂತರವಾಗಿ ಹೆಚ್ಚುತ್ತಿದೆ. ಅದು 2018ರಲ್ಲಿ ಆಧಾರ್ ದತ್ತಾಂಶ ಸೋರಿಕೆ ಇರಬಹುದು ಅಥವಾ 2022ರ ನವೆಂಬರ್‌ನಲ್ಲಿ ನಡೆದ ಏಮ್ಸ್ ಮೇಲಿನ ಸೈಬರ್ ದಾಳಿ ಇರಬಹುದು’ ಎಂದು ಖರ್ಗೆ ಅವರು ಸರಣಿ ಟ್ವೀಟ್‌ಗಳನ್ನು ಮಾಡಿದ್ದಾರೆ.

‘13 ಅಡಿ ಎತ್ತರ ಮತ್ತು ಐದು ಅಡಿ ದಪ್ಪದ ಗೋಡೆಗಳಲ್ಲಿ ಆಧಾರ್ ದತ್ತಾಂಶಗಳನ್ನು ರಕ್ಷಿಸಲಾಗಿದೆ ಎಂದು ಮೋದಿ ಸರ್ಕಾರ 2018ರ ಸೆಪ್ಟೆಂಬರ್‌ನಲ್ಲಿ ಸುಪ್ರೀಂಕೋರ್ಟ್‌ಗೆ ತಿಳಿಸಿತ್ತು’ ಎಂಬುದನ್ನೂ ಖರ್ಗೆ ಪ್ರಸ್ತಾಪಿಸಿದ್ದಾರೆ.

‘ಡಿಜಿಟಲ್ ಇಂಡಿಯಾದ ಡೋಲು ಬಾರಿಸುತ್ತಿರುವ’ ಮೋದಿ ಸರ್ಕಾರದ ಅವಧಿಯಲ್ಲಿ ಸೈಬರ್ ದಾಳಿಗಳು ಹಲವು ಪಟ್ಟು ಹೆಚ್ಚಾಗಿವೆ ಎಂದೂ ಅವರು ದೂರಿದ್ದಾರೆ.

‘2018ರಲ್ಲಿ 2.08 ಲಕ್ಷ, 2019ರಲ್ಲಿ 3.94 ಲಕ್ಷ, 2020ರಲ್ಲಿ 11.58 ಲಕ್ಷ, 2021ರಲ್ಲಿ 14.02 ಲಕ್ಷ ಹಾಗೂ 2022ರಲ್ಲಿ 13.91 ಲಕ್ಷ ಸೈಬರ್ ದಾಳಿಗಳು ನಡೆದಿವೆ ಎಂದು ಸರ್ಕಾರ ರಾಜ್ಯಸಭೆಗೆ ನೀಡಿದ್ದ ಉತ್ತರದ ಅಂಕಿ ಅಂಶಗಳನ್ನು ಖರ್ಗೆ ಹಂಚಿಕೊಂಡಿದ್ದಾರೆ.

ಕೋವಿನ್ ಪೋರ್ಟಲ್‌ನ ದತ್ತಾಂಶ ಸೋರಿಕೆ ಸಂಬಂಧ ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾತೆ, ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್, ಸಂಸದ ಪಿ. ಚಿದಂಬರಂ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.



ರಾಜಸ್ಥಾನ ಸರ್ಕಾರದ ವಿರುದ್ಧ ಜೈಪುರದ ಸಚಿವಾಲಯದ ಸಮೀಪ ಮಂಗಳವಾರ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರ ಮೇಲೆ ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು —ಪಿಟಿಐ ಚಿತ್ರ

‘ರೋಜ್‌ಗಾರ್ ಮೇಳ ಬಿಜೆಪಿ ಹೆಗ್ಗುರುತು’

ವಂಶಪಾರಂಪರ್ಯ ಪಕ್ಷಗಳಿಂದ ದ್ರೋಹ: ಮೋದಿ ಟೀಕೆ

ನವದೆಹಲಿ(ಪಿಟಿಐ): ‘ರೋಜ್‌ಗಾರ್ ಮೇಳವು ಬಿಜೆಪಿ ಸರ್ಕಾರದ ಹೊಸ ಹೆಗ್ಗುರುತಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ಸರ್ಕಾರದ ವಿವಿಧ ಇಲಾಖೆಗಳಿಗೆ ಆಯ್ಕೆಯಾಗಿರುವ 70 ಸಾವಿರ ಮಂದಿಗೆ ಮಂಗಳವಾರ ನೇಮಕಾತಿ ಪತ್ರಗಳನ್ನು ವಿತರಿಸಿ ಮಾತನಾಡಿದ ಅವರು, ಸರ್ಕಾರವು ಮೇಳದ ಮೂಲಕ ಯುವಜನರ ಭವಿಷ್ಯವನ್ನು ಉಜ್ವಲಗೊಳಿಸಲು ಮುಂದಾಗಿದೆ ಎಂದು ಪ್ರತಿಪಾದಿಸಿದರು. ದೇಶದಲ್ಲಿ ವಂಶಪಾರಂಪರ್ಯ ಆಡಳಿತ ನಡೆಸಿದ ರಾಜಕೀಯ ಪಕ್ಷಗಳು ಸರ್ಕಾರಿ ನೇಮಕಾತಿಗಳಲ್ಲಿ ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರಕ್ಕೆ ಒತ್ತು ನೀಡಿವೆ. ವಿವಿಧ ಹುದ್ದೆಗಳಿಗೆ ದರ ಪಟ್ಟಿ ನಿಗದಿಪಡಿಸಿ, ಹಣವನ್ನು ಲೂಟಿ ಮಾಡಿವೆ. ಸರ್ಕಾರಿ ಹುದ್ದೆಯ ನಿರೀಕ್ಷೆಯಲ್ಲಿದ್ದ ಕೋಟ್ಯಂತರ ಯುವಜನರಿಗೆ ದ್ರೋಹ ಬಗೆದಿವೆ ಎಂದು ಟೀಕಿಸಿದರು.

ಹಿಂದೆ ನೇಮಕಾತಿ ಪ್ರಕ್ರಿಯೆಯು ಒಂದೂವರೆ ವರ್ಷ ಕಳೆದರೂ ಮುಗಿಯುತ್ತಿರಲಿಲ್ಲ. ಈಗ ಕೆಲವೇ ತಿಂಗಳಿನಲ್ಲಿ ಪೂರ್ಣಗೊಳ್ಳುತ್ತಿದೆ. 2014ರ ಬಳಿಕ ನೇಮಕಾತಿಯಲ್ಲಿ ಪಾರದರ್ಶಕತೆ ತರಲಾಗಿದೆ. ಹಾಗಾಗಿ, ಸ್ವಜನಪಕ್ಷಪಾತಕ್ಕೆ ಅವಕಾಶ ಇಲ್ಲದಂತಾಗಿದೆ ಎಂದರು. ರಾಜಕೀಯ ಭ್ರಷ್ಟಾಚಾರ, ಸರ್ಕಾರಿ ಯೋಜನೆಗಳಲ್ಲಿ ಸೋರಿಕೆ, ಸಾರ್ವಜನಿಕ ಹಣದ ದುರ್ಬಳಕೆಯೇ ಈ ಹಿಂದೆ ಆಡಳಿತ ನಡೆಸಿದ ಸರ್ಕಾರಗಳ ದೊಡ್ಡ ಸಾಧನೆಯಾಗಿದೆ ಎಂದರು.

ಪ್ರಚಾರದ ಗಿಮಿಕ್: ಕಾಂಗ್ರೆಸ್ ಟೀಕೆ

ಪ್ರಧಾನಿ ಹೇಳಿಕೆಗೆ ಕಾಂಗ್ರೆಸ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, ‘ದೇಶದ ವಿವಿಧ ವಲಯಗಳಲ್ಲಿ ಉದ್ಯೋಗ ನಾಶಪಡಿಸಿದವರೇ ಈಗ ಮೇಳ ಆಯೋಜಿಸುತ್ತಿರುವುದು ತಮಾಷೆಯ ಸಂಗತಿ. ಇದು ಬಿಜೆಪಿಯ ಅಸ್ತಿತ್ವಕ್ಕಾಗಿ ಪ್ರಧಾನಿ ಮೋದಿ ನಡೆಸುತ್ತಿರುವ ಪ್ರಚಾರದ ಗಿಮಿಕ್ ಎಂದು ಟೀಕಿಸಿದೆ.

‘ಮೇಳದ ಮೂಲಕ ಹೊಸ ಉದ್ಯೋಗ ಸೃಷ್ಟಿಸುತ್ತಿಲ್ಲ ಎಂಬುದು ಅರಿವಾಗಿದೆ. ಇದು ಸರ್ಕಾರದ ಅಸ್ತಿತ್ವವನ್ನು ಸಾಬೀತುಪಡಿಸುವ ಪ್ರಯತ್ನವಾಗಿದೆ. ಈಗಾಗಲೇ ಆಯ್ಕೆಯಾಗಿರುವ ಸಂಭಾವ್ಯ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡುವ ಪ್ರಕ್ರಿಯೆ ನಡೆಯುತ್ತಿದೆ ಅಷ್ಟೇ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಟ್ವೀಟ್ ಮೂಲಕ ವ್ಯಂಗ್ಯವಾಡಿದ್ದಾರೆ. ಒಂಬತ್ತು ವರ್ಷಗಳ ಅಧಿಕಾರ ಅವಧಿಯಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಮೋದಿ ಸಂಪೂರ್ಣ ವಿಫಲರಾಗಿದ್ದಾರೆ. ಮತ್ತೊಂದೆಡೆ ಸಾರ್ವಜನಿಕ ವಲಯಗಳಲ್ಲಿನ ಉದ್ಯೋಗಗಳನ್ನು ಕಡಿತಗೊಳಿಸಿದ್ದಾರೆ ಎಂದು ಟೀಕಿಸಿದ್ದಾರೆ. ದೇಶದ ಕೆಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಅರ್ಹರಿಗೆ ನೇಮಕಾತಿ ಪತ್ರ ನೀಡುತ್ತವೆ. ಇದನ್ನೂ ಕೇಂದ್ರ ಸರ್ಕಾರ ಸೃಷ್ಟಿಸಿರುವ ಉದ್ಯೋಗಗಳೆಂದು ಬಿಂಬಿಸಲಾಗುತ್ತಿದೆ. ಇದರ ಮೇಲೂ ಸ್ವಯಂಘೋಷಿತ ವಿಶ್ವಗುರುವಿನ ಪ್ರಭಾವವಿದೆ ಎಂದು ಲೇವಡಿ ಮಾಡಿದ್ದಾರೆ.

ಪ್ರಕೃತಿ ವಿಕೋಪ: ಪರಿಹಾರ ಹೆಚ್ಚಳಕ್ಕೆ ಒತ್ತಡ

ಶಾ ನೇತೃತ್ವದಲ್ಲಿ ವಿಪತ್ತು ನಿರ್ವಹಣಾ ಸಚಿವರ ಸಭೆ: ಕಂದಾಯ ಸಚಿವ ಕೃಷ್ಣಬೈರೇಗೌಡ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಕೃತಿ ವಿಕೋಪದ ಸಂದರ್ಭದಲ್ಲಾಗುವ ಹಾನಿಗೆ ಈಗ ನೀಡುತ್ತಿರುವ ಪರಿಹಾರ ಮೊತ್ತ ಭಾರಿ ಕಡಿಮೆ ಇದ್ದು, ಅದನ್ನು ದುಪ್ಪಟ್ಟು ಮಾಡಬೇಕು ಎಂದು ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ನವದೆಹಲಿಯಲ್ಲಿ ಮಂಗಳವಾರ ನಡೆದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಪತ್ತು ನಿರ್ವಹಣಾ ಸಚಿವರ ಸಭೆಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಮಳೆ ಹಾನಿ, ಬೆಳೆ ಹಾನಿ ಹಾಗೂ ಪ್ರಾಣ ಹಾನಿಗೆ ನೀಡುತ್ತಿರುವ ಪರಿಹಾರ ಏನೇನೂ ಸಾಲದು. ಇದನ್ನು ಹೆಚ್ಚಿಸಬೇಕು. ಇದು ರೈತರು ಹಾಗೂ ಸಾರ್ವಜನಿಕ ಬೇಡಿಕೆಯೂ ಹೌದು’ ಎಂದು ಗಮನ ಸೆಳೆದರು.

ಇದಕ್ಕೆ ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳ ಸಚಿವರು ಧ್ವನಿಗೂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಮಿತ್ ಶಾ, ‘ಈ ಬೇಡಿಕೆಯನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಲಿದೆ’ ಎಂದು ಭರವಸೆ ನೀಡಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೃಷ್ಣ ಬೈರೇಗೌಡ, ‘ಬರಗಾಲ, ಭೂಕುಸಿತ, ಮಳೆ ಹಾಗೂ ಇನ್ನಿತರ ಪ್ರಕೃತಿ ವಿಕೋಪಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ವಿಕೋಪಗಳ ಕುರಿತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಗೃಹ ಸಚಿವರು ಸೂಚಿಸಿದ್ದಾರೆ’ ಎಂದರು.

ರಾಜ್ಯದ ಬೇಡಿಕೆಯೇನು?		
ಬೆಳೆ	ಈಗಿನ ಪರಿಹಾರ	ಎಷ್ಟಕ್ಕೆ ಹೆಚ್ಚಳ (ಹೆಕ್ಟೇರ್‌ಗೆ)
ಒಣ	₹8,500	₹20,000
ನೀರಾವರಿ	₹17,000	₹35,000
ತೋಟಗಾರಿಕೆ	₹22,500	₹49,000

‘ಬರಗಾಲ ಹಾಗೂ ಅತಿವೃಷ್ಟಿ ಸಂದರ್ಭದಲ್ಲಿ ಸಂತ್ರಸ್ತರಿಗೆ ನೀಡುವ ಪರಿಹಾರ ಮೊತ್ತ ಭಾರಿ ಕಡಿಮೆ ಇದೆ. ಈ ಮೊತ್ತ ಹೆಚ್ಚಳ ಆಗಬೇಕಿದೆ. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ’ ಎಂದೂ ಅವರು ಮಾಹಿತಿ ನೀಡಿದರು. ಪ್ರಾಣ ಹಾನಿ ಪ್ರಕರಣಗಳಲ್ಲಿ ಪರಿಹಾರ ಮೊತ್ತವನ್ನು ₹8 ಲಕ್ಷಕ್ಕೆ ಹೆಚ್ಚಿಸಲು ಮನವಿ ಮಾಡಲಾಗಿದೆ ಎಂದು ಅವರು ತಿಳಿಸಿದರು.

‘ಇದು ಬಹಳಷ್ಟು ವರ್ಷಗಳಿಂದಿರುವ ಸಾರ್ವಜನಿಕರ ಒತ್ತಾಯವಾಗಿದೆ. ಸದ್ಯ ರಾಜ್ಯ ಸರ್ಕಾರ ಕೈಯಿಂದ ಹಣ ಹಾಕಿ ಹೆಚ್ಚಿನ ಪರಿಹಾರ ನೀಡುತ್ತಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಹೊರೆಯಾಗುತ್ತಿದೆ. ಕರ್ನಾಟಕದ ಎಸ್‌ಡಿಆರ್‌ಎಫ್‌ಗೆ ಅನುದಾನ ಕಡಿಮೆ ಬರುತ್ತಿದೆ. ಹೀಗಾಗಿ ಕೇಂದ್ರದಿಂದ ನೀಡುವ ಪರಿಹಾರ ಮೊತ್ತ ಹೆಚ್ಚಿಸಬೇಕು’ ಎಂದು ಅವರು ಆಗ್ರಹಿಸಿದರು.

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಿಡಿಲು ಬಡಿದು ಮೃತಪಡುವವರ ಸಂಖ್ಯೆ ಹೆಚ್ಚಳ ಆಗಿದೆ. ಸಿಡಿಲು ಮುನ್ಸೂಚನೆ ಪತ್ತೆ ಹಚ್ಚಲು ರಾಜ್ಯದಲ್ಲಿ ಡಾಪ್ಲರ್ ರಾಡಾರ್ ಅಳವಡಿಸಬೇಕು ಎಂದು ಮನವಿ ಮಾಡಲಾಗಿದೆ. ಶೀಘ್ರದಲ್ಲಿ ರಾಡಾರ್ ಸ್ಥಾಪಿಸಲಾಗುತ್ತದೆ ಎಂದು ಕೇಂದ್ರ ಹವಾಮಾನ ಇಲಾಖೆ ಭರವಸೆ ನೀಡಿದೆ ಎಂದು ಅವರು ತಿಳಿಸಿದರು. ಕೇಂದ್ರ ಸರ್ಕಾರವು ಕಳೆದ ಅಕ್ಟೋಬರ್‌ನಲ್ಲಿ ಪ್ರಕೃತಿ ವಿಕೋಪದ ಪರಿಹಾರದ ಮಾರ್ಗಸೂಚಿಯಲ್ಲಿ ಕೆಲವೊಂದು ಬದಲಾವಣೆ ಮಾಡಿದೆ. ಸರ್ಕಾರದಿಂದ ನೀಡುವ ಪರಿಹಾರದಲ್ಲಿ ವಿಮಾ ಕಂಪನಿಗಳ ಪಾಲಿನ ಬಗ್ಗೆ ಪ್ರಸ್ತಾಪಿಸಿದೆ. ಸರ್ಕಾರ ನೀಡುವ ಪರಿಹಾರ ಮೊತ್ತದಲ್ಲಿ ವಿಮಾ ಕಂಪನಿಗಳು ವಿಮಾ ಮೊತ್ತವನ್ನು ಕಡಿತಗೊಳಿಸಿ ನೀಡುವ ನಿಯಮ ತರಲಾಗಿದೆ. ಇದರಿಂದ ವಿಮಾ ಕಂಪನಿಗಳಿಗೆ ದೊಡ್ಡ ಮಟ್ಟದ ಲಾಭ ಆಗುತ್ತಿದೆ. ಇದರಿಂದ ಸರ್ಕಾರ ಹಾಗೂ ರೈತರಿಗೆ ನಷ್ಟ ಉಂಟಾಗುತ್ತಿದೆ. ಈ ಮಾರ್ಗಸೂಚಿಯನ್ನು ತಿದ್ದುಪಡಿ ಮಾಡುವಂತೆ ಮನವಿ ಮಾಡಲಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಿದ್ದಾರೆ ಎಂದೂ ಅವರು ಹೇಳಿದರು.

ಪ್ರಕೃತಿ ವಿಕೋಪದ ಪರಿಹಾರ ಮೊತ್ತದಲ್ಲಿ ಕೇಂದ್ರ ಸರ್ಕಾರವು ಯಾವುದೇ ಬಾಕಿ ಉಳಿಸಿಕೊಂಡಿಲ್ಲ. ಕಳೆದ ವರ್ಷ ಕರ್ನಾಟಕ ಸರ್ಕಾರ ₹5 ಸಾವಿರ ಕೋಟಿ ಪರಿಹಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಕೇಂದ್ರ ಸರ್ಕಾರ ಕೇವಲ ₹900 ಕೋಟಿ ಬಿಡುಗಡೆ ಮಾಡಿತ್ತು ಎಂದರು.

ವಿಪತ್ತು ನಿರ್ವಹಣೆಗೆ ₹8 ಸಾವಿರ ಕೋಟಿ ವೆಚ್ಚದ ಯೋಜನೆ

ನವದೆಹಲಿ: ದೇಶದಲ್ಲಿ ಪ್ರವಾಹ ತಗ್ಗಿಸುವಿಕೆ, ಅಗ್ನಿಶಾಮಕ ದಳದ ಸೇವೆಗಳ ಆಧುನೀಕರಣ ಮತ್ತು ಭೂಕುಸಿತ ತಡೆಗಟ್ಟುವಂತಹ ವಿಪತ್ತು ನಿರ್ವಹಣಾ ಕಾರ್ಯವಿಧಾನಗಳ ಆಧುನೀಕರಣಕ್ಕಾಗಿ ₹8 ಸಾವಿರ ಕೋಟಿ ಮೊತ್ತದ ಮೂರು ಯೋಜನೆಗಳನ್ನು ಆರಂಭಿಸುವುದಾಗಿ ಕೇಂದ್ರ ಸರ್ಕಾರ ಮಂಗಳವಾರ ಪ್ರಕಟಿಸಿದೆ.

ಇಲ್ಲಿ ನಡೆದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಪತ್ತು ನಿರ್ವಹಣಾ ಸಚಿವರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ‘ದೇಶದ ಯಾವುದೇ ಭಾಗದಲ್ಲಿ ವಿಪತ್ತಿನಿಂದ ಯಾವುದೇ ಜೀವ ಹಾನಿಯಾಗದಂತೆ ನೋಡಿಕೊಳ್ಳಬೇಕು’ ಎಂದರು.

ಅಗ್ನಿಶಾಮಕ ದಳದ ಸೇವೆಗಳ ಆಧುನೀಕರಣ ಹಾಗೂ ವಿಸ್ತರಣೆಗಾಗಿ ಎಲ್ಲ ರಾಜ್ಯಗಳಿಗೆ ₹5 ಸಾವಿರ ಕೋಟಿ ನೆರವು ನೀಡಲಾಗುತ್ತದೆ. ಈ ಸಂಬಂಧ ಕೇಂದ್ರ ಸರ್ಕಾರವು ವಿವರವಾದ ಯೋಜನಾ ವರದಿ ಸಿದ್ಧಪಡಿಸಿದ್ದು, ರಾಜ್ಯಗಳಿಗೆ ಅದನ್ನು ಕಳುಹಿಸಲಾಗುತ್ತದೆ. ನಗರ ಪ್ರದೇಶಗಳಲ್ಲಿ ಪ್ರವಾಹದ ಅಪಾಯವನ್ನು ತಗ್ಗಿಸಲು ಬೆಂಗಳೂರು, ಮುಂಬೈ, ಚೆನ್ನೈ, ಕೋಲ್ಕತ್ತ, ಬೆಂಗಳೂರು, ಅಹಮದಾಬಾದ್, ಹೈದರಾಬಾದ್, ಪುಣೆ ನಗರಕ್ಕೆ ₹2,500 ಕೋಟಿ ಒದಗಿಸಲಾಗುತ್ತದೆ. ಅದರ ವಿವರವಾದ ಯೋಜನಾ ವರದಿಯನ್ನು ರಾಜ್ಯಗಳಿಗೆ ಕಳುಹಿಸಲಾಗುತ್ತದೆ ಎಂದೂ ಅವರು ತಿಳಿಸಿದರು.

17 ರಾಜ್ಯಗಳಲ್ಲಿ ಭೂಕುಸಿತ ಎದುರಿಸಲು ಕೇಂದ್ರ ಸರ್ಕಾರವು ₹825 ಕೋಟಿ ನೀಡಲಿದೆ ಎಂದು ಅವರು ಹೇಳಿದರು.

ಏಳು ಪರಮಾಣು ವಿದ್ಯುತ್ ಸ್ಥಾವರಗಳನ್ನು ನಿರ್ಮಿಸುತ್ತಿರುವ ರಾಜ್ಯಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಭೇಟಿ ನೀಡಿದೆ. ಸಂಭವನೀಯ ವಿಪತ್ತು ಘಟಿಸದಂತೆ ನೋಡಿಕೊಳ್ಳಲು ಕಟ್ಟುನಿಟ್ಟಾದ ಶಿಷ್ಟಾಚಾರ ಪಾಲಿಸುವಂತೆ ಸೂಚಿಸಿದೆ ಎಂದೂ ಅವರು ತಿಳಿಸಿದರು.

ಬಿಜೆಪಿ–ವಿಪಕ್ಷಗಳ ವಾಗ್ಯುದ್ಧ

ಒಂದನೇ ಪುಟದಿಂದ

‘ಡೋರ್ಸಿ ಆರೋಪಗಳು ಶುದ್ಧ ಸುಳ್ಳು’ ಎಂದು ಕೇಂದ್ರ ಸರ್ಕಾರ ಹಾಗೂ ಬಿಜೆಪಿ ತಿರುಗೇಟು ನೀಡಿದ್ದರೆ, ‘ಪ್ರಜಾತಂತ್ರದ ತಾಯಿ ಎಂದು ಕರೆಸಿಕೊಳ್ಳುವ ದೇಶದಲ್ಲಿಯೇ ನಡೆದಿರುವ ಪ್ರಜಾಪ್ರಭುತ್ವದ ಕೊಲೆ ಇದು’ ಎಂದು ವಿರೋಧ ಪಕ್ಷಗಳು ಹರಿಹಾಯ್ದಿವೆ.

‘ಯೂಟ್ಯೂಬ್’ಗೆ ಸೋಮವಾರ ನೀಡಿದ ಸಂದರ್ಶನದಲ್ಲಿ ಡೋರ್ಸಿ ಈ ಆರೋಪಗಳನ್ನು ಮಾಡಿದ್ದಾರೆ. ‘ರೈತರ ಪ್ರತಿಭಟನೆಗಳಿಗೆ ಸಂಬಂಧಿಸಿದ ಹಾಗೂ ಸರ್ಕಾರವನ್ನು ಟೀಕಿಸುತ್ತಿದ್ದ ಕೆಲ ಪತ್ರಕರ್ತರ ಪೋಸ್ಟ್‌ಗಳ ಮೇಲೆ ನಿರ್ಬಂಧ ಹೇರುವಂತೆ ಭಾರತ ಸರ್ಕಾರ ಟ್ವಿಟರ್ ಮೇಲೆ ಒತ್ತಡ ಹೇರಿತ್ತು’ ಎಂದು ಹೇಳಿದ್ದರು. ‘ಭಾರತ ನಮಗೆ ದೊಡ್ಡ ಮಾರುಕಟ್ಟೆ. ಆದರೆ, ರೈತರ ಪ್ರತಿಭಟನೆಗಳು, ನಿರ್ದಿಷ್ಟ ಪತ್ರಕರ್ತರ ಪೋಸ್ಟ್‌ಗಳ ಮೇಲೆ ನಿರ್ಬಂಧ ಹೇರದಿದ್ದರೆ ವಿವಿಧ ರೀತಿಯ ಕ್ರಮ ತೆಗೆದುಕೊಳ್ಳುವ ಬೆದರಿಕೆಗಳನ್ನು ಒಡ್ಡಲಾಗುತ್ತಿತ್ತು’ ಎಂದು ಹೇಳಿದ್ದರು.

‘ಭಾರತದಲ್ಲಿ ಟ್ವಿಟರ್ ಕಾರ್ಯಾಚರಣೆ ಬಂದ್ ಮಾಡುತ್ತೇವೆ’ ಎಂಬ ಬೆದರಿಕೆ ಇತ್ತು. ನಿಮ್ಮ ಉದ್ಯೋಗಿಗಳ ಮನೆಗಳ ಮೇಲೆ ದಾಳಿ ನಡೆಸುತ್ತೇವೆ ಎಂದು ಬೆದರಿಕೆ ಒಡ್ಡಲಾಗಿತ್ತಲ್ಲದೇ, ಅದರಂತೆ ದಾಳಿಯೂ ನಡೆಸಲಾಯಿತು. ಆದರೆ, ಇದು ಭಾರತ, ಅದೂ ಪ್ರಜಾಪ್ರಭುತ್ವ ರಾಷ್ಟ್ರ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದರು.

‘ದೇಶದ ಕಾನೂನು ಒಪ್ಪುತ್ತಿರಲಿಲ್ಲ’: ‘ಜಾಕ್ ಡೋರ್ಸಿ ಆಡಳಿತದ ಅವಧಿಯಲ್ಲಿ ಟ್ವಿಟರ್ ಕಂಪನಿಗೆ ಭಾರತದ ಸಾರ್ವಭೌಮತೆಯನ್ನು ಒಪ್ಪಿಕೊಳ್ಳುವುದು, ದೇಶದ ಕಾನೂನುಗಳನ್ನು ಗೌರವಿಸುವುದು ಸಮಸ್ಯೆಯೇ ಆಗಿತ್ತು’ ಎಂದು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

‘ಡೋರ್ಸಿ ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಯಾರನ್ನೂ ಜೈಲಿಗೆ ಕಳುಹಿಸಿಲ್ಲ ಹಾಗೂ ಟ್ವಿಟರ್‌ನ ಕಾರ್ಯಾಚರಣೆ ಸ್ಥಗಿತಗೊಳಿಸಿರಲಿಲ್ಲ. ಬಹುಶಃ ಟ್ವಿಟರ್ ಎದುರಿಸುತ್ತಿದ್ದ ಸಂದಿಗ್ಧ ಪರಿಸ್ಥಿತಿಯನ್ನು ಮರೆಮಾಚುವ ಉದ್ದೇಶದಿಂದ ಅವರು ಈ ರೀತಿ ಆರೋಪ ಮಾಡಿರಬಹುದು’ ಎಂದು ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

‘ಡೋರ್ಸಿ ಹಾಗೂ ಅವರ ತಂಡ ಟ್ವಿಟರ್ ನೇತೃತ್ವ ವಹಿಸಿದ್ದ ವೇಳೆಯಲ್ಲಿ, ಕಂಪನಿಯು ಈ ನೆಲದ ಕಾನೂನುಗಳನ್ನು ಪದೇಪದೇ ಉಲ್ಲಂಘಿಸುತ್ತಿತ್ತು’ ಎಂದೂ ಹೇಳಿದ್ದಾರೆ.

‘2020ರಿಂದ 2022ರ ವರೆಗಿನ ಅವಧಿಯಲ್ಲಿ ಟ್ವಿಟರ್ ಕಂಪನಿಯು ಕಾನೂನುಗಳನ್ನು ಸರಿಯಾಗಿ ಪಾಲನೆ ಮಾಡುತ್ತಿರಲಿಲ್ಲ. ಕೊನೆಗೆ 2022ರ ಜೂನ್‌ನಲ್ಲಿ ಕಾನೂನುಗಳ ಪಾಲನೆಗೆ ಮುಂದಾಯಿತು. ಭಾರತದ ಕಾನೂನುಗಳು ತಮಗೆ ಅನ್ವಯಿಸುವುದಿಲ್ಲ ಎಂಬ ರೀತಿಯಲ್ಲಿ ಟ್ವಿಟರ್ ವರ್ತಿಸಿತ್ತು’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ಆಗ್ರಹ: ಟ್ವಿಟರ್ ಮಾಜಿ ಸಿಇಒ ಜಾಕ್ ಡೋರ್ಸಿ ಅವರ ಆರೋಪಗಳ ಬಗ್ಗೆ ಕೇಂದ್ರ ಸರ್ಕಾರ ಉತ್ತರ ನೀಡಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಆಗ್ರಹಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಡೋರ್ಸಿ ಅವರ ಸಂದರ್ಶನದ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

ಮತ್ತೊಬ್ಬ ನಾಯಕ ಜೈರಾಮ್ ರಮೇಶ್,‘ರೈತರ ಪ್ರತಿಭಟನೆ ವೇಳೆ, ಟ್ವಿಟರ್ ಮುಚ್ಚುವ ಬೆದರಿಕೆ ಹಾಕಿದ್ದ ಬಿಜೆಪಿ ನೇತೃತ್ವದ ಹೇಡಿ ಸರ್ಕಾರ, ಟ್ವಿಟರ್ ಉದ್ಯೋಗಿಗಳ ಮನೆಗಳ ಮೇಲೆ ದಾಳಿ ನಡೆಸಿತ್ತು’ ಎಂದು ಟೀಕಿಸಿದ್ದಾರೆ.

- ಭಾರತ ಸರ್ಕಾರ ಮನವಿ ಮಾಡಿತ್ತೇ ಅಥವಾ ಈ ವಿಷಯದಲ್ಲಿ (ರೈತರ ಪ್ರತಿಭಟನೆ ಸುದ್ದಿ ಮೇಲೆ ನಿರ್ಬಂಧ) ಸೂಚ್ಯವಾಗಿ ಬೆದರಿಕೆ ಒಡ್ಡಲಾಗಿತ್ತೆ! ವಾಕ್ ಸ್ವಾತಂತ್ರ್ಯ ಇದೆ, ಆದರೆ, ಮಾತನಾಡಿದ ನಂತರ ಸ್ವಾತಂತ್ರ್ಯ ಇರುವುದರ ಬಗ್ಗೆ ನಾನು ಖಾತ್ರಿ ನೀಡಲಾರೆ ಎಂದು ಈದಿ ಅಮೀನ್ ಒಮ್ಮೆ ಹೇಳಿದ್ದ. ಪ್ರಧಾನಿ ನರೇಂದ್ರ ಮೋದಿ ಈ ಮಾತುಗಳನ್ನೇ ಮಾರ್ಗದರ್ಶಿ ತತ್ವಗಳನ್ನಾಗಿ ಮಾಡಿಕೊಂಡಿದ್ದಾರೆ

ತೃಣಮೂಲ ಕಾಂಗ್ರೆಸ್ ಟ್ವೀಟ್

- ರೈತರ ಪ್ರತಿಭಟನೆಯನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ನಡೆಸಿದ್ದ ಯತ್ನವನ್ನು ಇಡೀ ದೇಶವೇ ನೋಡಿದೆ. ಈಗ ಡೋರ್ಸಿ ಅವರ ಹೇಳಿಕೆಗಳು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಪತ್ರಕರ್ತರ ಹಾಗೂ ವಿಪಕ್ಷಗಳ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೇಂದ್ರ ದಮನ ಮಾಡಲು ಬಯಸಿದ್ದಲ್ಲಿ ಅದು ಅಪಾಯಕಾರಿ

–ಎನ್‌ಸಿಪಿ

- ಪ್ರತಿಭಟನೆ ಸಂದರ್ಭದಲ್ಲಿ 733 ರೈತರು ಹುತಾತ್ಮರಾದರು. ಆದರೆ, ದೆಹಲಿಯಲ್ಲಿರುವ ಸರ್ವಾಧಿಕಾರಿ ಮಾತ್ರ ರೈತರ ಮೃತದೇಹಗಳನ್ನು ಮುಂದಿಟ್ಟುಕೊಂಡು ತನ್ನ ವರ್ಚಸ್ಸು ವೃದ್ಧಿಸಿಕೊಳ್ಳುವಲ್ಲಿ ತೊಡಗಿದ್ದ. ಹವಾಮಾನ ಬದಲಾವಣೆ ವಿರುದ್ಧ ಹೋರಾಡುತ್ತಿರುವ 21 ವರ್ಷದ ದಿಶಾ ರವಿ ಅಥವಾ ಬಾಲಕಿ ಗ್ರೇಟಾ ಥನ್‌ಬರ್ಗ್ ಇಲ್ಲವೇ ಗಾಯಕಿ ರಿಹಾನಾ ಅವರನ್ನು ಕಂಡರೆ ಪ್ರಧಾನಿ ಯಾಕೆ ಹೆದರುತ್ತಾರೆ?

ಸುಪ್ರಿಯಾ ಶ್ರೀನಾತೆ

ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ವೇದಿಕೆಗಳ ವಿಭಾಗದ ಮುಖ್ಯಸ್ಥೆ

- ದ್ವೇಷ ಭಾಷಣ ಮತ್ತು ಬಿಜೆಪಿಯ ವಿವೇಕರಹಿತ ಕಾರ್ಯಸೂಚಿಯನ್ನು ಪ್ರಚುರಪಡಿಸುವ ಸಲುವಾಗಿ ಟ್ವಿಟರ್ ಈ ನೆಲದ ಕಾನೂನನ್ನು ಮುರಿದಿದೆ

ಪ್ರಿಯಾಂಕಾ ಚತುರ್ವೇದಿ, ಶಿವಸೇನಾ (ಯುಬಿಟಿ) ರಾಜ್ಯಸಭಾ ಸದಸ್ಯೆ

‘ಡೋರ್ಸಿ ಸರಿಯಾಗಿಯೇ ಹೇಳಿದ್ದಾರೆ’

‘ನಮ್ಮ ಪ್ರತಿಭಟನೆಯನ್ನು ದಮನ ಮಾಡಲು ಕೇಂದ್ರ ಸರ್ಕಾರ ಯತ್ನಿಸುತ್ತಿತ್ತು. ಈ ವಿಷಯವನ್ನು ಅವರು (ಜಾಕ್ ಡೋರ್ಸಿ) ಈಗ ಸ್ಪಷ್ಟವಾಗಿ ಹೇಳಿದ್ದಾರೆ’ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ.

‘ಇಂತಹ ಕಂಪನಿಗಳು ಯಾರದೇ ಒತ್ತಡಕ್ಕೆ ಮಣಿಯುವುದಿಲ್ಲ. ಆದರೆ, ಭಾರತ ಸರ್ಕಾರ ಟ್ವಿಟರ್ ಮೇಲೆ ಒತ್ತಡ ಹೇರುವ ಪ್ರಯತ್ನಗಳನ್ನು ಮಾಡಿರಲೇಬೇಕು. ಅವರು ಹೇಳಿದ್ದು ಸರಿಯಾಗಿಯೇ ಇದೆ’ ಎಂದು ಹೇಳಿದ್ದಾರೆ. ‘ರೈತರ ಪ್ರತಿಭಟನೆ ಕುರಿತ ಸುದ್ದಿಗಳು ನಮ್ಮ ನಿರೀಕ್ಷೆಗೆ ತಕ್ಕಂತೆ ಫೇಸ್‌ಬುಕ್ ಹಾಗೂ ಟ್ವಿಟರ್ ಮೂಲಕ ಜನರನ್ನು ತಲುಪುತ್ತಿರಲಿಲ್ಲ ಎಂಬ ಬಗ್ಗೆ ನಮಗೆ ಆಗ ಮಾಹಿತಿ ಇತ್ತು’ ಎಂದಿದ್ದಾರೆ.

ಪ್ರಮಾದಗಳನ್ನು ಮುಚ್ಚಿಹಾಕಲು ಡೋರ್ಸಿ ಯತ್ನ: ಠಾಕೂರ್

ಟ್ವಿಟರ್ ಸಹ ಸಂಸ್ಥಾಪಕ ಜಾಕ್ ಡೋರ್ಸಿ ಈ ಹಿಂದೆ ತಾವು ಮಾಡಿರುವ ಪ್ರಮಾದಗಳನ್ನು ಮುಚ್ಚಿಹಾಕುವ ಪ್ರಯತ್ನದ ಭಾಗವಾಗಿ ಇಂತಹ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಅವರ ದುರಾಡಳಿತವನ್ನು ‘ಟ್ವಿಟರ್ ಫೈಲ್ಸ್’ ಬಹಿರಂಗಪಡಿಸಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ತಿರುಗೇಟು ನೀಡಿದ್ದಾರೆ.

‘ಗಾಢನಿದ್ರೆಯಿಂದ ಜಾಕ್ ಡೋರ್ಸಿ ಎದ್ದಿದ್ದಾರೆ. ತಮ್ಮ ತಪ್ಪುಗಳನ್ನು ಮುಚ್ಚಿಹಾಕಲು ಈಗ ಇಂಥ ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

ಟ್ವಿಟರ್ ಖಾತೆಗಳನ್ನು ನಿಷೇಧಿಸುವುದು ಹಾಗೂ ಅಮಾನತಿನಲ್ಲಿಡುವ ವಿಷಯಗಳನ್ನು ಈ ಹಿಂದಿದ್ದ ಆಡಳಿತ ಹೇಗೆ ನಿಭಾಯಿಸಿತ್ತು ಎಂಬ ವಿವರಗಳಿರುವ ವಿವಾದಾತ್ಮಕ ‘ಟ್ವಿಟರ್ ಫೈಲ್ಸ್’ಅನ್ನು ಕಳೆದ ವರ್ಷ ಡಿಸೆಂಬರ್‌ನಲ್ಲಿ ಎಲಾನ್ ಮಸ್ಕ್ ಬಿಡುಗಡೆ ಮಾಡಿದ್ದರು.

ಸಾಮಾಜಿಕ ಮಾಧ್ಯಮದ ದುರ್ಬಳಕೆ, ಯಾವ ರೀತಿ ಪಕ್ಷಪಾತ ಮಾಡಲಾಗುತ್ತಿತ್ತು ಎಂಬ ಬಗ್ಗೆ ಆಂತರಿಕ ಸಂವಹನದ ವೇಳೆ ತಿಳಿದುಬಂದಿದ್ದ ವಿಚಾರಗಳನ್ನು ಈ ‘ಟ್ವಿಟರ್ ಫೈಲ್ಸ್’ ಒಳಗೊಂಡಿತ್ತು.



ಕನ್ನಡ ಸಂಘರ್ಷ ಸಮಿತಿ ಆಯೋಜಿಸಿದ್ದ ಡಾ. ಕೋ.ವೆಂ. ರಾಮಕೃಷ್ಣೇಗೌಡ ಜನ್ಮ ದಿನ ಕಾರ್ಯಕ್ರಮದಲ್ಲಿ ಕನ್ನಡ ಪರ ಹೋರಾಟಗಾರ ನ. ವಿಜಯ್ ಕುಮಾರ್ ಅವರಿಗೆ 'ಕೋ.ವೆಂ. ರಾಮಕೃಷ್ಣೇಗೌಡ ಕನ್ನಡ ಪರಿಚಾರಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕನ್ನಡ ಸಂಘರ್ಷ ಸಮಿತಿ ಕಾರ್ಯದರ್ಶಿ ಇಂದಿರಾ ಶರಣ್ ಜಮ್ಮಲದಿನ್ನಿ, ಗಾಯತ್ರಿ ರಾಮಣ್ಣ, ಕನ್ನಡ ಜನಶಕ್ತಿ ಕೇಂದ್ರ ಅಧ್ಯಕ್ಷ ಸಿ.ಕೆ. ರಾಮೇಗೌಡ, ಕನ್ನಡ ಪರ ಹೋರಾಟಗಾರ ರಾಮಣ್ಣ ಎಚ್ ಕೋಡಿಹೊಸಹಳ್ಳಿ, ಕನ್ನಡ ಉಪನ್ಯಾಸಕ ಎಸ್ ರಾಮಲಿಂಗೇಶ್ವರ (ಸಿಸಿರ), ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್ ನಾಗರಾಜಸ್ವಾಮಿ, ಎಂ. ಪ್ರಕಾಶಮೂರ್ತಿ, ಕನ್ನಡ ಸಂಘರ್ಷ ಸಮಿತಿ ಪ್ರಧಾನ ಕಾರ್ಯದರ್ಶಿ ತಾ.ಸಿ. ತಿಮ್ಮಯ್ಯ ಇದ್ದಾರೆ

ತಾಪಮಾನ ಏರಿಕೆ, ಮಳೆ ಕೊರತೆಯಿಂದ ಗಗನಕ್ಕೇರಿದ ತರಕಾರಿ ದರ

₹100 ದಾಟಿದ ಬೀನ್ಸ್, ಕ್ಯಾರೆಟ್

● ಖಲೀಲಅಹ್ಮದ ಶೇಖ

ಬೆಂಗಳೂರು: ತಾಪಮಾನ ಏರಿಕೆ, ಮಳೆ ಕೊರತೆಯಿಂದಾಗಿ ಇಳುವರಿ ಕುಂಠಿತವಾಗಿ ತರಕಾರಿ ಮತ್ತು ಸೊಪ್ಪಿನ ದರಗಳು ದುಪ್ಪಟ್ಟಾಗಿವೆ. ಬೀನ್ಸ್ ಮತ್ತು ಕ್ಯಾರೆಟ್ ₹100ರ ಗಡಿ ದಾಟಿದ್ದು, ಗ್ರಾಹಕರಿಗೆ ಹೊರೆಯಾಗಿದೆ.

ಕಳೆದ ವಾರ ರಾಜ್ಯದ ಕೆಲವು ಭಾಗಗಳಲ್ಲಿ ಮುಂಗಾರುಪೂರ್ವ ಮಳೆ ಬಿದ್ದಿದೆ. ಆದರೆ, ಬಿಸಿಲಿನ ತಾಪ ಕಡಿಮೆಯಾಗಿಲ್ಲ. ಈ ಕಾರಣದಿಂದ ಸಹಜವಾಗಿಯೇ ತರಕಾರಿಗಳ ಇಳುವರಿ ಕಡಿಮೆಯಾಗಿ ಬೆಲೆ ದುಬಾರಿಯಾಗಿದೆ.

'ತಮಿಳುನಾಡು ಸೇರಿ ಬೇರೆ ರಾಜ್ಯಗಳಲ್ಲಿ ಮಳೆ ಬೀಳದ ಕಾರಣ ಕ್ಯಾರೆಟ್ ಪೂರೈಕೆ ಕಡಿಮೆಯಾಗಿದೆ. ಅಲ್ಲಿಂದ ಆವಕವಾಗುತ್ತಿದ್ದ ಕ್ಯಾರೆಟ್ ಪ್ರಮಾಣ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಇದರಿಂದ ಬೆಲೆ ಹೆಚ್ಚಾಗಿದೆ. ಮದುವೆ ಮೊದಲಾದ ಶುಭ ಸಮಾರಂಭ ಮಾಡುವವರಿಗೆ ಹಾಗೂ ಗ್ರಾಹಕರಿಗೆ ಇದರಿಂದ ಹೆಚ್ಚು ತೊಂದರೆಯಾಗಿದೆ. ಮತ್ತೊಂದೆಡೆ ರೈತರು ಬೆಳೆದ ಫಸಲಿಗೆ ಸಮರ್ಪಕ ಇಳುವರಿ ಬಾರದ ಕಾರಣ ಅವರಿಗೂ ಹೆಚ್ಚಿನ ಲಾಭವಾಗುತ್ತಿಲ್ಲ'



ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳು.

ಕಳೆದ ವಾರ ಕೆ.ಜಿಗೆ ₹60ಕ್ಕೆ ಮಾರಾಟವಾಗುತ್ತಿದ್ದ ಬೀನ್ಸ್, ಕ್ಯಾರೆಟ್ ₹100ರ ಗಡಿ ದಾಟಿದೆ. ಪ್ರತಿ ಕೆ.ಜಿ.ಗೆ ₹40ರಂತೆ ಮಾರಾಟವಾಗುತ್ತಿದ್ದ ಹೂಕೋಸು, ಹಾಗಲಕಾಯಿ, ತೊಂಡೆಕಾಯಿ, ಬದನೆ ಕಾಯಿ, ಕುಂಬಳಕಾಯಿ, ಸೋರೆಕಾಯಿ, ಹೀರೇಕಾಯಿ ₹20 ಹೆಚ್ಚಳವಾಗಿ, ₹60ರಂತೆ ಮಾರಾಟವಾಗುತ್ತಿವೆ.

ಸೊಪ್ಪಿನ ದರ ಹೆಚ್ಚಳ: ಕಳೆದ ವಾರ ಒಂದು ಕಟ್ಟಿಗೆ ₹10ರಂತೆ ಮಾರಾಟವಾಗುತ್ತಿದ್ದ ಕೊತ್ತಂಬರಿ, ಸದ್ಯ ₹40ರಂತೆ ಮಾರಾಟವಾಗುತ್ತಿದೆ. ಮೆಂತೆ, ಸಬ್ಬಸಿಗೆ ಪ್ರತಿ ಕಟ್ಟಿಗೆ ₹20ರಂತೆ ಮಾರಾಟವಾಗುತ್ತಿವೆ.

'ಪ್ರತಿ ಕೆ.ಜಿ. ಪಡವಲಕಾಯಿ ₹80, ಟೊಮೆಟೊ ದರದಲ್ಲಿ ₹20 ಹೆಚ್ಚಾಗಿದ್ದು, ₹40ರಂತೆ ಮಾರಾಟವಾಗುತ್ತಿದೆ. ಕಳೆದ ವಾರದಂತೆ ಅಗತ್ಯ ಪ್ರಮಾಣದ ತರಕಾರಿಗಳು ಮಾರುಕಟ್ಟೆಗೆ ಪೂರೈಕೆಯಾಗುತ್ತಿಲ್ಲ. ಮುಂದಿನ ವಾರ ಮತ್ತೆ ತರಕಾರಿ ದರಗಳು ಸ್ಥಿರತೆ ಕಾಣಲಿದ್ದು, ಅಲ್ಲಿಯವರೆಗೆ ದರ ಏರಿಕೆ ತಪ್ಪಿದ್ದಲ್ಲ' ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳಾದ ಅಕ್ರಮ್, ಮಂಜುನಾಥ್ ಮತ್ತು ಕುಮಾರ್.

ತರಕಾರಿ	ಕಳೆದ ವಾರದ ದರ	ಈ ವಾರದ ದರ
(ಕೆ.ಆರ್. ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ)		
ಬೀನ್ಸ್	60	100
ಬಟಾಣಿ	80	100
ಕ್ಯಾರೆಟ್	60	100
ಕ್ಯಾಪ್ಸಿಕಮ್	40	60
ಮೆಣಸಿನಕಾಯಿ	60	80
ಹೀರೇಕಾಯಿ	50	60
ಬೆಂಡೇಕಾಯಿ	30	40
ಆಲೂಗಡ್ಡೆ	20	25
ಟೊಮೆಟೊ	20	40
ಈರುಳ್ಳಿ	20	20
ಸೋರೇಕಾಯಿ	30	50
ಪಡವಲಕಾಯಿ	70	80
ನುಗ್ಗೆಕಾಯಿ	80	100
ಬದನೆಕಾಯಿ	40	60
ಹಾಗಲಕಾಯಿ	40	60
ತೊಂಡೆಕಾಯಿ	50	60
ಬೀಟ್‌ರೂಟ್	30	40
ಕುಂಬಳಕಾಯಿ	40	60
ಕ್ಯಾಬೇಜ್	25	30
ಶುಂಠಿ	120	200
ಬೆಳ್ಳುಳ್ಳಿ	70	120

ಸುದ್ದಿ 2 ನಿಮಿಷ

100 ಹಣ್ಣಿನ ಮರ ಬೆಳೆಸಲು ಪೊಲೀಸರಿಗೆ ತಾಕೀತು

ನವದೆಹಲಿ (ಪಿಟಿಐ): ಮರಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ವಕೀಲರ ಜೊತೆ ಅನುಚಿತವಾಗಿ ವರ್ತಿಸಿದ್ದ ಇಬ್ಬರು ಪೊಲೀಸ್ ಅಧಿಕಾರಿಗಳಿಗೆ ವಿವಿಧ ಜಾತಿಯ 100 ಹಣ್ಣಿನ ಗಿಡಗಳನ್ನು ನೆಟ್ಟು ಪೋಷಿಸುವಂತೆ ದೆಹಲಿ ಹೈಕೋರ್ಟ್ ತಾಕೀತು ಮಾಡಿದೆ.

2021ರ ಫೆಬ್ರುವರಿಯಲ್ಲಿ ಇಲ್ಲಿನ ಲೋಧಿ ಕಾಲೊನಿ ಪ್ರದೇಶದಲ್ಲಿ ಸರ್ಕಾರಿ ಕಾಮಗಾರಿ ವೇಳೆ ಮರಗಳಿಗೆ ಹಾನಿ ಮಾಡಲಾಗಿತ್ತು. ಆಗ ಸ್ಥಳದಲ್ಲಿದ್ದ ವಕೀಲ ಆದಿತ್ಯ ಎನ್. ಪ್ರಸಾದ್ ಮರಗಳ ಸಂರಕ್ಷಣೆ ಮಾಡುವುದು ಪೊಲೀಸರ ಕರ್ತವ್ಯವೆಂದು ಹೇಳಿದ್ದರು. ಇದಕ್ಕೆ ಪೊಲೀಸ್ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿ ವಾಗ್ವಾದ ನಡೆಸಿದ್ದರು. ಈ ಬಗ್ಗೆ ನವದೆಹಲಿ ಸೆಷನ್ ನ್ಯಾಯಾಲಯ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ನಜ್ಮಿ ವಜೀರಿ ಅವರು, 'ಮರಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಕೋರ್ಟ್ ಜಾರಿಗೊಳಿಸಿದ ಆದೇಶಗಳು ಪಾಲನೆಯಾಗುತ್ತಿಲ್ಲ. ಮರಗಳ ಸಂರಕ್ಷಣೆ ಪೊಲೀಸರ ಜವಾಬ್ದಾರಿಯಾಗಿದ್ದು, ಈ ಸಂಬಂಧ ಎಲ್ಲಾ ಠಾಣೆಗಳಿಗೆ ಆದೇಶ ರವಾನಿಸುವಂತೆ ದೆಹಲಿ ಪೊಲೀಸ್ ಆಯುಕ್ತರಿಗೆ ಸೂಚಿಸಿದರು. ದೆಹಲಿ ಸಸ್ಯ ಪಡೆಯ ಅವರೊಂದಿಗೆ ಚರ್ಚಿಸಿ, ಅಂಜೂರ ಸೇರಿ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ನೆಡಬೇಕು. ಮೂರು ವರ್ಷದವರೆಗೆ ಅಥವಾ 10 ಅಡಿ ಎತ್ತರಕ್ಕೆ ಬೆಳೆಯುವವರೆಗೂ ಪೋಷಣೆ ಮಾಡಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದೆ.

ಕ್ರಷರ್ ವಿರೋಧಿಸಿ ಪ್ರತಿಭಟನೆ




ದಾಬಸ್ ಪೇಟೆ: ರಾಷ್ಟ್ರೀಯ ಹೆದ್ದಾರಿ 48ರ ಸಮೀಪ ಎಚ್.ಜಿ. ಇನ್ಫ್ರಾ ಎಂಜಿನಿಯರ್ ಜಲ್ಲಿ ಕ್ರಷರ್ ರಾತ್ರಿ ವೇಳೆಯೂ ಕೆಲಸ ಮಾಡುತ್ತಿದ್ದು, ಜನರಿಗೆ ತೊಂದರೆ ಆಗುತ್ತಿದೆ ಎಂದು ರಾಯರಪಾಳ್ಯ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಆಗಳಕುಪ್ಪೆ ಗ್ರಾಮ ಪಂಚಾಯಿತಿ ಹಾಗೂ ಪರಿಸರ ಇಲಾಖೆಯಿಂದ ಪರವಾನಗಿ ಪಡೆಯದೆ ಕಾರ್ಯನಿರ್ವಹಿಸುತ್ತಿದೆ. ರಾತ್ರಿ ಸಂದರ್ಭದಲ್ಲಿ ಕೆಲಸ ಮಾಡುವುದರಿಂದ ಗ್ರಾಮದ ಜನರಿಗೆ ಶಬ್ದ, ದೂಳಿನ ಸಮಸ್ಯೆಯಾಗುತ್ತಿದೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಗ್ರಾಮದ ಸರ್ವೆ ನಂ 40 ಮತ್ತು 41ರಲ್ಲಿ ಟ್ರಕ್ ಟರ್ಮಿನಲ್ ಹಾಗೂ ರಸ್ತೆ ನಿರ್ಮಾಣಕ್ಕೆ ಭೂಮಿ ಸ್ವಾಧೀನ ಮಾಡಿದ್ದಾರೆ. ಆದರೆ, ಇವರು ಅನಧಿಕೃತವಾಗಿ ಟಾರ್ ಪ್ಲಾಂಟ್ ಹಾಗೂ ಜಲ್ಲಿ ಕ್ರಷರ್ ನಡೆಸುತ್ತಿದ್ದಾರೆ. ಕರ್ಕಶ ಶಬ್ದ ಹಾಗೂ ವಿಷಯುಕ್ತ ಗಾಳಿ ಗ್ರಾಮಗಳಿಗೆ ಬರುತ್ತಿದೆ ಎಂದು ಗ್ರಾಮಸ್ಥರಾದ ಗುರು ಪ್ರಸಾದ್, ಹರೀಶ ದೂರಿದರು.

ಅಶ್ವತ್ಥನಾರಾಯಣ, ಭಾನುಮತಿಗೆ ಕಸಾಪ ವಿದ್ವತ್ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಅಶ್ವತ್ಥನಾರಾಯಣ



ಭಾನುಮತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಭಾಷಾ ಶಾಸ್ತ್ರಜ್ಞರಿಗಾಗಿ ಮೀಸಲಿಟ್ಟಿರುವ ಟಿ.ವಿ. ವೆಂಕಟಾಚಲ ಶಾಸ್ತ್ರಿ ವಿದ್ವತ್ ದತ್ತಿ ಪ್ರಶಸ್ತಿಗೆ ಜಿ. ಅಶ್ವತ್ಥ ನಾರಾಯಣ ಹಾಗೂ ವೈ.ಸಿ. ಭಾನುಮತಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹ 10 ಸಾವಿರ ನಗದು, ಪ್ರಶಸ್ತಿ ಫಲಕಗಳನ್ನು ಒಳಗೊಂಡಿದೆ. ಕೋವಿಡ್ ಕಾರಣಕ್ಕೆ ಎರಡು ವರ್ಷ ಪ್ರಶಸ್ತಿ ನೀಡಿರಲಿಲ್ಲ. 2022ನೇ ಸಾಲಿನ ಪ್ರಶಸ್ತಿಗೆ ಭಾಷಾಶಾಸ್ತ್ರಜ್ಞೆ ಮೈಸೂರಿನ ವೈ.ಸಿ. ಭಾನುಮತಿ ಹಾಗೂ 2023ನೇ ಸಾಲಿನ ಪ್ರಶಸ್ತಿಗೆ ಭಾಷಾಶಾಸ್ತ್ರಜ್ಞ ಜಿ. ಅಶ್ವತ್ಥನಾರಾಯಣ ಅವರನ್ನು ಸಮಿತಿ ಆಯ್ಕೆಮಾಡಿದೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಮಹೇಶ ಜೋಶಿ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯಲ್ಲಿ ಟಿ.ವಿ.ವೆಂಕಟಾಚಲಶಾಸ್ತ್ರಿ ಅವರ ಮಗಳು ಟಿ.ವಿ. ಚಿತ್ಕಲಾ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು ಇದ್ದರು.

ಬೆಂಗಳೂರು ಯುವಕ ಸಮುದ್ರ ಪಾಲು

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಮುರುಡೇಶ್ವರ ಪ್ರವಾಸಕ್ಕೆ ಬಂದಿದ್ದ ಇಬ್ಬರು ಪ್ರವಾಸಿಗರು ಸಮುದ್ರದ ಅಲೆಗೆ ಕೊಚ್ಚಿ ಹೋಗಿದ್ದು, ಒಬ್ಬರ ಮೃತದೇಹ ಪತ್ತೆಯಾಗಿದೆ. ಇನ್ನೊಬ್ಬರಿಗಾಗಿ ಶೋಧ ಮುಂದುವರಿದಿದೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ನಿವಾಸಿ ಪವನ್ (20) ಮಂಗಳವಾರ ಮೃತಪಟ್ಟಿದ್ದಾರೆ. ಧಾರವಾಡ ಜಿಲ್ಲೆಯ ಕಲಘಟಗಿಯ ಸಂತೋಷ ಹುಲಿಗುಂಡೆ (19) ಸೋಮವಾರ ಕೊಚ್ಚಿ ಹೋಗಿದ್ದು, ಶೋಧ ಮುಂದುವರೆದಿದೆ.

ಕೆ.ಆರ್. ಪುರ: ದಾಖಲೆಗಳಿಗೆ ಜನರ ಪರದಾಟ

ಬಗೆಹರಿಯದ ಸಾರ್ವಜನಿಕರ ಸಮಸ್ಯೆ ● ಪ್ರಮಾಣಪತ್ರ ನೀಡಲು ವಿಳಂಬ

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಜಾತಿ ಮತ್ತು ಆದಾಯ ಪ್ರಮಾಣಪತ್ರ, ಪಹಣಿ ಇನ್ನಿತರ ಭೂ ದಾಖಲೆಗಳಿಗಾಗಿ ಸಾರ್ವಜನಿಕರು ಕೆ.ಆರ್.ಪುರ ತಾಲ್ಲೂಕು ಕಚೇರಿಯಲ್ಲಿ ಪರದಾಡಬೇಕಾಗಿದೆ.

ತಾಲ್ಲೂಕು ಕಚೇರಿಯಲ್ಲಿನ ಸರ್ವರ್ ಸಮಸ್ಯೆ, ಸಿಬ್ಬಂದಿ ಕೊರತೆ ಮತ್ತು ದಾಖಲೆ ನೀಡಲು ಹೆಚ್ಚಿನ ಹಣ ಕೇಳುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

ಬಾಣಸವಾಡಿ, ಕೆ.ಆರ್.ಪುರ, ಮಹದೇವಪುರ, ಬ್ಯಾಟರಾಯನಪುರ, ಸಿ.ವಿ. ರಾಮನ್ ನಗರ ಸೇರಿದಂತೆ ವಿವಿಧ ಭಾಗಗಳಿಂದ ತಮ್ಮ ಕೆಲಸ ಕಾರ್ಯಗಳಿಗಾಗಿ ತಾಲ್ಲೂಕು ಕಚೇರಿಗೆ ಬರುವ ಸಾರ್ವಜನಿಕರು ಪ್ರಮಾಣ ಪತ್ರ ಪಡೆಯಲು ಹರಸಾಹಸಪಡಬೇಕಾಗಿದೆ. ಸರ್ವರ್ ಸಮಸ್ಯೆಯಿಂದ ತಾಸುಗಟ್ಟಲೆ ಕಾಯುವ ಪರಿಸ್ಥಿತಿ ಸೃಷ್ಟಿಯಾಗಿದೆ.

'ಆದಾಯ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಲು ಸರತಿ ಸಾಲಿನಲ್ಲಿ ನಿಲ್ಲುವ ನಾವು ಇಡೀ ದಿನ ಕಾಯ್ದರೂ ಯಾವುದೇ ಕೆಲಸ ಕಾರ್ಯಗಳು ಆಗುವುದಿಲ್ಲ. ಕೆಲ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಬರುವುದಿಲ್ಲ. ಗಂಟೆಗಟ್ಟಲೆ ಕಾಯಿಸಿದ ನಂತರ ಸರ್ವರ್ ಸಮಸ್ಯೆ ಇದೆ ಎಂಬ ನೆಪ ಹೇಳುತ್ತಾರೆ. ಪ್ರಮಾಣ ಪತ್ರ ಪಡೆಯಲು ಎಲ್ಲ ಕೆಲಸಗಳನ್ನು ಬದಿಗೊತ್ತಿ ಈ ಕಚೇರಿಗೆ ವಾರಗಟ್ಟಲೆ ಅಲೆದಾಡಬೇಕಿದೆ' ಎಂದು ಕೆ.ಆರ್. ಪುರದ ನಿವಾಸಿ ಸತೀಶ್ ದೂರಿದರು.

'ವಿವಿಧ ದಾಖಲೆಗಳ ಪ್ರಮಾಣ ಪತ್ರಕ್ಕಾಗಿ ಬರುವ ಜನರು ತಾಸುಗಟ್ಟಲೆ ನಿಲ್ಲಬೇಕಿದೆ. ಸರಿಯಾದ ಸಮಯದಲ್ಲಿ ದಾಖಲೆ ಪ್ರಮಾಣ ಪತ್ರ ದೊರೆಯದಿರಲು ಸಿಬ್ಬಂದಿ ಕೊರತೆ ಇದೆ. ಹೋಬಳಿ ಮಟ್ಟದಲ್ಲಿ ದಾಖಲೆ ದೊರೆಯಲು ಉಪ ಕೇಂದ್ರಗಳನ್ನು ಸ್ಥಾಪಿಸಬೇಕು. ಹೆಚ್ಚುವರಿ ಗಣಕಯಂತ್ರ ಸಿಬ್ಬಂದಿ ನೇಮಕ ಮಾಡಬೇಕು' ಎಂದು ದಲಿತ ಮುಖಂಡ ಟಿ.ನಾರಾಯಣ ಸ್ವಾಮಿ ಹೇಳಿದರು.

'ಸಾರ್ವಜನಿಕರು ಪ್ರಶ್ನೆ ಮಾಡಿದರೆ ಯಾವುದೇ ಸಮಸ್ಯೆ ಇದ್ದರೂ ಸರ್ವರ್ ಸಮಸ್ಯೆ ಎಂದು ಕುಂಟುನೆಪ ಹೇಳುತ್ತಾರೆ. ಶಾಲೆ ಕಾಲೇಜುಗಳಿಗೆ ಬೇಕಾಗಿರುವ ದಾಖಲೆಗಾಗಿ ತಾಲ್ಲೂಕು ಕಚೇರಿಗೆ ಬಂದರೆ ಬಡವರು ತಾಸುಗಟ್ಟಲೆ ಕಾಯುವ ಪರಿಸ್ಥಿತಿ ಇದೆ. ಕೂಲಿ ಮಾಡುವ ಬಡ ಮಹಿಳೆಯರು ಚಿಕ್ಕಮಕ್ಕಳನ್ನು ಕರೆದುಕೊಂಡು ಬಂದಿದ್ದರೂ ಅವರಿಗೆ ಯಾವುದೇ ಪರಿಹಾರ ದೊರೆಯುವುದಿಲ್ಲ. ಸಾಯಂ ಕಾಲವಾದರೂ ಕೆಲಸವಾಗದೆ ಮನೆಗೆ ಮರಳುವ ಸ್ಥಿತಿ ಇದೆ' ಎಂದು ಪಟ್ಟಂದೂರು ಅಗ್ರಹಾರ ನಿವಾಸಿ ಮಂಜುನಾಥ್ ದೂರಿದರು.

'ಸರ್ಕಾರಿ ಕಚೇರಿ ಆಚೆಗೂ ಖಾಸಗಿ ಸೈಬರ್‌ಕೇಂದ್ರಗಳಲ್ಲಿ ದಾಖಲೆ ಪಡೆಯಲು ಅನುಕೂಲ ಮಾಡಬೇಕು. ಬೆಂಗಳೂರು ಒನ್ ಕೇಂದ್ರದಲ್ಲಿಯೂ ದಾಖಲೆ ಪಡೆಯುವ ಸೌಲಭ್ಯ ಒದಗಿಸುವಂತಾಗಬೇಕು. ದೂರದ ಊರುಗಳಿಂದ ಜನರು ಬಂದು ಸರತಿಸಾಲಿನಲ್ಲಿ ನಿಲ್ಲುವ ಪರಿಸ್ಥಿತಿಗೆ ಪರಿಹಾರ ಸಿಗಬೇಕಿದೆ' ಎಂದು ಅವರು ಹೇಳಿದರು.

ಕ್ರಿಕೆಟ್: ವೆಸ್ಟ್ ಇಂಡೀಸ್ ಪ್ರವಾಸದ ಬಳಿಕ ನಾಯಕತ್ವದ ಭವಿಷ್ಯ ನಿರ್ಧಾರ?

ರೋಹಿತ್‌ಗೆ ನಿರ್ಣಾಯಕ ಸರಣಿ

ನವದೆಹಲಿ (ಪಿಟಿಐ): ಮುಂದಿನ ತಿಂಗಳು ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿರುವ ಎರಡು ಪಂದ್ಯಗಳ ಟೆಸ್ಟ್ ಕ್ರಿಕೆಟ್ ಸರಣಿಗೆ ಭಾರತ ತಂಡವನ್ನು ರೋಹಿತ್ ಶರ್ಮಾ ಮುನ್ನಡೆಸುವ ಸಾಧ್ಯತೆಯಿದೆ. ಆದರೆ ವಿಂಡೀಸ್ ಪ್ರವಾಸದ ಬಳಿಕ ಅವರು ನಾಯಕತ್ವದಲ್ಲಿ ಮುಂದುವರಿಯುವುದು ಅನಿಶ್ಚಿತವಾಗಿದೆ.

ಟೆಸ್ಟ್ ತಂಡದ ನಾಯಕ ಸ್ಥಾನದಲ್ಲಿ ಇನ್ನಷ್ಟು ಅವಧಿಗೆ ಮುಂದುವರಿಯಬೇಕಾದರೆ, ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ಉತ್ತಮ ಪ್ರದರ್ಶನ ನೀಡುವ ಅನಿವಾರ್ಯತೆ ಅವರ ಮುಂದಿದೆ.

’ಜುಲೈ 12 ರಂದು ಡೊಮಿನಿಕಾದಲ್ಲಿ ಆರಂಭವಾಗಲಿರುವ ವೆಸ್ಟ್ ಇಂಡೀಸ್ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಯಿಂದ ದೂರವಿರಲು ರೋಹಿತ್ ನಿರ್ಧರಿಸದಿದ್ದರೆ, ತಂಡವನ್ನು ಅವರೇ ಮುನ್ನಡೆಸುವರು’ ಎಂದು ಭಾರತ ತಂಡದಲ್ಲಿನ ಬೆಳವಣಿಗೆಗಳನ್ನು ಬಲ್ಲ ಮೂಲಗಳು ತಿಳಿಸಿವೆ.

ಆದರೆ ಡೊಮಿನಿಕಾ ಮತ್ತು ಟ್ರಿನಿಡಾಡ್‌ನಲ್ಲಿ ನಡೆಯಲಿರುವ ಟೆಸ್ಟ್ ಪಂದ್ಯಗಳಲ್ಲಿ ರೋಹಿತ್ ದೊಡ್ಡ ಮೊತ್ತ ಗಳಿಸದಿದ್ದರೆ, ಅವರನ್ನು ನಾಯಕತ್ವದಿಂದ ಕೆಳಗಿಳಿಸಬೇಕಾದ ಒತ್ತಡಕ್ಕೆ ಬಿಸಿಸಿಐ ರಾಷ್ಟ್ರೀಯ ಆಯ್ಕೆ ಸಮಿತಿಯು ಸಿಲುಕಲಿದೆ ಎನ್ನಲಾಗಿದೆ.

‘ರೋಹಿತ್ ಅವರನ್ನು ಟೆಸ್ಟ್ ನಾಯಕತ್ವದಿಂದ ಕೆಳಗಿಳಿಸಲಾಗುತ್ತಿದೆ ಎಂಬುದು ಆಧಾರರಹಿತ ಮಾತು. ಆದರೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಮುಂಬರುವ ಆವೃತ್ತಿ 2025 ರಲ್ಲಿ ಕೊನೆಗೊಳ್ಳುವ ವೇಳೆಗೆ ಅವರಿಗೆ 38 ವರ್ಷವಾಗಿರುತ್ತದೆ. ಮುಂಬರುವ ಇಡೀ ಆವೃತ್ತಿಯಲ್ಲಿ



ರೋಹಿತ್ ಶರ್ಮಾ

(ಎರಡು ವರ್ಷ) ತಂಡವನ್ನು ಮುನ್ನಡೆಸಲು ಸಾಮರ್ಥ್ಯ ಅವರಿಗೆ ಇದೆಯೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ’ ಎಂದು ಬಿಸಿಸಿಐನ ಮೂಲಗಳು ತಿಳಿಸಿವೆ.

‘ವೆಸ್ಟ್ ಇಂಡೀಸ್‌ನಲ್ಲಿ ತೋರುವ ಬ್ಯಾಟಿಂಗ್ ಪ್ರದರ್ಶನದ ಆಧಾರದಲ್ಲಿ ಆಯ್ಕೆ ಸಮಿತಿಯು ರೋಹಿತ್ ಅವರನ್ನು ನಾಯಕತ್ವದಲ್ಲಿ ಮುಂದುವರಿಸುವ ಬಗ್ಗೆ ಸ್ಪಷ್ಟ ತೀರ್ಮಾನಕ್ಕೆ ಬರುವ ಸಾಧ್ಯತೆಯಿದೆ’ ಎಂದು ಹೇಳಿವೆ.

ರೋಹಿತ್ ಅವರು 2022 ರಲ್ಲಿ ಟೆಸ್ಟ್ ತಂಡದ ನಾಯಕತ್ವ ವಹಿಸಿಕೊಂಡ ಬಳಿಕ ಭಾರತ ಒಟ್ಟು 10 ಪಂದ್ಯಗಳನ್ನು ಆಡಿದೆ. ಇದರಲ್ಲಿ ಮೂರು ಪಂದ್ಯಗಳಲ್ಲಿ ರೋಹಿತ್ ಕಣಕ್ಕಿಳಿದಿರಲಿಲ್ಲ. ಏಳು ಟೆಸ್ಟ್‌ಗಳಲ್ಲಿ ಅವರು 35.45ರ ಸರಾಸರಿಯಲ್ಲಿ 390 ರನ್ ಗಳಿಸಿದ್ದಾರೆ. 11 ಇನಿಂಗ್ಸ್‌ಗಳಲ್ಲಿ ಒಂದು ಶತಕ ಮಾತ್ರ ಹೊಡೆದಿದ್ದಾರೆ. ಇನ್ನುಳಿದ ಇನಿಂಗ್ಸ್‌ಗಳಲ್ಲಿ 50ಕ್ಕಿಂತ ಹೆಚ್ಚಿನ ಮೊತ್ತ ಪೇರಿಸಿಲ್ಲ.

ಭಾರತ ತಂಡವು ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ಎರಡು ಟೆಸ್ಟ್, ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳ ಸರಣಿಯಲ್ಲಿ ಆಡಲಿದೆ. ಕೊನೆಯ ಎರಡು ಟಿ20 ಪಂದ್ಯಗಳು ಅಮೆರಿಕದಲ್ಲಿ ನಡೆಯಲಿವೆ.

ಪ್ರವಾಸದ ವೇಳಾಪಟ್ಟಿ

ಜುಲೈ 12–16: ಮೊದಲ ಟೆಸ್ಟ್ (ಡೊಮಿನಿಕಾ)
ಜುಲೈ 20–24: ಎರಡನೇ ಟೆಸ್ಟ್ (ಟ್ರಿನಿಡಾಡ್)
ಮೂರು ಏಕದಿನ ಪಂದ್ಯಗಳು: ಜುಲೈ 27 (ಬಾರ್ಬಡಸ್), ಜುಲೈ 29 (ಬಾರ್ಬಡಸ್), ಆ.1 (ಟ್ರಿನಿಡಾಡ್)
ಐದು ಟಿ20 ಪಂದ್ಯಗಳು: ಆ.3 (ಟ್ರಿನಿಡಾಡ್), ಆ.6 (ಗಯಾನ), ಆ.8 (ಗಯಾನ), ಆ.12 (ಲಾಡೆರ್‌ಹಿಲ್, ಅಮೆರಿಕ), ಆ. 13 (ಲಾಡೆರ್‌ಹಿಲ್)

ವಾಲಿಬಾಲ್: ಅಡ್‌ಹಾಕ್ ಸಮಿತಿಗೆ ರಾಜ್‌ಪಾಲ್ ಮುಖ್ಯಸ್ಥ

ನವದೆಹಲಿ (ಪಿಟಿಐ): ಭಾರತ ಡೇವಿಡ್ ಕಪ್ ಟೆನಿಸ್ ತಂಡದ ನಾಯಕ ರೋಹಿತ್ ರಾಜ್‌ಪಾಲ್ ಅವರನ್ನು ಭಾರತ ವಾಲಿಬಾಲ್ ಫೆಡರೇಷನ್‌ನ ದೈನಂದಿನ ಆಡಳಿತ ನೋಡಿಕೊಳ್ಳಲು ನೇಮಿಸಿರುವ ನಾಲ್ವರು ಸದಸ್ಯರ ಅಡ್‌ಹಾಕ್ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

ರಾಜ್‌ಪಾಲ್ ನೇಮಕದ ವಿಷಯವನ್ನು ಐಒಎ ಸಿಇಒ ಆಗಿರುವ ಕಲ್ಯಾಣ್ ಚೌಬೆ ಅವರು ಅಂತರರಾಷ್ಟ್ರೀಯ ವಾಲಿಬಾಲ್ ಫೆಡರೇಷನ್ (ಎಫ್‌ಐವಿಬಿ), ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ, ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ ಮತ್ತು ಕೇಂದ್ರ ಕ್ರೀಡಾ ಸಚಿವಾಲಯಕ್ಕೆ ಪತ್ರ ಮುಖೇನ ತಿಳಿಸಿದ್ದಾರೆ.

ರಾಜ್‌ಪಾಲ್ ನೇತೃತ್ವದ ಅಡ್‌ಹಾಕ್ ಸಮಿತಿಯಲ್ಲಿ ಅಲಕಾನಂದ ಅಶೋಕ್ (ಜಂಟಿ ಕಾರ್ಯದರ್ಶಿ, ಐಒಎ), ಎಸ್. ಗೋಪಿನಾಥ್ (ನಿವೃತ್ತ ಐಪಿಎಸ್ ಅಧಿಕಾರಿ) ಮತ್ತು ಸ್ಟೀಫನ್ ಬಾಕ್ (ಎಫ್‌ಐವಿಬಿ ಕಾನೂನು ವಿಭಾಗದ ಮುಖ್ಯಸ್ಥ) ಅವರು ಸದಸ್ಯರಾಗಿದ್ದಾರೆ.

ಭಾರತ ವಾಲಿಬಾಲ್ ಫೆಡರೇಷನ್‌ನ ಚುನಾವಣೆ ನಡೆದು ನೂತನ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರುವವರೆಗೆ ಅಡ್‌ಹಾಕ್ ಸಮಿತಿ ದೈನಂದಿನ ವ್ಯವಹಾರ ನೋಡಿಕೊಳ್ಳಲಿದೆ.

ಸಿಂಧು, ಪ್ರಣಯ್ ಮುನ್ನಡೆ

ಇಂಡೊನೇಷ್ಯಾ ಓಪನ್: ಸಾತ್ವಿಕ್– ಚಿರಾಗ್ ಶುಭಾರಂಭ

ಜಕಾರ್ತ (ಪಿಟಿಐ): ಪಿ.ವಿ. ಸಿಂಧು ಮಂಗಳವಾರ ಆರಂಭಗೊಂಡ ಇಂಡೊನೇಷ್ಯಾ ಓಪನ್ ಬಿಡಬ್ಲ್ಯುಎಫ್ ಸೂಪರ್– 1000 ಟೂರ್ನಿಯ ಮಹಿಳೆಯ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಇಂಡೋನೇಷ್ಯಾದ ಗ್ರೆಗರಿಯಾ ಮರಿಸ್ಕಾ ತನ್‌ಜುಂಗ್ ಅವರನ್ನು ಮಣಿಸಿದರು.

ಕಳೆದ ಎರಡು ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದ ಭಾರತದ ಆಟಗಾರ್ತಿ 38 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಗ್ರೆಗರಿಯಾ ಅವರನ್ನು 21–19, 21–15ರಲ್ಲಿ ಸೋಲಿಸಿ, ಪ್ರೀ ಕ್ವಾಟರ್‌ಫೈನಲ್ ಪ್ರವೇಶಿಸಿದರು.

ಗ್ರೆಗರಿಯಾ ಮತ್ತು ಸಿಂಧು ಈ ವರ್ಷ ಮೂರನೇ ಬಾರಿ ಮುಖಾಮುಖಿಯಾಗಿದ್ದು, ಇದೇ ಮೊದಲ ಬಾರಿ ಭಾರತದ ಆಟಗಾರ್ತಿ ಜಯಗಳಿಸಿದ್ದಾರೆ. ಮ್ಯಾಡ್ರಿಡ್ ಮಾಸ್ಟರ್ಸ್ ಟೂರ್ನಿಯ ಫೈನಲ್‌ನಲ್ಲಿ ಮತ್ತು ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಗ್ರೆಗರಿಯಾ ಗೆಲುವು ಸಾಧಿಸಿದ್ದರು.

ಪ್ರಣಯ್‌ಗೆ ಗೆಲುವು: ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್



ಪಿ.ವಿ.ಸಿಂಧು

ಕೂಡ ಶುಭಾರಂಭ ಮಾಡಿದ್ದು, ಮೊದಲ ಸುತ್ತಿನಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ಅವನ್ನು ಮಣಿಸಿದರು. 50 ನಿಮಿಷ ನಡೆದ ಪಂದ್ಯದಲ್ಲಿ 21–16, 21–14ರಲ್ಲಿ ಗೆಲುವು ಸಾಧಿಸಿದರು. ಭಾರತದ ಆಟಗಾರ ಮುಂದಿನ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಆಂಗಸ್ ಲಾಂಗ್ ಅವರನ್ನು ಎದುರಿಸಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿಯು, ಎದುರಾಳಿಗಳಾದ ಮಾರ್ಕಸ್ ಫೆರ್ನಾಲ್ಡಿ ಗಿಡಿಯೊನ್ ಮತ್ತು ಕೆವಿನ್ ಸುಕಮುಲ್ಜೊ (ಇಂಡೊನೇಷ್ಯಾ) ಅವರು ಗಾಯಾಳಾಗಿ ಅರ್ಧದಲ್ಲೇ ಹಿಂದೆ ಸರಿದ ಕಾರಣ ಮುಂದಿನ ಸುತ್ತು ಪ್ರವೇಶಿಸಿದರು. ಈ ವೇಳೆ ಭಾರತದ ಜೋಡಿ 21–12, 11–7ರಿಂದ ಮುಂದಿತ್ತು.

ಸೋಲು: ಎಂ.ಆರ್.ಅರ್ಜುನ್– ಧ್ರುವ್ ಕಪಿಲಾ ಜೋಡಿ 21–12, 6–21, 20–22ರಲ್ಲಿ ಮಲೇಷ್ಯಾದ ಇ.ವೈ.ಟಿಯೊ–ವೈ.ಎಸ್.ಒಂಗ್ ಜೋಡಿ ಎದುರು ಸೋಲನುಭವಿಸಿತು.

ಮಹಿಳೆಯರ ಡಬಲ್ಸ್‌ನಲ್ಲಿ ಟ್ರೀಶಾ ಜೋಳಿ ಹಾಗೂ ಗಾಯತ್ರಿ ಗೋಪಿಚಂದ್ ಜೋಡಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿತು. ಜಪಾನ್‌ನ ರಿನ್ ಇವಾನಾಗ ಮತ್ತು ಕೀ ನಕನಿಶಿ ಜೋಡಿಯ ಎದುರು 22–20, 12–21, 16–21ರಲ್ಲಿ ಸೋಲೊಪ್ಪಿಕೊಂಡಿತು.

ವಿಶ್ವಕಪ್ ಸ್ಕ್ವಾಷ್: ಭಾರತ ಶುಭಾರಂಭ

ಚೆನ್ನೈ (ಪಿಟಿಐ): ಎರಡನೆ ಶ್ರೇಯಾಂಕ ಹೊಂದಿರುವ ಭಾರತ ತಂಡದವರು ವಿಶ್ವಕಪ್ ಸ್ಕ್ವಾಷ್ ಟೂರ್ನಿಯಲ್ಲಿ ಹಾಂಗ್‌ಕಾಂಗ್ ತಂಡವನ್ನು 4–0 ರಲ್ಲಿ ಮಣಿಸಿ ಶುಭಾರಂಭ ಮಾಡಿದರು.

ಮಂಗಳವಾರ ನಡೆದ ಮೊದಲ ಪಂದ್ಯದಲ್ಲಿ ಅಭಯ್ ಸಿಂಗ್ 7-2, 7-3, 7-6 ರಿಂದ ಚುಂಗ್ ಯಾತ್ ಲಾಂಗ್ ಅವರನ್ನು ಮಣಿಸಿ ಭಾರತಕ್ಕೆ ಗೆಲುವಿನ ಆರಂಭ ನೀಡಿದರು.

ಅನುಭವಿ ಜೋಶ್ನಾ ಚಿಣ್ಣಪ್ಪ 7-1, 7-5, 7-6 ರಿಂದ ಹೇಯ್ಲಿ ಫುಂಗ್ ವಿರುದ್ಧ ಗೆದ್ದು 2–0 ರಲ್ಲಿ ಮುನ್ನಡೆ ತಂದಿತ್ತರು.

ಬಳಿಕ ನಡೆದ ಪಂದ್ಯದಲ್ಲಿ ಸೌರವ್ ಘೋಷಲ್ 5–7, 7–2, 7–5, 7–1 ರಿಂದ ತೊ ಯು ಲಿಂಗ್ ಅವರನ್ನು ಪರಾಭವಗೊಳಿಸಿದರೆ, ತನ್ವಿ ಖನ್ನಾ ಮೊದಲ ಎರಡು ಗೇಮ್‌ಗಳನ್ನು ಕಳೆದುಕೊಂಡರೂ, ಮರುಹೋರಾಟ ನಡೆಸಿ 5-7, 6-7, 7-1, 7-4, 7-3 ರಿಂದ ತ್ಸೆ ಯೀ ಲಾಮ್ ವಿರುದ್ಧ ಗೆದ್ದರು.

ಭಾರತ ತಂಡ ‘ಬಿ’ ಗುಂಪಿನ ತನ್ನ ಮುಂದಿನ ಪಂದ್ಯದಲ್ಲಿ ಬುಧವಾರ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ದಿನದ ಮತ್ತೊಂದು ಪಂದ್ಯದಲ್ಲಿ ಅಗ್ರಶ್ರೇಯಾಂಕದ ಈಜಿಪ್ಟ್ ತಂಡ 4–0 ರಲ್ಲಿ ಆಸ್ಟ್ರೇಲಿಯಾ ತಂಡವನ್ನು ಪರಾಭವಗೊಳಿಸಿತು.

ಶ್ರೇಯಾಂಕಾ ದಾಳಿಗೆ ಕುಸಿದ ಹಾಂಗ್‌ಕಾಂಗ್

ಹಾಂಗ್‌ಕಾಂಗ್ (ಪಿಟಿಐ): ಕನ್ನಡತಿ ಶ್ರೇಯಾಂಕಾ ಪಾಟೀಲ (2 ರನ್ನಿಗೆ 5 ವಿಕೆಟ್) ಅವರ ಅಮೋಘ ಬೌಲಿಂಗ್ ನೆರವಿನಿಂದ ಭಾರತ ತಂಡ ಮಂಗಳವಾರ ಆರಂಭಗೊಂಡ 23 ವರ್ಷದೊಳಗಿನ ಮಹಿಳಾ ಎಮರ್ಜಿಂಗ್ ಏಷ್ಯಾ ಕಪ್ ಟಿ–20 ಕ್ರಿಕೆಟ್ ಟೂರ್ನಿಯಲ್ಲಿ ಆತಿಥೇಯ ಹಾಂಗ್‌ಕಾಂಗ್ ತಂಡವನ್ನು 9 ವಿಕೆಟ್‌ಗಳಿಂದ ಸುಲಭವಾಗಿ ಸೋಲಿಸಿತು.

ಮಹಿಳೆಯರ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆರ್‌ಸಿಬಿ ತಂಡದಲ್ಲಿ ಆಡಿ ಗಮನ ಸೆಳೆದಿದ್ದ 20 ವರ್ಷದ ಶ್ರೇಯಾಂಕಾ ಇಲ್ಲಿ ನಡೆದ ಮೊದಲ ಪಂದ್ಯದಲ್ಲಿ ಆತಿಥೇಯ ತಂಡದ ಪತನದಲ್ಲಿ ಪ್ರಮುಖ ಪಾತ್ರ ವಹಿಸಿದರು. ಹಾಂಗ್‌ಕಾಂಗ್ 14 ಓವರ್‌ಗಳಲ್ಲಿ 34 ರನ್ ಗಳಿಸಿ ಆಲೌಟ್ ಆಯಿತು.

ಮನ್ನತ್ ಕಶ್ಯಪ್ ಮತ್ತು ಪಾರ್ಶವಿ ಚೋಪ್ರಾ ತಲಾ ಎರಡು ವಿಕೆಟ್ ಗಳಿಸಿದರು. ಸುಲಭ ಗುರಿಯನ್ನು ಬೆನ್ನತ್ತಿದ ಭಾರತದ ಆಟಗಾರ್ತಿಯರು 5.2 ಓವರ್‌ಗಳಲ್ಲಿ ಗುರಿ ತಲುಪಿದರು.

ಸಂಕ್ಷಿಪ್ತ ಸ್ಕೋರ್: ಹಾಂಗ್‌ಕಾಂಗ್: 14 ಓವರುಗಳಲ್ಲಿ 34ಕ್ಕೆ (ಶ್ರೇಯಾಂಕ ಪಾಟೀಲ್ 5/2, ಮನ್ನತ್ ಕಶ್ಯಪ್ 2ಕ್ಕೆ2, ಪಾರ್ಶವಿ ಚೋಪ್ರಾ 12ಕ್ಕೆ2); ಭಾರತ 5.2 ಓವರ್‌ಗಳಲ್ಲಿ 1 ವಿಕೆಟ್‌ಗೆ 38 (ಗೊಂಗಡಿ ತ್ರಿಷಾ ಔಟಾಗದೇ 19).

ವಿಶ್ವ ವಯೋವರ್ಗ ಚೆಸ್: ಶರ್ವಾನಿಕಾಗೆ ಕಂಚಿನ ಪದಕ

ಬೆಂಗಳೂರು: ಭಾರತದ ಶರ್ವಾನಿಕಾ, ಜಾರ್ಜಿಯಾದ ಬಟುಮಿಯಲ್ಲಿ ಸೋಮವಾರ ಮುಕ್ತಾಯಗೊಂಡ ಎಂಟು ವರ್ಷದೊಳಗಿನವರ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾಳೆ.

ತಮಿಳುನಾಡಿನ ಅರಿಯಾಲೂರು ಜಿಲ್ಲೆಯ ಉದಯರ್‌ಪಾಳಯಂ ಗ್ರಾಮದ ಶರ್ವಾನಿಕಾ ಡಿಸೆಂಬರ್‌ನಲ್ಲಿ ನಡೆದ 16ನೇ ಏಷ್ಯನ್ ಶಾಲೆಗಳ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ 7 ವರ್ಷದೊಳಗಿನವರ ವಿಭಾಗದಲ್ಲಿ ಮೂರು ಪ್ರಶಸ್ತಿಗಳನ್ನು (ರ್‍ಯಾಪಿಡ್, ಬ್ಲಿಟ್ಜ್ ಮತ್ತು ಕ್ಲಾಸಿಕಲ್) ಪಡೆದಿದ್ದಳು.

ಈ ಅಟಗಾರ್ತಿ ಹಟ್ಸನ್ ಚೆಸ್ ಅಕಾಡೆಮಿಯಲ್ಲಿ ಗ್ರ್ಯಾಂಡ್‌ಮಾಸ್ಟರ್ ವಿಷ್ಣುಪ್ರಸನ್ನ ಅವರಿಂದ ತರಬೇತಿ ಪಡೆಯುತ್ತಿದ್ದಾಳೆ.

ಪ್ಯಾರಾ ಬ್ಯಾಡ್ಮಿಂಟನ್ ತಂಡಕ್ಕೆ ಆನಂದ ಕುಮಾರ್ ಕೋಚ್

ಬೆಂಗಳೂರು: ಕೆನಡಾದಲ್ಲಿ ನಡೆಯಲಿರುವ ಪ್ಯಾರಾ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾಗವಹಿಸಲಿರುವ ಭಾರತ ಪ್ಯಾರಾ ಬ್ಯಾಡ್ಮಿಂಟನ್ ತಂಡಕ್ಕೆ ಕರ್ನಾಟಕದ ಬಿ.ಆನಂದ ಕುಮಾರ್ ಅವರನ್ನು ಕೋಚ್ ಆಗಿ ಆಯ್ಕೆ ಮಾಡಲಾಗಿದೆ. ಈ ಟೂರ್ನಿ ಇದೇ 14 ರಿಂದ 18ರವರೆಗೆ ನಡೆಯಲಿದೆ.

ಉತ್ತರ ಪ್ರದೇಶದಲ್ಲಿ ಐಎಎಸ್ ಅಧಿಕಾರಿಯಾಗಿರುವ ಕರ್ನಾಟಕ ಮೂಲದ ಸುಹಾಸ್ ಯತಿರಾಜ್ 12 ಮಂದಿಯ ತಂಡದಲ್ಲಿ ಇದ್ದಾರೆ.

ತಂಡ ಹೀಗಿದೆ: ಮನದೀಪ್ ಕೌರ್, ನಿತ್ಯಶ್ರೀ, ಮನೋಜ್ ಸರ್ಕಾರ್, ತರುಣ್ ಧಿಲ್ಲೋನ್, ಮನಿಶಾ ರಾಮದಾಸ್, ಸುಖಾಂತ ಕದಂ, ಮಾನಸಿ ಜೋಶಿ, ಪ್ರಮೋದ್ ಭಗತ್, ನಿತೇಶ್ ಕುಮಾರ್, ಸುಹಾಸ್ ಯತಿರಾಜ್, ಪಾರುಲ್ ಪರಮಾರ್, ಕೃಷ್ಣ ನಗರ್.

ಮೀರಾ, ಬಿಂದ್ಯಾಗೆ ಅಮೆರಿಕದಲ್ಲಿ ತರಬೇತಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಪದಕ ವಿಜೇತೆ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಮತ್ತು ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತೆ ಬಿಂದ್ಯಾರಾಣಿ ದೇವಿ ಅವರು ಏಷ್ಯನ್ ಗೇಮ್ಸ್‌ಗೆ ಪೂರ್ವಭಾವಿಯಾಗಿ ಅಮೆರಿಕದಲ್ಲಿ ತರಬೇತಿ ಪಡೆಯುವ ಪ್ರಸ್ತಾವಕ್ಕೆ ಕೇಂದ್ರ ಕ್ರೀಡಾ ಸಚಿವಾಲಯ ಒಪ್ಪಿಗೆ ನೀಡಿದೆ.

ಇಬ್ಬರು ವೇಟ್‌ಲಿಫ್ಟರ್‌ಗಳ ಈ ಪ್ರಸ್ತಾವಕ್ಕೆ ಮಿಷನ್ ಒಲಿಂಪಿಕ್ ಸೆಲ್‌ನ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಅವರಿಗೆ ಅಮೆರಿಕದ ಸೇಂಟ್ ಲೂಯಿ ಸ್ಟ್ವಾಕ್ಟ್ ವಿಶ್ವವಿದ್ಯಾಲಯದಲ್ಲಿ ಡಾ.ಆ್ಯರನ್ ಹಾರ್ಶಿಗ್ ತರಬೇತಿ ನೀಡುವರು.

65 ದಿನಗಳ ಕಾಲ ನಡೆಯುವ ತರಬೇತಿಯ ವೇಳೆ ಭಾರತದ ಮುಖ್ಯ ಕೋಚ್ ವಿಜಯ್ ಶರ್ಮಾ ಮತ್ತು ಫಿಸಿಯೋ ತೆಸ್ನಿಮ್ ಜಯ್ಯದ್ ಭಾಗವಹಿಸುವರು.



ಜಪಾನ್‌ನಲ್ಲಿ ಭಾನುವಾರ ಕೊನೆಗೊಂಡ ಮಹಿಳೆಯರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಚಾಂಪಿಯನ್ ಆದ ಭಾರತ ತಂಡದ ಆಟಗಾರ್ತಿಯರು ಮಂಗಳವಾರ ಬೆಂಗಳೂರಿಗೆ ಬಂದಿಳಿದಾಗ ಅದ್ದೂರಿ ಸ್ವಾಗತ ನೀಡಲಾಯಿತು –ಪಿಟಿಐ ಚಿತ್ರ

ತಂಡದಲ್ಲಿ ಸ್ಥಾನ ಭದ್ರವೆಂದು ಭಾವಿಸಬೇಡಿ

ಹಾಕಿ: ಹಿರಿಯ ಆಟಗಾರ್ತಿಯರಿಗೆ ಕೋಚ್ ಶೋಪ್‌ಮನ್ ಕಿವಿಮಾತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿ ಗೆದ್ದ ಭಾರತ ತಂಡದಲ್ಲಿರುವ ಕೆಲವು ಆಟಗಾರ್ತಿಯರು ಮುಂಬರುವ ಏಷ್ಯನ್ ಕ್ರೀಡಾಕೂಟಕ್ಕೆ ಸೀನಿಯರ್ ತಂಡದಲ್ಲಿ ಸ್ಥಾನ ಪಡೆಯಲು ಪೈಪೋಟಿಯಲ್ಲಿದ್ದಾರೆ ಎಂದು ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ಹೇಳಿದ್ದಾರೆ.

‘ಏಷ್ಯನ್ ಕ್ರೀಡಾಕೂಟದ ಹಾಕಿ ತಂಡದಲ್ಲಿ ತಮ್ಮ ಸ್ಥಾನ ಭದ್ರ ಎಂಬುದಾಗಿ ಭಾವಿಸಬೇಕಿಲ್ಲ’ ಎಂದು ಅವರು ಸೀನಿಯರ್ ತಂಡದ ಆಟಗಾರ್ತಿಯರನ್ನು ಎಚ್ಚರಿಸಿದ್ದಾರೆ.

‘ನಮ್ಮ ಸೀನಿಯರ್ ತಂಡ ಬಲಿಷ್ಠವಾಗಿರುವುದು ನಿಜ. ಆದರೆ ಏಷ್ಯನ್ ಕ್ರೀಡಾಕೂಟಕ್ಕೆ ತಂಡದ ಆಯ್ಕೆಯ ವೇಳೆ ಜೂನಿಯರ್ ತಂಡದ ಆಟಗಾರ್ತಿಯರನ್ನೂ ಪರಿಗಣಿಸಲಾಗುವುದು. ಜೂನಿಯರ್ ಆಟಗಾರ್ತಿಯರ ವಯಸ್ಸು ಅವರ ಆಯ್ಕೆಗೆ ಅಡ್ಡಿಯಾಗದು’ ಎಂದು ಮಂಗಳವಾರ ನಡೆದ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಪಾನ್‌ನ ಕಕಾಮಿಗಹಾರದಲ್ಲಿ ನಡೆದಿದ್ದ ಜೂನಿಯರ್ ಏಷ್ಯಾ ಕಪ್ ಟೂರ್ನಿಯಲ್ಲಿ ಚಾಂಪಿಯನ್ ಆದ ಭಾರತ ತಂಡದ ಆಟಗಾರ್ತಿಯರು ಮಂಗಳವಾರ ಬೆಂಗಳೂರಿಗೆ ಬಂದಿಳಿದಾಗ ಅದ್ದೂರಿ ಸ್ವಾಗತ ನೀಡಲಾಯಿತು.

ಭಾನುವಾರ ನಡೆದಿದ್ದ ಫೈನಲ್‌ನಲ್ಲಿ ಭಾರತ ತಂಡ 2–1 ರಲ್ಲಿ ನಾಲ್ಕು ಬಾರಿಯ ಚಾಂಪಿಯನ್ ಕೊರಿಯಾ ವಿರುದ್ಧ ಗೆದ್ದು ಚೊಚ್ಚಲ ಟ್ರೋಫಿ ಎತ್ತಿಹಿಡಿದಿತ್ತು. ಮುಖ್ಯ ಕೋಚ್ ಯಾನೆಕ್, ತಂಡಕ್ಕೆ ಮಾರ್ಗದರ್ಶನ ನೀಡಿದ್ದರು.

ಏಷ್ಯನ್ ಕ್ರೀಡಾಕೂಟಕ್ಕೆ ಮಹಿಳಾ ಹಾಕಿ ತಂಡದ ಆಯ್ಕೆಗೆ ಜುಲೈ 15ರ ವರೆಗೆ ಕಾಲಾವಕಾಶ ಇದೆಯಾದರೂ, ಈ ತಿಂಗಳ ಒಳಗಾಗಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ಯಾನೆಕ್ ನುಡಿದರು. ಏಷ್ಯನ್ ಕ್ರೀಡಾಕೂಟ ಚೀನಾದ ಹಾಂಗ್‌ಜೌನಲ್ಲಿ ಇದೇ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಡೆಯಲಿದೆ.

‘ನಾವು ಪ್ರಮುಖ ಟೂರ್ನಿಗಳಿಗೆ ತಂಡವನ್ನು ಬೇಗನೇ ಪ್ರಕಟಿಸುತ್ತೇವೆ. ಈ ತಿಂಗಳಲ್ಲಿ ಆಯ್ಕೆ ಟ್ರಯಲ್ಸ್ ಇದ್ದು, ಆಟಗಾರ್ತಿಯರು ಅಲ್ಲಿ ಉತ್ತಮ ಪ್ರದರ್ಶನ ನೀಡಬೇಕಿದೆ’ ಎಂದರು.

‘ಏಷ್ಯನ್ ಕ್ರೀಡಾಕೂಟದ ತಂಡದ ಆಯ್ಕೆಗೆ ಆಟಗಾರ್ತಿಯರ ವಯಸ್ಸು ನಿರ್ಣಾಯಕ ಅಂಶ ಅಲ್ಲ. ಜೂನಿಯರ್ ಏಷ್ಯಾ ಕಪ್ ನಾವು ಗೆದ್ದಿದ್ದೇವೆ ಎಂದರೆ, ಆಟಗಾರ್ತಿಯರು ಶ್ರೇಷ್ಠ ಸಾಮರ್ಥ್ಯ ತೋರಿದ್ದಾರೆ ಎಂದರ್ಥ. ಆದ್ದರಿಂದ ಅವರ ಪ್ರದರ್ಶನವನ್ನು ಖಂಡಿತವಾಗಿಯೂ ಪರಿಗಣಿಸುತ್ತೇವೆ’ ಎಂದಿದ್ದಾರೆ.

‘ಆಸ್ಟ್ರೇಲಿಯಾ ಪ್ರವಾಸಕ್ಕೆ ತೆರಳಿದ್ದ ಸೀನಿಯರ್ ತಂಡದಲ್ಲಿ ಐವರು ಜೂನಿಯರ್ ಆಟಗಾರ್ತಿಯರಿಗೆ ಅವಕಾಶ ನೀಡಿದ್ದೆವು. ಅಲ್ಲಿ ಪಡೆದ ಅನುಭವ ಅವರಿಗೆ ಏಷ್ಯಾ ಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಲು ನೆರವಾಯಿತು’ ಎಂದರು.

ಅಪ್ಪ–ಅಮ್ಮನಿಗೆ ಸ್ಮಾರ್ಟ್‌ಫೋನ್ ಖರೀದಿಸುವೆ: ಅನು

ನವದೆಹಲಿ (ಪಿಟಿಐ): ಭಾರತ ಜೂನಿಯರ್ ಮಹಿಳಾ ಹಾಕಿ ತಂಡದ ಫಾರ್ವರ್ಡ್ ಆಟಗಾರ್ತಿ ಅನು ಅವರು ಏಷ್ಯಾ ಕಪ್ ಟೂರ್ನಿಯಲ್ಲಿ ಒಟ್ಟು ಒಂಬತ್ತು ಗೋಲುಗಳನ್ನು ಗಳಿಸಿ, ತಂಡದ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಪಂದ್ಯವೊಂದರಲ್ಲಿ ‘ಡಬಲ್ ಹ್ಯಾಟ್ರಿಕ್’ ಸಾಧನೆ ಮಾಡಿದ್ದರಲ್ಲದೆ, ಕೊರಿಯಾ ವಿರುದ್ಧದ ಫೈನಲ್‌ನಲ್ಲಿ ಗೋಲಿನ ಖಾತೆ ತೆರೆದಿದ್ದರು. ಆದರೆ ಅವರ ಆಟವನ್ನು ನೋಡುವ ಅದೃಷ್ಟ ಹೆತ್ತವರಿಗೆ ಇರಲಿಲ್ಲ. ಏಕೆಂದರೆ ಏಷ್ಯಾಕಪ್ ಟೂರ್ನಿಯ ಪಂದ್ಯಗಳು ಟಿ.ವಿ ವಾಹಿನಿಯಲ್ಲಿ ನೇರ ಪ್ರಸಾರ ಇರಲಿಲ್ಲ. ವೆಬ್‌ಸೈಟ್‌ನಲ್ಲಿ ಮಾತ್ರ ನೇರ ಪ್ರಸಾರ ಇತ್ತು.

ಅನು ಹೆತ್ತವರ ಬಳಿಕ ಸ್ಮಾರ್ಟ್‌ಫೋನ್ ಇಲ್ಲದ ಕಾರಣ, ನೇರ ಪ್ರಸಾರ ವೀಕ್ಷಿಸಲು ಅಗಿಲ್ಲ. ಇದೀಗ ಹೆತ್ತವರಿಗೆ ಸ್ಮಾರ್ಟ್‌ಫೋನ್ ಖರೀದಿಸಿಕೊಡಲು ಅನು ನಿರ್ಧರಿಸಿದ್ದಾರೆ.

‘ನಮ್ಮದು ಬಡ ಕುಟುಂಬ. ತಂದೆಯವರು ಹೊಲದಲ್ಲಿ, ಇಟ್ಟಿಗೆ ಕಾರ್ಖಾನೆಯಲ್ಲಿ ಕೆಲಸ ಮಾಡುವರು. ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಎಷ್ಟೋ ಸಲ ಹಸಿದ ಹೊಟ್ಟೆಯಲ್ಲಿ ಮಲಗಿದ್ದೇವೆ. ಹೆತ್ತವರು ನನಗಾಗಿ ಸಾಕಷ್ಟು ತ್ಯಾಗ ಮಾಡಿದ್ದಾರೆ. ಈಗ ಅವರಿಗೊಂದು ಸ್ಮಾರ್ಟ್ ಫೋನ್ ಖರೀದಿಸಿ ಕೊಡಬೇಕು. ನಾನು ಮುಂದೆ ಆಡಲಿರುವ ಪಂದ್ಯಗಳನ್ನು ಅವರು ವೀಕ್ಷಿಸಬೇಕು’ ಎಂದು ಅನು ಭಾವುಕರಾಗಿ ಹೇಳಿದರು.

ಹೆರಿಗೆ ವೇಳೆ ಮೃತಪಟ್ಟ ಅಮೆರಿಕದ ಅಥ್ಲೀಟ್ ಟೋರಿ ಬೋವಿ

ಲಾಸ್ ಏಂಜಲಿಸ್ (ಎಎಫ್‌ಪಿ): ಒಲಿಂಪಿಕ್ ಪದಕ ವಿಜೇತೆ ಹಾಗೂ 100 ಮೀ. ಓಟದ ಮಾಜಿ ವಿಶ್ವ ಚಾಂಪಿಯನ್ ಟೋರಿ ಬೋವಿ ಅವರು ಹೆರಿಗೆಯ ವೇಳೆ ಅದ ಕ್ಲಿಷ್ಟ ಸಮಸ್ಯೆಗಳಿಂದ ಮೃತಪಟ್ಟಿದ್ದಾರೆ ಎಂದು ಅಮೆರಿಕದ ಮಾಧ್ಯಮಗಳು ಸೋಮವಾರ ವರದಿಮಾಡಿವೆ.

ಕಳೆದ ತಿಂಗಳು ಫ್ಲಾರಿಡಾದ ಆರೆಂಜ್ ಕೌಂಟಿಯ ಮನೆಯಲ್ಲಿ ಬೋವಿ ಅವರು ಮೃತಪಟ್ಟಿರುವುದು ಕಂಡುಬಂದಿತ್ತು. (ಅವರು ಮೇ 3ರಂದು ಮೃತಪಟ್ಟಿರುವುದಾಗಿ ರಾಯಿಟರ್ಸ್ ವರದಿ ತಿಳಿಸಿದೆ).

ಬೋವಿ 8 ತಿಂಗಳ ಗರ್ಭಿಣಿಯಾಗಿದ್ದು, ಹೆರಿಗೆಯ ವೇಳೆ ಅಸುನೀಗಿದ್ದಾರೆ ಎಂದು ಆರೆಂಜ್ ಕೌಂಟಿ ವೈದ್ಯಕೀಯ ಅಧಿಕಾರಿ ಹೇಳಿಕೆ ಆಧರಿಸಿ ‘ಯುಎಸ್‌ಎ ಟುಡೇ’ ವರದಿ ಮಾಡಿದೆ. ಉಸಿರಾಟದ ಸಮಸ್ಯೆ ಅಥವಾ ‘ಎಕ್ಲಂಪ್ಸಿಯಾ’ (ಅತಿ ರಕ್ತದೊತ್ತಡದಿಂದ ಕಾಣಿಸಿಕೊಳ್ಳುವ ತೊಂದರೆ) ಸಾವಿಗೆ ಕಾರಣವಾಗಿರಬಹುದು ಎಂದು ವರದಿ ತಿಳಿಸಿದೆ.

ಬೋವಿ ಅವರು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ 4x100 ಮೀ. ರಿಲೇ ಓಟದಲ್ಲಿ ಕೊನೆಯವರಾಗಿ ಓಡಿ ಅಮೆರಿಕ ತಂಡ ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆ ಒಲಿಂಪಿಕ್ಸ್‌ನಲ್ಲಿ ಅವರು 100 ಮೀ. ಓಟದಲ್ಲಿ ರಜತ ಹಾಗೂ 100 ಮೀ. ಓಟದಲ್ಲಿ ಕಂಚಿನ ಪದಕಗಳನ್ನೂ ಗೆದ್ದುಕೊಂಡಿದ್ದರು. ಮರು ವರ್ಷ ಲಂಡನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ100 ಮೀ. ಓಟದಲ್ಲಿ ಅಗ್ರಸ್ಥಾನ ಪಡೆದಿದ್ದರು. 2011ರಲ್ಲಿ ಕಾರ್ಮೆಲಿಟಾ ಜೆಟೆರ್ ಅವರ ನಂತರ ಒಲಿಂಪಿಕ್ಸ್ ಅಥವಾ ವಿಶ್ವ ಚಾಂಪಿಯನ್‌ಷಿಪ್‌ನ 100 ಮೀ. ಓಟದಲ್ಲಿ ವಿಜೇತರಾದ ಏಕೈಕ ಅಮೆರಿಕನ್ ಓಟಗಾರ್ತಿ ಎನಿಸಿದ್ದರು.



ಟೋರಿ ಬೋವಿ

ಕುಸ್ತಿ ಫೆಡರೇಷನ್ ಚುನಾವಣೆ ಜುಲೈ 6ಕ್ಕೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ ಬಹು ನಿರೀಕ್ಷಿತ ಚುನಾವಣೆ ಜುಲೈ 6ರಂದು ನಡೆಯಲಿದೆ ಎಂದು ಚುನಾವಣಾ ಅಧಿಕಾರಿ ಅವರು ಮಂಗಳವಾರ ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ನಿವೃತ್ತ ನ್ಯಾ. ಮಹೇಶ್ ಮಿತ್ತಲ್ ಕುಮಾರ್ ಅವರನ್ನು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಚುನಾವಣಾಧಿಕಾರಿಯನ್ನಾಗಿ ಸೋಮವಾರ ನೇಮಕ ಮಾಡಿತ್ತು.

ಫಲಿತಾಂಶವೂ ಅಂದೇ ಪ್ರಕಟವಾಗಲಿದೆ. 50 ಮಂದಿ ಮತದಾನದ ಹಕ್ಕನ್ನು ಹೊಂದಿದ್ದಾರೆ. ಚುನಾವಣೆಗೆ ಸ್ಪರ್ಧಿಸಲು ಅಭ್ಯರ್ಥಿಗಳು ಜೂನ್ 23 ರಿಂದ 25ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿದೆ. 28ರಂದು ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಜೂನ್ 28 ರಿಂದ ಜುಲೈ 1ರವರೆಗೆ ಅವಕಾಶವಿದೆ. ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಜುಲೈ 2ರಂದು ಪ್ರಕಟಿಸಲಾಗುವುದು.

ಅಧ್ಯಕ್ಷ, ಹಿರಿಯ ಉಪಾಧ್ಯಕ್ಷ, ನಾಲ್ವರು ಉಪಾಧ್ಯಕ್ಷರು, ಮಹಾ ಕಾರ್ಯದರ್ಶಿ, ಖಜಾಂಚಿ, ಇಬ್ಬರು ಜಂಟಿ ಕಾರ್ಯದರ್ಶಿಗಳು, ಐದು ಮಂದಿ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಅಥ್ಲೆಟಿಕ್ಸ್ ಆಯ್ಕೆ ಸಮಿತಿ; ರಂಧಾವಾ ರಾಜೀನಾಮೆ

ನವದೆಹಲಿ (ಪಿಟಿಐ): ದೇಶದ ಟ್ರ್ಯಾಕ್ ಮತ್ತು ಫೀಲ್ಡ್ ಕ್ಷೇತ್ರದ ದಂತಕತೆಯಾಗಿರುವ ಗುರ್ಬಚನ್ ಸಿಂಗ್ ರಂಧಾವಾ ಅವರು ಭಾರತ ಅಥ್ಲೆಟಿಕ್ ಫೆಡರೇಷನ್‌ನ ಆಯ್ಕೆ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ಸಲ್ಲಿಸಿದ್ದಾರೆ.

‘18 ವರ್ಷ ಈ ಸ್ಥಾನದಲ್ಲಿ ಸೇವೆ ಸಲ್ಲಿಸಿದ ನಂತರ ಭಾರತ ಅಥ್ಲೆಟಿಕ್ಸ್ ಫೆಡರೇಷನ್ ಆಯ್ಕೆ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ’ ಎಂದು 84 ವರ್ಷದ ರಂಧಾವಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ‘ವಯೋಸಹಜ ಕಾರಣದಿಂದ ನನಗೆ ಶೇ 100ರಷ್ಟು ತೊಡಗಿಸಿಕೊಳ್ಳಲು ಕಷ್ಟವಾಗುತ್ತಿದೆ’ ಎಂದೂ ಹೇಳಿದ್ದಾರೆ.

ಜಕಾರ್ತಾದಲ್ಲಿ ನಡೆದ 1962ರ ಏಷ್ಯನ್ ಗೇಮ್ಸ್‌ನ ಡೆಕಾಥ್ಲಾನ್‌ನಲ್ಲಿ ಸ್ವರ್ಣ ಪದಕ ಜಯಿಸಿದ್ದ ಅವರು 1964ರ ಟೋಕಿಯೊ ಒಲಿಂಪಿಕ್ ಕ್ರೀಡೆಗಳ 110 ಮೀಟರ್ಸ್ ಹರ್ಡಲ್ಸ್ ಓಟದಲ್ಲಿ ಐದನೇ ಸ್ಥಾನ ಪಡೆದು ಗಮನಾರ್ಹ ಸಾಧನೆ ಪ್ರದರ್ಶಿಸಿದ್ದರು.

‘ಭಾರತದ ಅಥ್ಲೆಟಿಕ್ಸ್ ಕ್ಷೇತ್ರ ಸ್ಫೂರ್ತಿಯುತ ರೀತಿಯಲ್ಲಿ ಬೆಳೆಯುತ್ತಿರುವ ಈ ಸಂದರ್ಭವು ಈ ಸ್ಥಾನಮಾನವನ್ನು ಉತ್ಸಾಹಿ ತರುಣರಿಗೆ ಹಸ್ತಾಂತರ ಮಾಡಲು ಸಕಾಲ ಎಂದು ಭಾವಿಸುತ್ತೇನೆ’ ಎಂದು ತಿಳಿಸಿದ್ದಾರೆ.

ಭಾರತ ಸಾಧಿಸುತ್ತಿರುವ ಪ್ರಗತಿಯ



ಗುರ್ಬಚನ್ ಸಿಂಗ್ ರಂಧಾವಾ

ಬಗ್ಗೆ ಸಂತಸವನ್ನು ವ್ಯಕ್ತಪಡಿಸಿರುವ ಅವರು ನೀರಜ್ ಚೋಪ್ರಾ ಮತ್ತು ಅಂಜು ಬಾಬಿ ಜಾರ್ಜ್ ಅವರ ಹೆಸರನ್ನು ಉಲ್ಲೇಖಿಸಿದರು. ‘ನಾವು ಈಗ ಅಂಜು ಬಾಬಿ ಜಾರ್ಜ್ ಮತ್ತು ನೀರಜ್ ಚೋಪ್ರಾ ಮೂಲಕ ಇಬ್ಬರು ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತರನ್ನು ಹೊಂದಿರುವುದು ತುಂಬಾ ಖುಷಿ ನೀಡುತ್ತಿದೆ. ಚೋಪ್ರಾ ಅವರು 2020ರ ಒಲಿಂಪಿಕ್ಸ್ ಚಿನ್ನ ಗೆದ್ದಿರುವುದು ಈ ಸಂಭ್ರಮಕ್ಕೆ ಇನ್ನಷ್ಟು ಮೆರುಗು ನೀಡಿದೆ’ ಎಂದು ರಂಧಾವಾ ಹೇಳಿದ್ದಾರೆ.

‘ನಾವು ಸ್ವಲ್ಪದರಲ್ಲೇ ಪದಕ ಕಳೆದುಕೊಳ್ಳುತ್ತಿದ್ದೆವು. 1960ರಲ್ಲಿ ನನ್ನ ಸ್ನೇಹಿತ ದಿವಂಗತ ಮಿಲ್ಖಾ ಸಿಂಗ್, 1984ರಲ್ಲಿ ಪಿ.ಟಿ. ಉಷಾ ಅವರಿಗೆ ಪದಕ ಕೈತಪ್ಪಿದ ನಂತರ, ಚೋಪ್ರಾ ನಮ್ಮೆಲ್ಲರ ಕನಸನ್ನು ನನಸು ಮಾಡಿದರು’ ಎಂದರು.

ಜೂನಿಯರ್ ವಿಭಾಗದಲ್ಲೂ ಭಾರತ ಯಶಸ್ಸು ಗಳಿಸುತ್ತಿದೆ. ರಾಷ್ಟ್ರೀಯ ಅಂತರ ಜಿಲ್ಲಾ ಕೂಟದಲ್ಲಿ ಉತ್ತಮ ಪೈಪೋಟಿ ಕಂಡುಬಂದಿತ್ತು. ವಿಶ್ವ ಮತ್ತು ಏಷ್ಯಾ ಮಟ್ಟದ ವಯೋವರ್ಗ ಸ್ಪರ್ಧೆಗಳಲ್ಲೂ ಪದಕಗಳು ಬರುತ್ತಿವೆ ಎಂದರು.

1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ರಂಧಾವಾ ಅವರು ಧ್ವಜಧಾರಿಯಾಗಿದ್ದರು. 2 ದಿನಗಳ ಅವಧಿಯಲ್ಲಿ 4 ರಾಷ್ಟ್ರೀಯ ದಾಖಲೆಗಳನ್ನು ಸ್ಥಾಪಿಸಿದ್ದರು. 1961ರಲ್ಲಿ ಅವರಿಗೆ ಅರ್ಜುನ ಪ್ರಶಸ್ತಿ ಮತ್ತು 2005ರಲ್ಲಿ ಪದ್ಮಶ್ರೀ ಪ್ರಶಸ್ತಿ ಅರಸಿಕೊಂಡು ಬಂದಿತ್ತು.

ಅಥ್ಲೀಟ್, ಕೋಚ್, ಸರ್ಕಾರಿ ವೀಕ್ಷಕ, ಆಯ್ಕೆ ಸಮಿತಿ ಅಧ್ಯಕ್ಷ ಹೀಗೆ ವಿವಿಧ ಹಂತಗಳ ಮೂಲಕ ಅವರು 63 ವರ್ಷ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ.

ದುಲೀಪ್ ಟ್ರೋಫಿ: ದಕ್ಷಿಣ ವಲಯ ತಂಡದಲ್ಲಿ ವಿದ್ವತ್, ವೈಶಾಖ್‌ಗೆ ಸ್ಥಾನ

ಚೆನ್ನೈ (ಪಿಟಿಐ): ಕರ್ನಾಟಕದ ವೇಗದ ಬೌಲರ್‌ಗಳಾದ ವಿದ್ವತ್ ಕಾವೇರಪ್ಪ ಮತ್ತು ವೈಶಾಖ್ ವಿಜಯಕುಮಾರ್ ಅವರು ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ದಕ್ಷಿಣ ವಲಯ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಹನುಮ ವಿಹಾರಿ ಅವರು ಮುನ್ನಡೆಸುವ ತಂಡದಲ್ಲಿ ಮಯಂಕ್ ಅಗರವಾಲ್ ಮತ್ತು ಆರ್.ಸಮರ್ಥ್ ಅವರೂ ಇದ್ದಾರೆ.

ಆರು ವಲಯಗಳ ತಂಡಗಳು ಪಾಲ್ಗೊಳ್ಳುವ ದುಲೀಪ್ ಟ್ರೋಫಿ ಟೂರ್ನಿಯ ಎಲ್ಲ ಪಂದ್ಯಗಳೂ ಬೆಂಗಳೂರಿನಲ್ಲಿ ಆಯೋಜನೆಯಾಗಿವೆ.

ತಂಡ ಹೀಗಿದೆ: ಹನುಮ ವಿಹಾರಿ (ನಾಯಕ), ಮಯಂಕ್ ಅಗರವಾಲ್ (ಉಪನಾಯಕ), ಸಾಯಿ ಸುದರ್ಶನ್, ರಿಕಿ ಭುಯಿ, ಕೆ.ಎಸ್.ಭರತ್, ಆರ್.ಸಮರ್ಥ್, ವಾಷಿಂಗ್ಟನ್ ಸುಂದರ್, ಸಚಿನ್ ಬೇಬಿ, ಪ್ರದೋಶ್ ರಂಜನ್ ಪಾಲ್, ಸಾಯಿ ಕಿಶೋರ್, ವಿದ್ವತ್ ಕಾವೇರಪ್ಪ, ವೈಶಾಖ್ ವಿಜಯಕುಮಾರ್, ಕೆ.ವಿ.ಶಶಿಕಾಂತ್, ದರ್ಶನ್ ಎಂ., ತಿಲಕ್ ವರ್ಮಾ



ವಿದ್ವತ್




ವೈಶಾಖ್

ಅಮೆರಿಕದಲ್ಲೂ ಟ್ರಕ್‌ನಲ್ಲಿ ಸಂಚರಿಸಿದ ರಾಹುಲ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಇತ್ತೀಚೆಗೆ ವಾಷಿಂಗ್ಟನ್‌ನಿಂದ ನ್ಯೂಯಾರ್ಕ್‌ವರೆಗೆ ಟ್ರಕ್‌ನಲ್ಲಿ ಪ್ರಯಾಣಿಸಿದ್ದಾರೆ. ಪ್ರಯಾಣದ ವೇಳೆ ಚಾಲಕನ ಜೊತೆಗೆ ಚರ್ಚಿಸಿ ಭಾರತ ಮೂಲದ ಲಾರಿ ಚಾಲಕರ ನಿತ್ಯದ ಬವಣೆಗಳನ್ನು ತಿಳಿಯಲು ಯತ್ನಿಸಿದ್ದಾರೆ.

ರಾಹುಲ್ ಕೆಲದಿನಗಳ ಹಿಂದೆ ದೆಹಲಿಯಿಂದ ಚಂಡೀಗಢವರೆಗೂ ಟ್ರಕ್‌ನಲ್ಲಿ ಪ್ರಯಾಣಿಸಿ ಚಾಲಕರ ಬವಣೆ ಆಲಿಸಿದ್ದರು. ಈ ಸಂದರ್ಭದಲ್ಲಿಯೇ ಅವರು ಇತ್ತೀಚಿಗೆ ಅಮೆರಿಕ ಪ್ರವಾಸದ ವೇಳೆಯೂ ಟ್ರಕ್‌ನಲ್ಲಿ ಪ್ರಯಾಣಿಸಿದ್ದರು ಎಂಬ ಸಂಗತಿ ಹೊರಬಿದ್ದಿದೆ.



ಭಾರತ, ವಿದೇಶಗಳಲ್ಲಿ ಜನರ ಜೊತೆ ಚರ್ಚಿಸುತ್ತಿರುವ ರಾಹುಲ್‌ಗಾಂಧಿ, ಅಮೆರಿಕದಲ್ಲಿ ವಾಷಿಂಗ್ಟನ್ ಡಿ.ಸಿಯಿಂದ ನ್ಯೂಯಾರ್ಕ್‌ವರೆಗೆ 190 ಕಿ.ಮೀ. ಪ್ರಯಾಣಿಸಿದ್ದು ಚಾಲಕರಾದ ತಲ್ಜಿಂದರ್ ಸಿಂಗ್ ವಿಕ್ಕಿ ಗಿಲ್, ರಂಜೀತ್ ಸಿಂಗ್ ಬನಿಪಾಲ್ ಅವರ ಮಾತುಗಳನ್ನು ಆಲಿಸಿದ್ದಾರೆ. ಪ್ರಯಾಣದ ಅವಧಿಯಲ್ಲಿ ಅಮೆರಿಕದಲ್ಲಿ ಟ್ರಕ್‌ಗಳನ್ನು ಚಾಲಕರ ಸುರಕ್ಷತೆ ಮತ್ತು ಆರಾಮದಾಯಕವಾಗಿ ಇರುವಂತೆ ವಿನ್ಯಾಸಗೊಳಿಸಲಾಗಿದೆ. ಭಾರತದಲ್ಲಿ ಟ್ರಕ್‌ಗಳ ವಿನ್ಯಾಸ ಹೀಗಿಲ್ಲ ಎಂಬ ಸಂಗತಿಯನ್ನು ಅವರು ಕಂಡುಕೊಂಡಿದ್ದಾರೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಹಣದುಬ್ಬರ, ಭಾರತದಲ್ಲಿ ರಾಜಕಾರಣ ಕುರಿತು ಚರ್ಚಿಸಿದರು. ಯಾವುದೇ ಧರ್ಮವು ದ್ವೇಷ ಮಾಡುವುದನ್ನು ಬೋಧಿಸುವುದಿಲ್ಲ ಎಂದು ರಾಹುಲ್ ಗಾಂಧಿ ಅಭಿಪ್ರಾಯಪಟ್ಟರು.

ಭದ್ರತಾ ಮಂಡಳಿ: ಭಾರತಕ್ಕೆ ಕಾಯಂ ಸದಸ್ಯತ್ವಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಭಾರತಕ್ಕೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸದಸ್ಯ ಸ್ಥಾನ ನೀಡಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂಗಳವಾರ ಹೇಳಿದರು.

ವಿಶ್ವಸಂಸ್ಥೆಯ ಶಾಂತಿಪಾಲನೆ ಕಾರ್ಯಕ್ರಮಕ್ಕೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಭಾರತಕ್ಕೆ ಕಾಯಂ ಸದಸ್ಯತ್ವ ನೀಡುವ ಮೂಲಕ ಭದ್ರತಾ ಮಂಡಳಿಯನ್ನು ಹೆಚ್ಚು ಪ್ರಜಾಸತ್ತಾತ್ಮಕ ಹಾಗೂ ಪ್ರಸ್ತುತ ದಿನಮಾನಕ್ಕೆ ತಕ್ಕಂತೆ ಪ್ರಾತಿನಿಧಿಕ ಸಂಸ್ಥೆಯನ್ನಾಗಿ ಮಾಡುವ ಅಗತ್ಯವಿದೆ’ ಎಂದು ಅವರು ಪ್ರತಿಪಾದಿಸಿದರು.

‘ಭಾರತದ ಜನಸಂಖ್ಯೆ ದೊಡ್ಡಪ್ರಮಾಣದಲ್ಲಿದ್ದರೂ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಹೊಂದಿಲ್ಲ. ಇದು ವಿಶ್ವಸಂಸ್ಥೆಯ ಔಚಿತ್ಯವನ್ನೇ ಕುಗ್ಗುವಂತೆ ಮಾಡುತ್ತದೆ’ ಎಂದರು.

ಪ್ರತಿಭಟನೆ ಹಿಂಪಡೆದ ರೈತರು

ಕುರುಕ್ಷೇತ್ರ (ಪಿಟಿಐ): ಸೂರ್ಯಕಾಂತಿ ಬೀಜಕ್ಕೆ ‘ಸೂಕ್ತ ಬೆಲೆ’ ನೀಡುವುದಾಗಿ ಹರಿಯಾಣ ಸರ್ಕಾರ ಭರವಸೆ ನೀಡಿರುವ ಹಿನ್ನೆಲೆಯಲ್ಲಿ, ಜಿಲ್ಲೆಯ ಪಿಪ್ಲಿಯಲ್ಲಿ ನಡೆಸುತ್ತಿದ್ದ ಪ್ರತಿಭಟನೆಯನ್ನು ರೈತರು ಮಂಗಳವಾರ ರಾತ್ರಿ ಹಿಂದಕ್ಕೆ ಪಡೆದರು.

ಸೂರ್ಯಕಾಂತಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು ಎಂದು ಒತ್ತಾಯಿಸಿ ಇಲ್ಲಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ರೈತರು ಕಳೆದ ಎರಡು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು.

‘ಜಿಲ್ಲಾಡಳಿತದೊಂದಿಗೆ ಸಂಜೆ ಮಾತುಕತೆ ನಡೆದ ಬಳಿಕ ರೈತರು ಪ್ರತಿಭಟನೆಯನ್ನು ಕೊನೆಗೊಳಿಸಿದರು’ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ರಾಕೇಶ್ ಟಿಕಾಯತ್ ಹೇಳಿದರು.

ಬಿಹಾರ ಸಚಿವ ಸುಮನ್ ರಾಜೀನಾಮೆ

ನವದೆಹಲಿ: ಮುಂದಿನ ತಿಂಗಳು ಪಟ್ನಾದಲ್ಲಿ ವಿರೋಧ ಪಕ್ಷಗಳ ಸಭೆ ನಿಗದಿಯಾಗಿರುವ ಬೆನ್ನಲ್ಲೇ, ಬಿಹಾರ ಮೈತ್ರಿ ಸರ್ಕಾರದ ಭಾಗವಾಗಿರುವ ಹಿಂದೂಸ್ತಾನಿ ಅವಾಮಿ ಮೋರ್ಚಾ (ಎಚ್‌ಎಎಂ) ಪಕ್ಷದ ಸಂತೋಷ್ ಕುಮಾರ್ ಸುಮನ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಸುಮನ್, ‘ನಮ್ಮ ಪಕ್ಷವನ್ನು ಜೆಡಿಯುನೊಂದಿಗೆ ವಿಲೀನಗೊಳಿಸುವಂತೆ ಒತ್ತಡ ಹೆಚ್ಚುತ್ತಿದೆ. ಪಕ್ಷದ ಸ್ಥಾನ ಮತ್ತು ಅಸ್ತಿತ್ವಕ್ಕೆ ಅಪಾಯವಿದೆ. ಹೀಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ’ ಎಂದು ಅವರು ತಿಳಿಸಿದರು.

ಬಿಯರ್ ಖರೀದಿ: ಮುಸ್ಲಿಂ ಮಹಿಳೆಗೆ ಬೆದರಿಕೆ

ಲಖನೌ: ಮದ್ಯದಂಗಡಿಗೆ ತೆರಳಿ ಬಿಯರ್ ಖರೀದಿಸಿದರು ಎಂಬ ಕಾರಣಕ್ಕೆ ಇಬ್ಬರು ಮುಸ್ಲಿಂ ಮಹಿಳೆಯರಿಗೆ ‘ಶಿರಚ್ಛೇದ ಮಾಡುತ್ತೇವೆ’ ಎಂದು ಅದೇ ಸಮುದಾಯದ ಮೂವರು ಯುವಕರು ಜೀವಬೆದರಿಕೆ ಒಡ್ಡಿರುವ ಘಟನೆ ಇಲ್ಲಿ ನಡೆದಿದೆ. ಮಾರುಕಟ್ಟೆ ಪ್ರದೇಶದ ಮದ್ಯದಂಗಡಿಗೆ ತೆರಳಿದ್ದ ಮುಸ್ಲಿಂ ಮಹಿಳೆಯರು ಎರಡು ಬಿಯರ್ ಖರೀದಿಸಿದ್ದಾರೆ. ಅವರಿಗೆ ಎದುರಾದ ಮುಸ್ಲಿಂ ಯುವಕರು ‘ತಲೆ ತೆಗೆಯುವುದಾಗಿ’ ಬೆದರಿಕೆ ಒಡ್ಡಿದ್ದಾರೆ. ಈ ವಿಡಿಯೊ ಮಂಗಳವಾರ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದೆ.

‘ಇಸ್ಲಾಂ ಪ್ರಕಾರ ಮಹಿಳೆಯರು ಮದ್ಯಪಾನ ಮಾಡುವುದು ಪಾಪ. ನಾನು ಈಗಾಗಲೇ ಜೈಲಿಗೆ ಹೋಗಿದ್ದೇನೆ. ತಲೆ ತೆಗೆಯಲೂ ಚಿಂತಿಸುವುದಿಲ್ಲ‘ ಎಂದು ಒಬ್ಬ ಯುವಕ ಬೆದರಿಕೆ ಒಡ್ಡಿರುವುದು ವಿಡಿಯೊದಲ್ಲಿ ದಾಖಲಾಗಿದೆ.


ಭಾಗ್ಯಗಳ ಸರದಾರ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಸರ್ಕಾರದ ಜೋಡೆತ್ತು
ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿಗಳು
ಶ್ರೀ ಕೆ. ಜೆ. ಜಾರ್ಜ್
ಇಂಧನ ಸಚಿವ
ಶ್ರೀ ವೆಂಕಟರಮಣಪ್ಪ
ಮಾಜಿ ಸಚಿವರು
ಕರ್ನಾಟಕ ರಾಜ್ಯದಲ್ಲಿ ಕಾಂಗ್ರೇಸ್ ಪಕ್ಷವು ಅಧಿಕಾರ
ವಹಿಸಿದ ಬೆನ್ನೆಲ್ಲೆ ಪ್ರಪ್ರಥಮ ಭಾರಿಗೆ ಆಗಮಿಸುತ್ತಿರುವ ರಾಜ್ಯಕಂಡ
ಕೊಟ್ಟ ಮಾತಿಗೆ ತಪ್ಪದ ಏಕೈಕ ರಾಜಕಾರಣಿ, ಕನಕಪುರ ಬಂಡೆ,
ರಾಜಕೀಯ ವಿರೋದಿಗಳ ಉಪ್ಪಟಳಕ್ಕೆ ಎದೆಗುಂದದ ಧೀಮಂತ ನಾಯಕ
ಉಪ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರ್ ಮತ್ತು
ಇಂಧನ ಸಚಿವ ಶ್ರೀ ಕೆ. ಜೆ. ಜಾರ್ಜ್ ರವರಿಗೆ ಪಾವಗಡ ತಾಲ್ಲೂಕು
ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್. ವಿ. ವೆಂಕಟೇಶ್ ಪರವಾಗಿ
ತಾಲ್ಲೂಕಿನ ಕಾಂಗ್ರೇಸ್ ಪಕ್ಷದ ಯುವ ಮುಖಂಡ ಬತ್ತಿನಾನಿ ನಾನಿ
ರವರಿಂದ ಆದರದ ಸ್ವಾಗತ ಕೋರುವವರು...
ಬತ್ತಿನೇನಿ ನಾನಿ
ಕಾಂಗ್ರೇಸ್ ಯುವ ಮುಖಂಡರು
ಹೆಚ್. ವಿ. ವೆಂಕಟೇಶ್
ಶಾಸಕರು ಪಾವಗಡ
ಶುಭ ಕೋರುವವರು: ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಡಿ.ಕೆ. ಶಿವಕುಮಾರ್ ಬಳಗದ ವತಿಯಿಂದ.